

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 17 ಭಾನುವಾರ 2022

ಸಂಪುಟ: 43 | ಸಂಚಿಕೆ: 02 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



2023ರ ವಿಧಾನಸಭಾ ಚುನಾವಣೆಗೆ ಜೆಡಿಎಸ್ ತಯಾರಿ


ಜನತಾ ಜಲಧಾರೆ ಗಂಗಾ ಯಾತ್ರೆ ಆರಂಭ

- ಮಾಜಿ ಪ್ರಧಾನಿ ದೇವೇಗೌಡರಿಂದ ಕಬಿನಿ, ಕೆಆರ್‌ಎಸ್‌ನಲ್ಲಿ ಚಾಲನೆ
- ಹಳೆ ಮೈಸೂರು ಜೆಡಿಎಸ್ ಕಾರ್ಯಕರ್ತರಲ್ಲಿ ಉತ್ಸಾಹ ಇಮ್ಮಡಿ

ಹೆಚ್.ಡಿ.ಕೋಟೆ/ಶ್ರೀರಂಗಪಟ್ಟಣ,ಏ.16(ಮಂಜು, ವಿನಯ್ ಕಾರೇಕುರ)–ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳ ಪೂರ್ಣಗೊಳಿಸುವ ಅಜೆಂಡಾದೊಂದಿಗೆ ಆರಂಭಿಸಲಾಗಿರುವ ಜೆಡಿಎಸ್‌ನ ಮಹತ್ವಾಕಾಂಕ್ಷೆಯ 'ಜನತಾ ಜಲಧಾರೆ' ಗಂಗಾ ಯಾತ್ರೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಹೆಚ್.ಡಿ.ಕೋಟೆ ತಾಲೂಕಿನ ಕಬಿನಿ ಹಾಗೂ ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್ ಜಲಾಶಯದಲ್ಲಿ ಚಾಲನೆ ನೀಡಿದರು.

ಮೊದಲಿಗೆ ಬೆಂಗಳೂರಿನಿಂದ ಹೆಚ್.ಡಿ.ಕೋಟೆ ತಾಲೂಕಿನ ಬೀಚನಹಳ್ಳಿಗೆ ಹೆಲಿಕಾಪ್ಟರ್ ಮೂಲಕ ಆಗಮಿಸಿದ ಅವರು, ಸಾರ್ವಜನಿಕ ಸಭೆ ನಂತರ ಕಬಿನಿ ಜಲಾಶಯದ ಮುಖ್ಯ ದ್ವಾರಕ್ಕೆ ತೆರಳಿದರು. ಅಲ್ಲಿ ಪುರೋಹಿತ ಮಹೇಶ್ ಆರಾಧ್ಯ ಅವರು ಅಭಿಜಿತ್ ಮುಹೂರ್ತದಲ್ಲಿ ಪೂಜೆ ಸಲ್ಲಿಸಿದರು. 21 ಮಹಿಳೆಯರು ಕಳಶಗಳಲ್ಲಿ ಕಬಿನಿ ನೀರು ಸಂಗ್ರಹಿಸಿದ ನಂತರ ಗಂಗೆ ಪೂಜೆ ಮತ್ತು ಗಣಪತಿ ಪೂಜೆ ಮಾಡಲಾಯಿತು. ಮಾಜಿ ಪ್ರಧಾನಿ ದೇವೇಗೌಡರು ಕಬಿನಿ ನೀರನ್ನು ಜನತಾ ಜಲಧಾರೆ ವಾಹನದಲ್ಲಿದ್ದ ಕಳಸಕ್ಕೆ ಸುರಿದು ಯಾತ್ರೆಗೆ ಚಾಲನೆ ನೀಡಿದರು. ಈ ವೇಳೆ ದೇವೇಗೌಡರನ್ನು, ಮಂಗಳವಾದ್ಯ, ನಂದಿಕಂಬ, ಸತ್ತಿಗೆ, ಚಂಡೆವಾದ್ಯದೊಂದಿಗೆ ಸ್ವಾಗತಿಸಲಾಯಿತು. ● 9ನೇ ಪುಟಕ್ಕೆ







ಮೈಸೂರು ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆಗೆ

319.13 ಕೋಟಿ ಬಿಡುಗಡೆ

- ಸಂಸದ ಪ್ರತಾಪ್‌ಸಿಂಹ ಮನವಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನ್ನಣೆ
- 240 ಎಕರೆ ಭೂಮಿ ಕೆಐಎಡಿಬಿ ಮೂಲಕ ಎಎಐಗೆ ಹಸ್ತಾಂತರಿಸಲು ತೀರ್ಮಾನ







ಮೈಸೂರು, ಏ.16–ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆಗಾಗಿ ರಾಜ್ಯ ಸರ್ಕಾರವು 319.13 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ.

ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರ ಕೋರಿಕೆ ಮೇರೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, 2022–23ನೇ ಸಾಲಿನ ಬಜೆಟ್‌ನಲ್ಲಿ ಕೇಂದ್ರ ಸರ್ಕಾರದ ನೆರವಿನೊಂದಿಗೆ ● 9ನೇ ಪುಟಕ್ಕೆ






ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ನಾಡೋಜ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಭಾಷ್ಯಂ ಸ್ವಾಮೀಜಿ ಅವರನ್ನು ಮೈಸೂರು ನಗರದ ಕಾಳಿದಾಸ ರಸ್ತೆಯಲ್ಲಿರುವ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಸಿಇಓ ಕೆ.ಆರ್.ಯೋಗಾನರಸಿಂಹನ್ (ಮುರಳಿ) ಹಂಪಿಯಲ್ಲಿ ಅಭಿನಂದಿಸಿದರು. ಉದ್ಯಮಿ ಸತ್ಯನಾರಾಯಣಸಿಂಗ್, ಶೇಷಾದ್ರಿ ಇದ್ದಾರೆ.

ಸೆಸ್ಕ್ ಜಾಗೃತ ದಳದ ಪೊಲೀಸರಿಂದ ವಿದ್ಯುತ್ ಕಳವು ಪ್ರಕರಣಗಳ ತನಿಖೆ

ಕಳವು ಮಾಡುತ್ತಿರುವುದು ಪತ್ತೆಯಾಗುತ್ತಿದ್ದಂತೆಯೇ ಬಹುತೇಕ ಗ್ರಾಹಕರಿಂದ ದಂಡ ಪಾವತಿಸಿ ಎಫ್‌ಐಆರ್ ಆಗದಂತೆ ಎಚ್ಚರ

ಮೈಸೂರು,ಏ.16(ಆರ್‌ಕೆ)–ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್) ಜಾಗೃತ ದಳ (Vigilance Wing)ದ ಪೊಲೀಸರು ಕಾರ್ಯಾಚರಣೆ ತೀವ್ರಗೊಳಿಸಿದ್ದು, ವಿದ್ಯುತ್ ಕಳವು ಪ್ರಕರಣಗಳ ತನಿಖೆಯನ್ನು ಚುರುಕುಗೊಳಿಸಿದ್ದಾರೆ. ಮೈಸೂರಿನ ಸೆಸ್ಕ್ ವಿಜಿಲೆನ್ಸ್ ವಿಂಗ್ ಎಸ್ಪಿ ವ್ಯಾಪ್ತಿಗೆ ಬರುವ ಮೈಸೂರು, ಚಾಮರಾಜನಗರ, ಕೊಡಗು, ಹಾಸನ ಹಾಗೂ ಮಂಡ್ಯ ಜಿಲ್ಲೆಗಳಲ್ಲಿರುವ ಜಾಗೃತ ದಳದ ಠಾಣೆಗಳ ಇನ್ಸ್‌ಪೆಕ್ಟರ್‌ಗಳು, ಸೆಸ್ಕ್ ತಾಂತ್ರಿಕ ಸಿಬ್ಬಂದಿಗಳ ಸಹಯೋಗದಲ್ಲಿ ಜಂಟಿ ಕಾರ್ಯಾಚರಣೆ ನಡೆಸಿ ಕೈಗಾರಿಕೆ, ಉದ್ದಿಮೆಗಳು, ವಾಣಿಜ್ಯ ಚಟುವಟಿಕೆ ಘಟಕದಂತಹ ಅತೀ ಹೆಚ್ಚು ವಿದ್ಯುತ್ ಬಳಸುವ ಘಟಕಗಳ ಮೇಲೆ ದಾಳಿ ನಡೆಸಿ ಪರಿಶೀಲಿಸುತ್ತಿದ್ದಾರೆ.

ಗ್ರಾಹಕರು ಮಂಜೂರು ಮಾಡಿಸಿಕೊಂಡಿರುವ ಸಾಮರ್ಥ್ಯ ಬಳಸುತ್ತಿರುವ ವಿದ್ಯುತ್ ಪ್ರಮಾಣ ಹಾಗೂ ಮಾಸಿಕ ಬಿಲ್ ಪಾವತಿಸುತ್ತಿರುವ ಶುಲ್ಕ ಇತ್ಯಾದಿಗಳ ಬಗ್ಗೆ ಪರಿಶೀಲಿಸುತ್ತಿರುವುದರಿಂದ ಕೆಲವರು ಅನ್ಯ ಮಾರ್ಗದಿಂದ ವಿದ್ಯುತ್ ಸಂಪರ್ಕ ಪಡೆದು ಅಕ್ರಮವಾಗಿ ಬಳಕೆ ಮಾಡುವ ಮೂಲಕ ನಿಗಮಕ್ಕೆ ವಂಚನೆ ಮಾಡುತ್ತಿರುವುದು ಪತ್ತೆಯಾಗುತ್ತಿದೆ. ವಿದ್ಯುತ್ ಕಳ್ಳತನವಾಗುತ್ತಿರುವುದನ್ನು ಸಾಕ್ಷಿ ಸಮೇತ ಪತ್ತೆ ಮಾಡಿದಾಗ ತಪ್ಪಿನ ಅರಿವಾಗುತ್ತಿದ್ದಂತೆಯೇ ಕಾನೂನಾತ್ಮಕ ತೊಡಕು ನಿಭಾಯಿಸುವುದರಿಂದ ತಪ್ಪಿಸಿಕೊಳ್ಳಲು ಬಹುತೇಕ ಗ್ರಾಹಕರು ಸ್ಥಳದಲ್ಲೇ ದಂಡ ಪಾವತಿಸಿ ಎಫ್‌ಐಆರ್ ಆಗದಂತೆ ಎಚ್ಚರ ವಹಿಸುತ್ತಿರುವುದು ಕಂಡು ಬರುತ್ತಿದೆ.



ಶೇ.60ಕ್ಕೂ ಹೆಚ್ಚು ಮಂದಿ ದಂಡ ಪಾವತಿ ಸುತ್ತಿರುವುದರಿಂದ ಎಫ್‌ಐಆರ್ ದಾಖಲಾಗುವುದು ತಪ್ಪಿದಂತಾಗಿ, ನ್ಯಾಯಾಲಯಗಳಲ್ಲಿ ವಿಚಾರಣೆ ನಡೆಯುವುದು ತಪ್ಪುತ್ತಿದೆ. ಇತ್ತೀಚೆಗೆ ನಡೆದ ಲೋಕ ಅದಾಲತ್‌ನಲ್ಲಿ ನ್ಯಾಯಾಧೀಶರೇ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಒಂದು ವೇಳೆ ದಂಡ ಪಾವತಿಸಲು ನಿರಾಕರಿಸಿ, ವಿದ್ಯುತ್ ಕಳವು ಸಂಬಂಧ ತಕರಾರು ಎತ್ತಿದ ಗ್ರಾಹಕರ ವಿರುದ್ಧ ಎಫ್‌ಐಆರ್ ದಾಖಲಿಸುವ ಪೊಲೀಸರು, ತನಿಖೆ ನಡೆಸಿ, ಸೂಕ್ತ ಸಾಕ್ಷ್ಯಾಧಾರಗಳೊಂದಿಗೆ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸುವರು ಎಂದು ಮೈಸೂರಿನ ಸೆಸ್ಕ್ ಜಾಗೃತ ದಳದ ಡಿವೈಎಸ್ಪಿ ಅನ್ಸರ್ ಅಲಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ತಮ್ಮ ಕಾರ್ಯಾಚರಣೆಯಿಂದ ಅನಧಿಕೃತವಾಗಿ ಸಂಪರ್ಕ ಪಡೆದು ವಿದ್ಯುತ್ ಕಳ್ಳತನವಾಗುವುದು ಪತ್ತೆಯಾದಂತಾಗಿ, ಸೆಸ್ಕ್‌ಗೆ ನಷ್ಟ ಉಂಟಾಗುವುದು ತಪ್ಪುತ್ತದೆಯಲ್ಲದೆ, ಈ ಬಗ್ಗೆ ಜಾಗೃತಿ ಮೂಡಿ ಬಳಸಿದ ವಿದ್ಯುತ್‌ಗೆ ದರ ಪಾವತಿಯಾಗಿ ನಿಗಮಕ್ಕೆ ವರಮಾನವೂ ಹೆಚ್ಚುತ್ತದೆ ಎಂದು ತಿಳಿಸಿದರು.

ಉದ್ಯಮಶೀಲತಾ ಕಾರ್ಯಕ್ರಮ

ಮೈಸೂರು,ಏ.16–ಮೈಸೂರಿನ ಸ್ಫೂರ್ತಿ ಪರ್ಫಾಮೆನ್ಸ್ ಸೆಲ್ಯೂಷನ್ಸ್ ವತಿಯಿಂದ 5 ದಿನಗಳ ಉದ್ಯಮ ಶೀಲತಾ ಕಾರ್ಯಕ್ರಮವನ್ನು ಏ.18ರಿಂದ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಮೂಲ ಮಾದರಿಯ ರಚನೆ, ಸಾಮರ್ಥ್ಯಗಳ ಅಭಿವೃದ್ಧಿ ಮೇಲೆ ಕೇಂದ್ರೀಕರಿಸಿ ತಮ್ಮ ಕಲಿಕೆಯ ಅನುಭವವನ್ನು ಹೆಚ್ಚಿಸುತ್ತದೆ. ಉದ್ಯಮವನ್ನು ಪ್ರಾರಂಭಿಸಲು ಎಲ್ಲಾ ಹಂತದಲ್ಲೂ ಸಹಕಾರ ನೀಡುತ್ತದೆ. ಉದ್ಯಮಶೀಲತೆ ಮತ್ತು ನಾವೀನ್ಯತೆ ಬೇಸಿಗೆ ಕಾರ್ಯಕ್ರಮಕ್ಕೆ ಸೇರಿ ಮತ್ತು ನಿಮ್ಮ ಆಲೋಚನೆಗಳನ್ನು ವಾಸ್ತವಕ್ಕೆ ಹೇಗೆ ಪರಿವರ್ತಿಸುವುದು ಎಂಬುದನ್ನು ತಿಳಿಯಬಹುದು. ಮಾಹಿತಿಗೆ ಮೊ.9741501631 ಸಂಪರ್ಕಿಸಿ.

ಪಿಎಚ್.ಡಿ ಪದವಿ



ಮೈಸೂರು: ಡಾ.ಸರ್ವಮಂಗಳ ಅವರ ಮಾರ್ಗದರ್ಶನದಲ್ಲಿ ಎಂ. ಶೋಭಾ ಶಿಕ್ಷಣ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಇಂದು ಮೈಸೂರಲ್ಲಿ ಕುಸ್ತಿ ಪಂದ್ಯಾವಳಿ

ಯುವಕರನ್ನು ಕುಸ್ತಿಯತ್ತ ಸೆಳೆಯುವ ಪ್ರಯತ್ನ



ಮೈಸೂರು, ಏ.16(ಎಂಟಿವೈ)– ಮೈಸೂರಿನ ಡಿ.ದೇವರಾಜ ಅರಸ್ ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ನಾಳೆ (ಏ.17) ಮಧ್ಯಾಹ್ನ 3 ಗಂಟೆಗೆ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಪೈಲ್ವಾನ್ ಗಿರೀಶ್ ನಕ್ಷತ್ರ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲಾ ಭಾರತೀಯ ಶೈಲಿ ಕುಸ್ತಿ ಸಂಘ, ಜಿಲ್ಲಾ ಕುಸ್ತಿ ಸಂಘ, ಪೈಲ್ವಾನರ ಇತಿಹಾಸ ಗ್ರೂಪ್, ಫತೇಅಲಿ ಗರಡಿ ಟ್ರಸ್ಟ್ ವತಿಯಿಂದ ಆಯೋಜಿಸಿರುವ ಈ ಕುಸ್ತಿ ಪಂದ್ಯಾವಳಿಯಲ್ಲಿ 30 ಜೊತೆ ಕುಸ್ತಿ ಜರುಗಲಿದೆ. ಕಳೆದ ಎರಡು ವರ್ಷಗಳಿಂದ ಕೊರೊನಾ ಸೋಂಕಿನಿಂದಾಗಿ ಯಾವುದೇ ಕುಸ್ತಿ ಪಂದ್ಯಾವಳಿ ನಡೆದಿರಲಿಲ್ಲ. ಇದರಿಂದ ಕುಸ್ತಿ ಪ್ರೇಮಿಗಳಿಗೆ ನಿರಾಸೆಯಾಗಿತ್ತು. ಈ ಹಿನ್ನೆಲೆಯಲ್ಲಿ ಈ ಪಂದ್ಯಾವಳಿ ಆಯೋಜಿಸಲಾಗಿದೆ. ಕುಸ್ತಿಯಲ್ಲಿ ಸಾಧನೆ ಮಾಡಿರುವ ಕುಸ್ತಿ ಪಟುಗಳು ಪಾಲ್ಗೊಳ್ಳುತ್ತಿದ್ದು, ಕುಸ್ತಿ ಪ್ರಿಯರಿಗೆ ಉತ್ತಮ ಮನರಂಜನೆ ದೊರೆಯಲಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಜಿಮ್‌ಗಳು ಹೆಚ್ಚಾದ ಹಿನ್ನೆಲೆಯಲ್ಲಿ ಹೆಚ್ಚು ಶ್ರಮಪಡಬೇಕಾದ ಕುಸ್ತಿ ಪಂದ್ಯಾವಳಿಯತ್ತ ಯುವ ಜನರು ನಿರಾಸಕ್ತಿ ತೋರುತ್ತಿದ್ದಾರೆ. ಹೀಗಾಗಿ ವಿದ್ಯಾರ್ಥಿಗಳಲ್ಲಿ ಕುಸ್ತಿ ಬಗ್ಗೆ ಆಸಕ್ತಿ ಮೂಡಿಸಲು ಯತ್ನಿಸಲಾಗುತ್ತಿದೆ. ಅದರ ಒಂದು ಭಾಗವಾಗಿ ಕುಸ್ತಿ ಪಂದ್ಯಾವಳಿ ನಡೆಸಲಾಗುತ್ತಿದೆ. ಯುವ ಜನರನ್ನು ಕುಸ್ತಿ ಕ್ಷೇತ್ರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸುವ ಪ್ರಯತ್ನವನ್ನು ಗರಡಿಗಳು ಮಾಡುತ್ತಿವೆ. ಅಲ್ಲದೆ, ಗರಡಿಗಳಿಗೆ ಪುನಶ್ಚೇತನ ನೀಡುವುದಕ್ಕೆ ಪೈಲ್ವಾನರು ಮುಂದಾಗಿದ್ದಾರೆ. ಕುಸ್ತಿ ಕಲೆ ನಶಿಸದಂತೆ ನೋಡಿಕೊಳ್ಳುವ ಪ್ರಯತ್ನ ಸಾಗುತ್ತಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಪೈಲ್ವಾನರಾದ ಸ್ಟಾರ್ ವೆಂಕಟೇಶ್, ಮಂಜುನಾಥ್, ಚೋಟಾ ರಫೀಕ್, ಆರ್.ಕೆ.ರವಿ ಇದ್ದರು.

ಹವ್ಯಾಸಿ ಛಾಯಾಗ್ರಾಹಕ ತ್ರಿಪುರಾಂತಕರ ಮೊಬೈಲ್ ಫೋನ್‌ನಲ್ಲಿ ತೆಗೆದ ಛಾಯಾಚಿತ್ರಗಳ ಪ್ರದರ್ಶನ



ಮೈಸೂರು, ಏ.16(ಆರ್‌ಕೆಬಿ)– ಅಂಕಣಕಾರರು ಮತ್ತು ಹವ್ಯಾಸಿ ಛಾಯಾಗ್ರಾಹಕರೂ ಆದ ಜಿ.ಎಲ್.ತ್ರಿಪುರಾಂತಕ ಅವರು ಮೊಬೈಲ್ ಫೋನ್‌ನಲ್ಲಿ ತೆಗೆದ ಛಾಯಾಚಿತ್ರಗಳ ಪ್ರದರ್ಶನಕ್ಕೆ ಮೈಸೂರಿನ ರಾಜೇಂದ್ರ ಭವನದಲ್ಲಿ ಶುಕ್ರವಾರ ಚಾಲನೆ ದೊರೆಯಿತು.

ಹವ್ಯಾಸಿ ಛಾಯಾಗ್ರಾಹಕ ಜಿ.ಎಲ್.ತ್ರಿಪುರಾಂತಕ ಅವರಿಗೆ ಛಾಯಾಚಿತ್ರಗಳನ್ನು ತೆಗೆಯುವ ಗೀಳು. ಹಾಗಾಗಿ ಅವರು ಅಲ್ಲಲ್ಲಿ ತಮಗೆ ಆಕರ್ಷಿಸಿದ ಚಿತ್ರಗಳನ್ನು ತಮ್ಮ ಮೊಬೈಲ್ ಫೋನ್ ಮೂಲಕ ಕ್ಲಿಕ್ಕಿಸಿ ಸಂಗ್ರಹಿಸುವುದು ಅವರ ಹವ್ಯಾಸ. ಅವರು ತೆಗೆದ ಮೈಸೂರು ಅರಮನೆ, ಪಾರಂಪರಿಕ ಕಟ್ಟಡಗಳು, ಪ್ರಕೃತಿ, ಪರಿಸರ, ಪಕ್ಷಿಗಳು, ಮಿಡತೆ, ಜೇಡರ ಬಲೆ ಹೀಗೆ ಹಲವು ಪ್ರಮುಖ ಛಾಯಾಚಿತ್ರಗಳು ಗಮನ ಸೆಳೆದವು.

ಖ್ಯಾತ ಛಾಯಾಗ್ರಾಹಕ ಎಸ್.ಎಂ.ಜಂಬುಕೇಶ್ವರ್, ಅಂತಾರಾಷ್ಟ್ರೀಯ ವನ್ಯಜೀವಿ ಛಾಯಾಗ್ರಾಹಕ ಎಸ್.ತಿಪ್ಪೇಸ್ವಾಮಿ ಇನ್ನಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಬಿ.ಎಸ್.ಹರೀಶ್‌ಗೆ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ



ಮೈಸೂರು, ಏ.16(ಆರ್‌ಕೆ)–ಮೈಸೂರಿನ ಹಿರಿಯ ಪತ್ರಕರ್ತ ಬಿ.ಎಸ್.ಹರೀಶ್, ಸುತ್ತೂರು ಶ್ರೀ ಮಹಾ ಸಂಸ್ಥಾನ ಮಠವು ಕೊಡಮಾಡುವ 2020ನೇ ಸಾಲಿನ ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಮೈಸೂರಿನ ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಏ.18ರಂದು ಬೆಳಗ್ಗೆ 10 ಗಂಟೆಗೆ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಹರೀಶ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಆಡಳಿತ ವಿಭಾಗದ ನಿರ್ದೇಶಕ ಶಂಕರಪ್ಪ, ಹಿರಿಯ ಸಾಹಿತಿ ಹಿ.ಶಿ.ರಾಮಚಂದ್ರೇಗೌಡ, ಶಾಸಕ ಎಸ್.ಎ.ರಾಮದಾಸ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ ತಿಳಿಸಿದ್ದಾರೆ. ಆಂದೋಲನ, ಪ್ರಜಾನುಡಿ, ಉಷಾಕಿರಣ, ವಿಜಯ ಕರ್ನಾಟಕ ಹಾಗೂ ವಿಜಯ ವಾಣಿ ಪತ್ರಿಕೆಗಳಲ್ಲಿ ಸುಮಾರು ನಾಲ್ಕು ದಶಕಗಳ ಕಾಲ ಸೇವೆ ಸಲ್ಲಿಸಿರುವ ಹರೀಶ್ ಅವರನ್ನು ಶ್ರೀಮಠವು ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಗೆ ಆಯ್ಕೆ ಮಾಡಿದೆ ಎಂದು ಅವರು ತಿಳಿಸಿದ್ದಾರೆ.

'ಭಾರತೀಯ ರೈಲ್ವೆಯ ಹಸಿರೀಕರಣ' ಕುರಿತು ನಾಳೆ ಶಾಲಾ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆ

ಮೈಸೂರು, ಏ.16(ಆರ್‌ಕೆಬಿ)– ವಿಶ್ವದಾದ್ಯಂತ ಸಾಂಸ್ಕೃತಿಕ ಪರಂಪರೆಯ ಸ್ಥಳಗಳ ಸಂರಕ್ಷಣೆ ಮತ್ತು ಸುರಕ್ಷತೆಗಾಗಿ ಕೆಲಸ ಮಾಡುವ ವೃತ್ತಿಪರ ಸಂಘವಾದ ಸ್ಮಾರಕಗಳು ಮತ್ತು ತಾಣಗಳ ಅಂತಾರಾಷ್ಟ್ರೀಯ ಮಂಡಳಿ (ICOMOS)ಯು ಏ.18ರಂದು 'ಸ್ಮಾರಕಗಳು ಮತ್ತು ತಾಣಗಳ ಅಂತರರಾಷ್ಟ್ರೀಯ ದಿನ'ವನ್ನು ಆಚರಿಸುತ್ತಿದ್ದು, ಈ ಹಿನ್ನೆಲೆಯಲ್ಲಿ ಮೈಸೂರು ರೈಲ್ವೆ ವಸ್ತು ಸಂಗ್ರಹಾಲಯದ ಆವರಣದಲ್ಲಿ ಮೈಸೂರು ನೈರುತ್ಯ ರೇಲ್ವೆ ವತಿಯಿಂದ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆ ಏರ್ಪಡಿಸಿದೆ.

ಅಂದು ಬೆಳಗ್ಗೆ 10ರಿಂದ ಮಧ್ಯಾಹ್ನ 12.30ರವರೆಗೆ ಚಿತ್ರಕಲಾ ಸ್ಪರ್ಧೆ ನಡೆಯಲಿದೆ. ಸ್ಪರ್ಧೆಗೆ ಯಾವುದೇ ಶುಲ್ಕವಿಲ್ಲ. 5ರಿಂದ 11 ವರ್ಷಗಳು ಮತ್ತು 12ರಿಂದ 15 ವರ್ಷಗಳ ವಯೋಮಾನದವರ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದೆ. ಏ.17ರ ಮಧ್ಯಾಹ್ನ 3 ರವರೆಗೆ ನೋಂದಣಿ ಮಾಡಿಕೊಳ್ಳಲಾಗುವುದು. 2030ರ ವೇಳೆಗೆ 'ಭಾರತೀಯ ರೈಲ್ವೆಯ ಹಸಿರೀಕರಣ' (Indian Railways to 'Go Green') ಎಂಬುದು ಚಿತ್ರಕಲಾ ಸ್ಪರ್ಧೆಯ ವಸ್ತು ವಿಷಯವಾಗಿದೆ. ಚಿತ್ರಕಲೆಗೆ ಬೇಕಾದ ಸಾಮಗ್ರಿಗಳನ್ನು ಸ್ಪರ್ಧಿಗಳೇ ತರಬೇಕು. ರೈಲ್ವೆಯು ಚಿತ್ರ ಬಿಡಿಸಲು ಹಾಳೆಗಳನ್ನು ಉಚಿತವಾಗಿ ನೀಡಲಿದೆ. ಆಸಕ್ತರು ಮೈಸೂರು ರೈಲ್ವೆ ವಸ್ತು ಸಂಗ್ರಹಾಲಯದಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ನಾಳೆಯಿಂದ 22ರವರೆಗೆ ತಾಲೂಕು ಮಟ್ಟದ ಆರೋಗ್ಯ ಮೇಳ



ಮೈಸೂರು, ಏ.16(ಎಂಟಿವೈ)– ಜಿಲ್ಲೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಏ.18ರಿಂದ 22ರವರೆಗೆ ವಿವಿಧ ತಾಲೂಕು ಆಸ್ಪತ್ರೆಗಳಲ್ಲಿ ಬೃಹತ್ ಆರೋಗ್ಯ ಮೇಳ ಆಯೋಜಿಸಲಾಗಿದ್ದು, ಸಾರ್ವಜನಿಕರು ಆರೋಗ್ಯ ಮೇಳದ ಸದುಪಯೋಗ ಪಡೆದುಕೊಳ್ಳುವಂತೆ ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್ ಮನವಿ ಮಾಡಿದ್ದಾರೆ.

ಈ ಆರೋಗ್ಯ ಮೇಳದಲ್ಲಿ ಆಯುಷ್ಮಾನ್ ಭಾರತ್ ಡಿಜಿಟಲ್ ಗುರುತಿನ ಚೀಟಿ ವಿತರಣೆ, ಟೆಲಿ ಕನ್ಸಲ್‌ಟೇಷನ್, ಅಸಾಂಕ್ರಾಮಿಕ ರೋಗಗಳಾದ ಮಧುಮೇಹ, ಅಧಿಕ ರಕ್ತದೊತ್ತಡ, ಧೀರ್ಘಾವಧಿ ಶ್ವಾಸಕೋಸ ಕಾಯಿಲೆ, ಕೀಲು ನೋವು, ಸಂಧಿವಾತ, ಕ್ಯಾನ್ಸರ್, ಬಾಯಿ, ಸ್ತನ, ಗರ್ಭಕೋಶ ಕ್ಯಾನ್ಸರ್ ಸ್ಕ್ರೀನಿಂಗ್ ಸೌಲಭ್ಯವಿರುತ್ತದೆ. ಇದರೊಂದಿಗೆ ಸಾಂಕ್ರಾಮಿಕ ರೋಗಗಳಾದ ಕ್ಷಯ, ಜ್ವರ, ಮಲೇರಿಯಾ, ಡೆಂಗ್ಯೂ ಲಕ್ಷಣಗಳಿಂದ ಬಳಲುತ್ತಿರುವವರು ಆರೋಗ್ಯ ಮೇಳದಲ್ಲಿ ಪಾಲ್ಗೊಂಡು ಚಿಕಿತ್ಸೆ ಪಡೆದುಕೊಳ್ಳುವಂತೆ ಡಿಹೆಚ್‌ಓ ಡಾ.ಪ್ರಸಾದ್ ಕೋರಿದ್ದಾರೆ.

ಕ್ರ.ಸಂ	ತಾಲೂಕಿನ ಹೆಸರು	ಆರೋಗ್ಯ ಮೇಳ ನಡೆಯುವ ದಿನಾಂಕ	ಆರೋಗ್ಯ ಮೇಳ ನಡೆಯುವ ಸ್ಥಳ
01	ಕೆ.ಆರ್.ನಗರ	18.04.2022	ಸಾರ್ವಜನಿಕ ಆಸ್ಪತ್ರೆ
02	ಮೈಸೂರು	19.04.2022	ಎಸ್.ಎಮ್.ಟಿ ಆಸ್ಪತ್ರೆ
03	ಪಿರಿಯಾಪಟ್ಟಣ	19.04.2022	ಜೂನಿಯರ್ ಕಾಲೇಜು ಗೋಣಿಕೊಪ್ಪ ರಸ್ತೆ
04	ಹುಣಸೂರು	19.04.2022	ಸಾರ್ವಜನಿಕ ಆಸ್ಪತ್ರೆ
05	ನಂಜನಗೂಡು	21.04.2022	ಸಾರ್ವಜನಿಕ ಆಸ್ಪತ್ರೆ
06	ಹೆಚ್.ಡಿ.ಕೋಟೆ	22.04.2022	ಸಾರ್ವಜನಿಕ ಆಸ್ಪತ್ರೆ
07	ತಿ.ನರಸೀಪುರ	22.04.2022	ಸಾರ್ವಜನಿಕ ಆಸ್ಪತ್ರೆ

ಇಂದು 'ಜನಸಾಮಾನ್ಯರಿಗಾಗಿ ವಾಸ್ತು ಶಾಸ್ತ್ರ' ಉಚಿತ ಕಾರ್ಯಾಗಾರ

ಮೈಸೂರು, ಏ.16(ಅರ್‌ಕೆಬಿ)– ಮೈಸೂರಿನ ಮಾಯಕಾರ ಗುರುಕುಲ ಸಂಸ್ಥೆಯಿಂದ ಏ.17ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಮೈಸೂರಿನ ಜೆಎಲ್‌ಬಿ ರಸ್ತೆ ಮುಡಾ ಎದುರಿನ ರೋಟರಿ ಶಾಲೆಯ ಸಭಾಂಗಣದಲ್ಲಿ 'ಜನಸಾಮಾನ್ಯರಿಗಾಗಿ ವಾಸ್ತು ಶಾಸ್ತ್ರ' ಕುರಿತು ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಡಾ.ಮೂಗೂರು ದೀಕ್ಷಿತ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗೃಹ ನಿರ್ಮಾಣ ಮಾಡುವಾಗ ಸಪ್ತಶುದ್ಧಿ ಹೇಗೆ ಮಾಡಬೇಕು? ಶಿಲಾನ್ಯಾಸ ವಿಧಿ, ಗರ್ಭನ್ಯಾಸ ವಿಧಿ, ಶಲೋದ್ಧಾರ, ಇಷ್ಟಿಕನ್ಯಾಸ, ಶಂಕುಸ್ಥಾಪನೆ, ಮುಖ್ಯದ್ವಾರ ಹೇಗೆ ನಿರ್ಣಯ ಮಾಡಬೇಕು? ಉಪದ್ವಾರ ನಿರ್ಮಿಸುವಾಗ ಯಾವ ವಿಷಯ ಅನುಸರಿಸಬೇಕು? ಆಯಾ ನಿರ್ಣಯದ ಬಗ್ಗೆ ಹಾಗೂ ವಾಸ್ತು ಸಮಸ್ಯೆಗಳಿಗೆ ಪಿರಮಿಡ್ ಹೇಗೆ ಸಹಾಯಕವಾಗಬಹುದು ಎಂಬ ಕುರಿತು ಬೆಂಗಳೂರಿನ ಪಿರಮಿಡ್ ವಾಸ್ತು ತಜ್ಞರಾದ ಅರವಿಂದ್ ರತನ್, ಇಂದ್ರ ಧನುಷ್ ಮತ್ತು ತಾವು ಉಪನ್ಯಾಸ ನೀಡುವುದಾಗಿ ತಿಳಿಸಿದರು. ಕಾರ್ಯಾಗಾರಕ್ಕೆ ಉಚಿತ ಪ್ರವೇಶವಿದ್ದು, ಪಾಲ್ಗೊಳ್ಳುವ ಎಲ್ಲರಿಗೂ ಉಚಿತವಾಗಿ ಪಿರಮಿಡ್ ನೀಡಿ, ಅದರ ಆಕ್ಟಿವೇಷನ್ ವಿಧಾನ ಕಲಿಸಿಕೊಡಲಾಗುವುದು. ಮಾಹಿತಿಗೆ ಮೊ– 9945415341 ಸಂಪರ್ಕಿಸಬಹುದು ಎಂದರು. ಗೋಷ್ಠಿಯಲ್ಲಿ ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳಾದ ರಾಮನಾಥ್ ಗುಪ್ತ, ವಿದ್ವಾನ್ ಸಾಗರ್ ಶಾಸ್ತ್ರಿ, ವಿದ್ವಾನ್ ಶರತ್ ಶಾಸ್ತ್ರಿ ಉಪಸ್ಥಿತರಿದ್ದರು.

ಕುಂಬಾರಕೊಪ್ಪಲು ರುದ್ರಭೂಮಿ ಕಾಂಪೌಂಡ್ ಮರು ನಿರ್ಮಾಣಕ್ಕೆ ಶಾಸಕ ನಾಗೇಂದ್ರ ಚಾಲನೆ




ಮೈಸೂರು,ಏ.16(ಎಂಟಿವೈ)–ಮಳೆಯಿಂದಾಗಿ ಕುಸಿದು ಬಿದ್ದಿದ್ದ ಕುಂಬಾರಕೊಪ್ಪಲು ರುದ್ರಭೂಮಿಯ ಕಾಂಪೌಂಡ್ ಮರು ನಿರ್ಮಾಣಕ್ಕೆ ಶಾಸಕ ಎಲ್.ನಾಗೇಂದ್ರ ಗುದ್ದಲಿಪೂಜೆ ನೆರವೇರಿಸಿದರು.

ಕಳೆದ ವರ್ಷ ಸುರಿದ ಮಳೆಯಿಂದಾಗಿ ಕುಂಬಾರಕೊಪ್ಪಲು ರುದ್ರ ಭೂಮಿಯ ಕಾಂಪೌಂಡ್ ಕುಸಿದಿತ್ತು. ಶುಕ್ರವಾರ ಬೆಳಗ್ಗೆ ಕುಂಬಾರಕೊಪ್ಪಲಿಗೆ ಭೇಟಿ ನೀಡಿದ್ದ ಶಾಸಕರು ಸ್ಥಳೀಯರಿಂದ ಮಾಹಿತಿ ಪಡೆದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರಲ್ಲದೆ, ಕಾಂಪೌಂಡ್ ನಿರ್ಮಾಣಕ್ಕೆ ಗುದ್ದಲಿಪೂಜೆ ನೆರವೇರಿಸಿದರು.

ಇದೇ ವೇಳೆ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಕುಂಬಾರಕೊಪ್ಪಲು ರುದ್ರಭೂಮಿಗೆ ಲೋಕನಾಯಕ ನಗರ ಮತ್ತು ಬಸವೇಶ್ವರ ನಗರ, ಭೈರವೇಶ್ವರ ನಗರ ಹಾಗೂ ಹೆಬ್ಬಾಳು ಬಡಾವಣೆಯ ವಿವಿಧ ವಾರ್ಡ್‌ಗಳಲ್ಲಿನ ನಿವಾಸಿಗಳು ಮರಣ ಹೊಂದಿದರೆ ಅಂತ್ಯ ಸಂಸ್ಕಾರಕ್ಕಾಗಿ ತರುತ್ತಾರೆ. ಹೆಚ್ಚಿನ ಜನರು ಈ ಸ್ಮಶಾನವನ್ನು ಅವಲಂಬಿಸಿರುವುದರಿಂದ ಇದರ ಅಭಿವೃದ್ಧಿ ಕ್ರಮ ಕೈಗೊಳ್ಳುತ್ತೇನೆ. ಅಭಿವೃದ್ಧಿಗೆ ಅನುಗುಣವಾಗಿ ಅವಶ್ಯಕತೆ ತಕ್ಕಂತೆ ಹಣ ಬಿಡುಗಡೆ ಮಾಡಿಸಿಕೊಡುತ್ತೇನೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಚಾಮರಾಜ ಕ್ಷೇತ್ರ ಭಾರತೀಯ ಜನತಾ ಪಾರ್ಟಿ ಉಪಾಧ್ಯಕ್ಷ ಕುಮಾರ್ ಗೌಡ, ಮುಖಂಡರಾದ ನವೀನ್, ನರಸೀಗೌಡ, ಡಿ.ಸಿ.ನವೀನ್‌ಕುಮಾರ್, ಜೆಡಿಎಸ್ ಮುಖಂಡ ಚಲುವಣ್ಣ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.04.2022 ಭಾನುವಾರ, ಮಳೆ ನಕ್ಷತ್ರ: ಅಶ್ವಿನಿ 14.04.2022 ರಿಂದ 26.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ
ತಿಥಿ: ಚೈತ್ರ, ನಕ್ಷತ್ರ: ಚಿತ್ತ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಭಾರತೀಯ ಜನಕಲಾ ಸಮಿತಿ, ಮೈಸೂರು ಜಿಲ್ಲಾ ಸಮಿತಿ** : ಇಪ್ಟಾ ಕ್ರೀಡಾಕೂಟ, ಉದ್ಘಾಟನೆ : ಸಹಾಯಕ ಕಾರ್ಮಿಕ ಆಯುಕ್ತರಾದ ನಾಜಿಯಾ ಸುಲ್ತಾನ, ಸ್ಥಳ: ರೈಲ್ವೆ ಕ್ರೀಡಾಂಗಣ, ಬೆಳಗ್ಗೆ 8.30ಕ್ಕೆ.

■ **ಜೆಎಸ್‌ಎಸ್ ವಿವಾಹ ವೇದಿಕೆ** :ವಧೂ–ವರರ ಮುಖಾಮುಖಿ ಸಮಾವೇಶ, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ ಸಭಾಂಗಣ, ಬೆಳಗ್ಗೆ 10ಕ್ಕೆ

■ **ಶ್ರೀ ಮಾಯಕಾರ ಗುರುಕುಲ** : ಜನಸಾಮಾನ್ಯರಿಗಾಗಿ ವಾಸ್ತುಶಾಸ್ತ್ರ ಉಪನ್ಯಾಸವುಳ್ಳ ಕಾರ್ಯಾಗಾರ, ಉಪಸ್ಥಿತರು : ವಾಸ್ತುತಜ್ಞರಾದ ಅರವಿಂದ್ ರತನ್, ಇಂದ್ರ ಧನುಶ್, ಸ್ಥಳ: ಐಡಿಯಲ್ ಜಾವಾ ರೋಟರಿ ಸ್ಕೂಲ್ ದೇವೇಗೌಡ ಸಭಾಂಗಣ, ಬೆಳಗ್ಗೆ 10.15 ರಿಂದ.

■ **ಗ್ರಾಮಾಂತರ ಬುದ್ಧಿಜೀವಿಗಳ ಬಳಗ, ಪ್ರಗತಿಪರ ಪ್ರಕಾಶನ, ಅಖಿಲ ಭಾರತೀಯ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಪರಿಷತ್** : ಬಳಗದ ವಾರ್ಷಿಕೋತ್ಸವದ ಅಂಗವಾಗಿ ಕಾವ್ಯ ದಸರಾ, ಉದ್ಘಾಟನೆ: ಭಾಷಾ ವಿದ್ವಾಂಸ ಡಾ. ಪ್ರಧಾನ್ ಗುರುದತ್ತ, ಕೃತಿ ಲೋಕಾರ್ಪಣೆ: ಮಹಾಕವಿ ಡಾ.ಲತಾ ರಾಜಶೇಖರ್, ಉಪಸ್ಥಿತರು: ಆಸ್ಥಾನ ವಿದ್ವಾನ್ ಡಾ.ಸಿಪಿಕೆ, ಸಾಹಿತಿಗಳಾದ ಕೆ.ಎನ್.ಮಹಾಬಲ, ಡಾ.ಹೆಚ್.ಎ. ಪಾರ್ಶ್ವನಾಥ್, ಡಾ. ಪುಷ್ಪ ಅಯ್ಯಂಗಾರ್, ಡಾ. ಹೆಚ್.ಬಿ. ರಾಜಶೇಖರ್, ಎ.ಹೇಮಗಂಗಾ, ಶ್ರೀಮತಿ ಜಯಶ್ರೀ ಡಾ. ಕೃಷ್ಣ, ಶ್ರೀಮತಿ ಹಂಚೆಟ್ಟಿರ ಫ್ಯಾನ್ಸಿಮುತ್ತಣ್ಣ, ಸ್ಥಳ: ರೋಟರಿ ಸಭಾಂಗಣ, ಮುಡಾ ಕಚೇರಿ ಎದುರು, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30 ರಿಂದ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಿಮಾಲಯ ಪ್ರತಿಷ್ಠಾನ ಹಾಗೂ ಕನ್ನಡ ಸಾಹಿತ್ಯ ಕಲಾಕೂಟ** : ಶ್ರೀಮತಿ ಕಮಲಾ ರಾಜೇಶ್ ಅವರ 'ಕಾರ್ತಿಕ ಮಾಸ' ಮುಕ್ತಕ ಕೃತಿ ಬಿಡುಗಡೆ ಸಮಾರಂಭ, ಕಾಯಕ ಸೇವಾ ರತ್ನ ಮತ್ತು ಸಾಹಿತ್ಯ ಸೇವಾ ರತ್ನ ಪ್ರಶಸ್ತಿ ಪ್ರದಾನ ಹಾಗೂ ಕವಿಗೋಷ್ಠಿ, ಕೃತಿ ಬಿಡುಗಡೆ : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಕೃತಿ ಕುರಿತು : ಅಂಕಣಕಾರ ನೀಲಕಂಠನಹಳ್ಳಿ ತಮ್ಮಣ್ಣಗೌಡ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.

■ **ಮಾತಾ ಅಮೃತಾನಂದಮಯಿ ಮಠ** : ಬ್ರಹ್ಮಸ್ಥಾನ ದೇವಸ್ಥಾನದ ವಾರ್ಷಿಕೋತ್ಸವ, ಬೆಳಗ್ಗೆ 6.30ಕ್ಕೆ ಮಹಾಗಣಪತಿ ಹೋಮ, 9ಕ್ಕೆ ಮಹಾಮೃತ್ಯುಂಜಯ ಹೋಮ, 11.30ಕ್ಕೆ ಸತ್ಸಂಗ, ಮಧ್ಯಾಹ್ನ 12.30ಕ್ಕೆ ಮಹಾಪ್ರಸಾದ, 3.30ಕ್ಕೆ ಶ್ರೀ ಲಲಿತಾಸಹಸ್ರನಾಮ ಅರ್ಚನೆ, ಸಂಜೆ 5ಕ್ಕೆ ಮಹಾಸುದರ್ಶನ ಹೋಮ, ಭಜನೆ, 7ಕ್ಕೆ ಮಹಾಮಂಗಳಾರತಿ, ಮಹಾಪ್ರಸಾದ, ಸ್ಥಳ: ಮಾತಾ ಅಮೃತಾನಂದಮಯಿ ಮಠ, ಬೋಗಾದಿ 2ನೇ ಹಂತ.

■ **ಶ್ರೀ ಗಾಯತ್ರಿದೇವಿ ಅಮ್ಮನವರ ದೇವಸ್ಥಾನ** : ಕಳಶ ಸ್ಥಾಪನೆ ಮತ್ತು ಗಾಯತ್ರಿದೇವಿ ಅಮ್ಮನವರ ಹೋಮ, ಸಂಜೆ 6ಕ್ಕೆ ಪುಣ್ಯಾಹಃ, ಮಹಾಗಣಪತಿ ಪೂಜೆ, ನವಗ್ರಹ ಪೂಜೆ, ಮಂಡಲ ಪೂಜೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ಅರಮನೆ ಕೋಟೆ ಆವರಣ.

■ **ಶ್ರೀ ಸೋಮೇಶ್ವರಸ್ವಾಮಿ ದೇವಸ್ಥಾನ ಮತ್ತು ಶ್ರೀ ಸಿದ್ದಲಿಂಗೇಶ್ವರಸ್ವಾಮಿ ದೇವಸ್ಥಾನ** : ಶ್ರೀ ಸಿದ್ದಲಿಂಗೇಶ್ವರಸ್ವಾಮಿಯವರ 19ನೇ ವಾರ್ಷಿಕೋತ್ಸವ, ಬೆಳಗ್ಗೆ 6.30 ರಿಂದ ಶ್ರೀ ಸ್ವಾಮಿಯವರಿಗೆ ಶತ ಶಂಖ ರುದ್ರಾಭಿಷೇಕ, ರುದ್ರಹೋಮ, ರುದ್ರ ದೀಪಾರಾಧನೆ, ಮಹಾಮಂಗಳಾರತಿ, ಬೆಳಗ್ಗೆ 10ಕ್ಕೆ ಧಾರ್ಮಿಕ ಸಭೆ, ಸಾನ್ನಿಧ್ಯ : ಶ್ರೀ ಶಿವಾನಂದ ಶಿವಾಚಾರ್ಯ ಮಹಾಸ್ವಾಮೀಜಿ, ಡಾ. ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ : ಶಾಸಕ ಸಿ.ಎಸ್. ನಿರಂಜನ ಕುಮಾರ್, ಅಧ್ಯಕ್ಷತೆ : ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ಎಸ್. ಪರಮಶಿವಯ್ಯ, ಸಂಜೆ 5.30ಕ್ಕೆ ಶ್ರೀ ಸಿದ್ದಲಿಂಗೇಶ್ವರಸ್ವಾಮಿಯವರ ಉತ್ಸವ, ನಂದಿ ಧ್ವಜದ ಪೂಜೆ ಮತ್ತು ಉತ್ಸವಕ್ಕೆ ಚಾಲನೆ : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಸ್ಥಳ: ದೇವಸ್ಥಾನ, ಊಟಿ ರಸ್ತೆ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ವಿಶೇಷ ಸರಣಿ 'ನಮ್ಮ ಸಂವಿಧಾನ', ಪರಿಚಯಿಸುತ್ತಾರೆ ಡಾ. ಸುಧಾಕರ ಹೊಸಳ್ಳಿ, 6.40 ಅರಿವಿನ ಶಿಖರ –ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಎಂ.ಎಸ್. ಲಕ್ಷ್ಮೀಶ, ವ್ಯಾಖ್ಯಾನ– ಡಾ.ಹೆಚ್.ಎಂ.ಕಲಾಶ್ರೀ, 7.15 ಪ್ರಾಯೋಜಿತ ಕಾರ್ಯಕ್ರಮ 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ' ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.00 ಈಸಿ ಇಂಗ್ಲಿಷ್–ಕನ್ನಡದ ಮೂಲಕ ಇಂಗ್ಲಿಷ್ ಕಲಿಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ–ಸಿ.ಕೆ.ವಿಜಯನಾರಸಿಂಹ, ನಿರ್ಮಾಣ–ಎಸ್.ಲಕ್ಷ್ಮೀನಾರಾಯಣ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿಯ ಪಯಣ, 9.40 ನಮ್ಮ ಆರೋಗ್ಯ–ರಕ್ತ ಹೀನತೆ ಅಥವಾ ಅನಿಮಿಯಾ, ಕಾರಣಗಳು ಮತ್ತು ಪರಿಹಾರ ಕುರಿತು ಡಾ. ಮಂಜುಭಾರ್ಗವ ಬಿ.ಆರ್. ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಅಮೃತಾ ವಿದ್ಯಾಲಯದ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳಮಂಟಪ–ಪ್ರತಿಭಾ ಪಲ್ಲವ, ಬಹುಮುಖ ಪ್ರತಿಭೆ ಸಿಂಚನಾ ಎಸ್.ರಾವ್ ಜೊತೆ ಮಾತುಕತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35ದೇವರನಾಮ–ಎಂ.ಎಸ್. ಸುಬ್ಬಲಕ್ಷ್ಮಿ, ಎಂ.ಎಸ್. ಶೀಲಾ 12.45ಜನಪದ ಸಂಗೀತ–ಸುಮಿತ್ರ ಮತ್ತು ತಂಡ, 1.20 ಭಾವಗೀತೆ–ಸಿ. ಶಶಿಕಲಾ ಚಂದ್ರಶೇಖರ್, 2.35 ಚಲನಚಿತ್ರ ಧ್ವನಿ ವಾಹಿನಿ, 3.40 ಯಕ್ಷಗಾನ ತಾಳ ಮದ್ದಲೆ–ಸಂಪೂರ್ಣ ಮಹಾಭಾರತ ಸರಣಿ, ಪ್ರಸಂಗ– ವ್ಯಾಸಾನುಗ್ರಹ, ಪ್ರಸ್ತುತಿ– ಪುತ್ತೂರಿನ ಯಕ್ಷ ಭಾರತಿಯ ಕಲಾವಿದರು, 4.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 5.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ವಿಶೇಷ ಸರಣಿ 'ನಮ್ಮ ಸಂವಿಧಾನ' ಪರಿಚಯಿಸುತ್ತಾರೆ: ಡಾ. ಸುಧಾಕರ ಹೊಸಳ್ಳಿ, 7.00AIR Nxt programme, 9.00 ಕೃಷಿರಂಗ–ತೋರಣ ಹೂರಣ, ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ ಪಂಡಿತ್ ಪ್ರವೀಣ್ ಶಿಂಯೋಲಿಕರ್ – ವಯೋಲಿನ್, 11.00 ಸವಿನೆನಪು

■ **ಶ್ರೀ ರಾಮಕೃಷ್ಣ ಅಶ್ರಮ** : ಸ್ವಾಮಿ ಮುಕ್ತಿದಾನಂದ ಅವರಿಂದ ಶ್ರೀರಾಮಕೃಷ್ಣರು ಮತ್ತು ಆಧ್ಯಾತ್ಮಿಕ ಜೀವನ ಕುರಿತು ಉಪನ್ಯಾಸ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಅದಮ್ಯ ರಂಗಶಾಲೆ:** ಬೇಲೂರು ಕೃಷ್ಣಮೂರ್ತಿಯವರ ಸಾಮಾಜಿಕ ಹಾಸ್ಯ ನಾಟಕ 'ಕುದುರೆ ಮೊಟ್ಟೆ' ನಿರ್ದೇಶನ : ವಿನೋದ್, ಮೈಸೂರು, ಸ್ಥಳ: ಕುವೆಂಪು ರಂಗಮಂದಿರ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮಿಪುರಂ, ಸಂಜೆ 6.30ಕ್ಕೆ.

ವಿವಿಧೆಡೆ ಶ್ರೀ ರಾಮನವಮಿ



■ **ಗಾನವಿಶಾರದ ಶ್ರೀಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ** : 106ನೇ ವಾರ್ಷಿಕ ಪಾರಂಪರಿಕ ರಾಮನವಮಿ ಸಂಗೀತೋತ್ಸವ, ವಿದ್ವಾನ್ ಮೈಸೂರು ಎಂ ನಾಗರಾಜ್ ಮತ್ತು ಡಾ. ಎಂ ಮಂಜುನಾಥ್ ಅವರಿಂದ ಪಿಟೀಲು ಯುಗಳ ವಾದನ, ವಿದ್ವಾನ್ ಅನಂತ ಆರ್.ಕೃಷ್ಣನ್ –ಮೃದಂಗ, ವಿದ್ವಾನ್ ವಾಜಪಲ್ಲಿ ಕೃಷ್ಣಕುಮಾರ್–ಘಟಂ, ಸ್ಥಳ: ಶ್ರೀ ಪ್ರಸನ್ನ ಸೀತಾರಾಮ ಮಂದಿರ, ಸಂಜೆ 5.30ಕ್ಕೆ.

■ **ಶ್ರೀ ಜಾನಕೀ ರಾಮ ಮಂದಿರ** : ಶ್ರೀ ರಾಮನವಮಿ ಕಾರ್ಯಕ್ರಮ, ಬೆಳಗ್ಗೆ 11ಕ್ಕೆ ಶ್ರೀ ರಾಮ ಪಟ್ಟಾಭಿಷೇಕ ಓಕುಳಿ ಸಂಭ್ರಮ, ಸಂಜೆ 6ಕ್ಕೆ ಗಾಯತ್ರಿ ಮಹಿಳಾ ಸಮಾಜದವರಿಂದ ಭಜನಾ ಕಾರ್ಯಕ್ರಮ, ಸ್ಥಳ: ಮಂದಿರದ ಆವರಣ, ಗೊಲ್ಲಗೇರಿ, ಚಾಮರಾಜ ಮೊಹಲ್ಲಾ.

■ **ಶ್ರೀ ರಾಮ ಸೇವಾ ಮಂಡಲಿ** : ಶ್ರೀ ರಾಮೋತ್ಸವ ಕಾರ್ಯಕ್ರಮ, ಬೆಳಗ್ಗೆ 10.30ಕ್ಕೆ ಶ್ರೀ ಸ್ಕಂದ ಭಜನಾ ಮಂಡಳಿಯಿಂದ ಭಜನೆ, ಸಂಜೆ 6ಕ್ಕೆ ರಾಗ ಸಂವರ್ಧಿನಿ ಮಹಿಳಾ ಸಂಘದಿಂದ ಭಜನೆ, ಸಂಜೆ 7 ರಿಂದ ವಿದುಷಿ ಕು. ವಿಭಾ ಶ್ರೀನಿಧಿ ಅವರಿಂದ ಸಂಗೀತ, ಸ್ಥಳ: ಶ್ರೀ ಅವನಿ ಶಂಕರ ಮಠ, ವಿದ್ಯಾರಣ್ಯಪುರಂ, 4ನೇ ಮೇನ್ 9ನೇ ಕ್ರಾಸ್.

■ **ಶ್ರೀ ರಾಮ ಮಂದಿರ, ಜಯನಗರ** : ಶ್ರೀ ರಾಮೋತ್ಸವ, ಬೆಳಗ್ಗೆ 8.30ಕ್ಕೆ ಶ್ರೀ ರಾಮಚಂದ್ರಸ್ವಾಮಿಗೆ ಪಟ್ಟಾಭಿಷೇಕ, ಸಂಜೆ 6.30 ರಿಂದ ಹನುಮಂತೋತ್ಸವ, ಸ್ಥಳ: ಶ್ರೀರಾಮಮಂದಿರ, ಜಯನಗರ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್** : ಶ್ರೀ ರಾಮೋತ್ಸವ, ವಿದ್ವಾನ್ ಅಭಿಷೇಕ್ ರಘುರಾಂ ಅವರಿಂದ ಶಾಸ್ತ್ರೀಯ ಸಂಗೀತ, ಅಕ್ಕರೈ ಶುಭಲಕ್ಷ್ಮಿ – ಪಿಟೀಲು, ಪತ್ರಿ ಸತೀಶ್ ಕುಮಾರ್ –ಮೃದಂಗ, ವ್ಯಾಸ ವಿಠ್ಠಲ–ಘಟಂ, ಸ್ಥಳ: ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಸಂಜೆ 6.30 ರಿಂದ.

■ **ದೊಡ್ಡ ಶ್ರೀ ರಾಮಮಂದಿರ** : ಶ್ರೀರಾಮ ಪಟ್ಟಾಭಿಷೇಕ ಮತ್ತು ಶ್ರೀ ವೀರಾಂಜನೇಯಸ್ವಾಮಿ ಮಹೋತ್ಸವ, ಬೆಳಗ್ಗೆ 9 ರಿಂದ ಭಜನಾ ಕಾರ್ಯಕ್ರಮ, ಶ್ರೀ ರಾಮ ಪಟ್ಟಾಭಿಷೇಕ, ಮಹಾಮಂಗಳಾರತಿ, ಅನ್ನಸಂತರ್ಪಣೆ, ಸಂಜೆ 6ಕ್ಕೆ ಸ್ವಾಮಿಯವರ ಉತ್ಸವ, ಸ್ಥಳ: ಮೈಸೂರು ನಗರ ಗಾಣಿಗರ ಸಂಘ, ತಿಲಕ್‌ನಗರ.

'ಮೈಸೂರು ಮಿತ್ರ'ನ 43ನೇ ವಾರ್ಷಿಕೋತ್ಸವ: ಶುಭ ಹಾರೈಕೆ



ಮೈಸೂರು ಪ್ರಾಂತ್ಯದ ಮನೆ ಮಾತಾಗಿರುವ 'ಮೈಸೂರು ಮಿತ್ರ'ನ 43ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಇದರ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಹಾಗೂ ವ್ಯವಸ್ಥಾಪಕ ಸಂಪಾದಕರಾದ ಕೆ.ಜಿ. ವಿಕ್ರಂ ಮುತ್ತಣ್ಣ ಅವರನ್ನು ಮೈಸೂರು ನಗರಪಾಲಿಕೆ ಸದಸ್ಯ ಎಂ.ಸಿ.ರಮೇಶ್, ಎಸ್‌ಎಂ ಕೃಷ್ಣ ಅಭಿಮಾನಿ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ. ದೇವೇಗೌಡ, ಮೈಲಾ ವಿಜಯಕುಮಾರ್, ಭೈರವ ಗ್ರೂಪ್‌ನ ಮಹದೇವ್, ಕಂಟ್ರಾಕ್ಟರ್ ಮಹದೇವ್, ಮುಖಂಡರಾದ ಉಪ್ಪಿ ವೆಂಕಟೇಶ್ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.



'ಮೈಸೂರು ಮಿತ್ರ'ನ 43ನೇ ವಾರ್ಷಿಕೋತ್ಸವದ ಅಂಗವಾಗಿ ಮಹಾ ನಗರಪಾಲಿಕೆ 23ನೇ ವಾರ್ಡಿನ ಸದ್ವಿದ್ಯಾ ವೃತ್ತದ ಬಳಿಯ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಮೈಸೂರು ಯುವ ಬಳಗದ ವತಿಯಿಂದ ವಿಶೇಷ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಉಚಿತವಾಗಿ ಶನಿವಾರದ 'ಮೈಸೂರು ಮಿತ್ರ'ನನ್ನು ವಾರ್ಷಿಕೋತ್ಸವದ ಪ್ರತಿಯೊಂದಿಗೆ ವಿತರಿಸಲಾಯಿತು.
ಈ ಸಂದರ್ಭದಲ್ಲಿ ಶ್ರೀನಿವಾಸ್ ಸಂತೋಷ್, ರವಿಚಂದ್ರ, ನವೀನ್ ಇನ್ನಿತರರು ಉಪಸ್ಥಿತರಿದ್ದರು.

ಬೆನ್ನು ಮೂಳೆಯ ಅಸ್ವಸ್ಥತೆಗಳಿಗೆ ಏ.19ರಿಂದ ಚಿಕಿತ್ಸಾ ಶಿಬಿರ

ಮೈಸೂರು,ಏ.16–ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಏ.19ರಿಂದ ಬೆನ್ನುಮೂಳೆಯ ಅಸ್ವಸ್ಥತೆಗಳಿಗೆ ಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಬೆನ್ನೆಲುಬಿನ ನೋವು, ಕುತ್ತಿಗೆ ನೋವು, ಸೊಂಟ ನೋವು, ಕೈ ನೋವು, ಕಾಲು ನೋವು, ಕೈ ಕಾಲು ಜೋಮ ಹಿಡಿಯುವುದು, ಮರಗಟ್ಟುವಿಕೆ, ಕುತ್ತಿಗೆ ಬಿಗಿತ ಇನ್ನಿತರ ಕಾಯಿಲೆಗಳಿಗೆ ಉತ್ತಮ ಫಲಕಾರಿ ಚಿಕಿತ್ಸೆ ನೀಡಲಾಗುತ್ತದೆ. ಶಿಬಿರವು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9743517652, ದೂ. 0821–2548231 ಸಂಪರ್ಕಿಸಬಹುದು.

ಇಂದು ಜೆಡಿಎಸ್ ಸಾರಥ್ಯ ವಹಿಸಿಕೊಳ್ಳಲಿರುವ ಇಬ್ರಾಹಿಂ



ಬೆಂಗಳೂರು,ಏ.16(ಕೆಎಂಶಿ)–ಕೇಂದ್ರದ ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ನಾಳೆ ಅಧಿಕೃತವಾಗಿ ಜೆಡಿಎಸ್ ಸೇರ್ಪಡೆಯಾಗಲಿದ್ದಾರೆ. ಇದರ ಬೆನ್ನಲ್ಲೆ ಜೆಡಿಎಸ್ ರಾಜ್ಯಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಲಿದ್ದಾರೆ. ಇದರೊಂದಿಗೆ ಚುನಾವಣಾ ವರ್ಷದಲ್ಲಿ ಜೆಡಿಎಸ್ ಮುನ್ನಡೆಸುವ ನೂತನ ಸಾರಥಿಯಾಗಲಿದ್ದಾರೆ. ಇದಕ್ಕೂ ಮುನ್ನ ಶಾಸಕ ಎಚ್.ಕೆ.ಕುಮಾರಸ್ವಾಮಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ. ಇಬ್ರಾಹಿಂ ಅವರಿಗಾಗಿ ರಾಜ್ಯಾಧ್ಯಕ್ಷ ಸ್ಥಾನ ಬಿಟ್ಟುಕೊಡುತ್ತಿದ್ದಾರೆ. ಜೆಪಿ ಭವನದಲ್ಲಿ ನಾಳೆ ಬೆಳಗ್ಗೆ 11 ಗಂಟೆಗೆ ಹೆಚ್.ಡಿ.ದೇವೇಗೌಡರು, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಪಕ್ಷ ನಾಯಕರು, ಮುಖಂಡರ ಸಮ್ಮುಖದಲ್ಲಿ ಇಬ್ರಾಹಿಂ ಸೇರ್ಪಡೆ ಕಾರ್ಯ ನಡೆಯಲಿದೆ. ಬಳಿಕ ಇಬ್ರಾಹಿಂ ಅವರು ಜೆಡಿಎಸ್ ರಾಜ್ಯಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಲಿದ್ದಾರೆ. ರಾಜ್ಯಾಧ್ಯಕ್ಷ ಸ್ಥಾನ ಬಿಟ್ಟುಕೊಡುವ ಹೆಚ್.ಕೆ.ಕುಮಾರಸ್ವಾಮಿ ಅವರಿಗೆ ಜೆಡಿಎಸ್ ಸಂಸದೀಯ ಮಂಡಳಿ ಅಧ್ಯಕ್ಷ ಸ್ಥಾನ ನೀಡುವುದಾಗಿ ದೇವೇಗೌಡರು ಘೋಷಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಓರ್ವರು : "ಎಂಟನೇ ತರಗತಿಯ ಗಣಿತ ಪುಸ್ತಕ ಕೊಡಿ"
ಪುಸ್ತಕ ವ್ಯಾಪಾರಿ : "ಇಲ್ಲ ಸಾರ್, ಅದು ಮಾರಾಟವಾಗಿ ಹೋಗಿದೆ"
ಅವರು : "ಹಾಗಾದರ ನಾಲ್ಕನೇ ತರಗತಿಯ ಎರಡು ಪುಸ್ತಕ ಕೊಡಿ!"

ಮೈಸೂರು ಮಿತ್ರ
ಭಾನುವಾರ, 17 ಏಪ್ರಿಲ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಉನ್ನತಿಯ ದಾರಿಯಲ್ಲಿ ಸಭ್ಯತೆಯ ಅಗತ್ಯ ಹೆಚ್ಚು ಇರುತ್ತದೆ.
– ಎಡ್ವರ್ಡ್ ಯಂಗ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅರಸನಿಲ್ಲದ ರಾಜ್ಯ ದೀಪವಿಲ್ಲದ ಮನೆ ಇದ್ದಂತೆ

ನಿಮ್ಮ ಪತ್ರಗಳು

ಸಾಮಾಜಿಕ ಕಳಕಳಿಯ ನಟಿ ಆಲಿಯಾ ಭಟ್

ಮಾನ್ಯರೆ,

ಬಾಲಿವುಡ್ ಸಿನಿಮಾ ಜಗತ್ತು ಪ್ರತಿಯೊಬ್ಬರಿಗೂ ಚಿರಪರಿಚಿತ. ಹಿಂದಿ ಚಿತ್ರಗಳಿಗೆ ವಿಶ್ವಾದ್ಯಂತ ಬಹು ಬೇಡಿಕೆಯಿದೆ. ಇಂತಹ ಸಿನಿಮಾ ಕ್ಷೇತ್ರದಲ್ಲಿ ಗುರುತಿಸಿಕೊಳ್ಳುವುದು ಸುಲಭವಲ್ಲ. ಆಲಿಯಾ ಭಟ್ ತಂದೆ ತಾಯಿ ಸಿನಿಮಾರಂಗದವರಾದರು ಆಲಿಯಾ ಭಟ್ ಪ್ರಸ್ತುತ ತನ್ನ ನಟನಾ ಕೌಶಲ್ಯದಿಂದ ಅತ್ಯಂತ ಸಣ್ಣ ವಯಸ್ಸಿನಲ್ಲಿ ಬಾಲಿವುಡ್‌ನಲ್ಲಿ ತಮ್ಮ ಸ್ಥಾನ ಭದ್ರಪಡಿಸಿಕೊಂಡಿದ್ದಾರೆ.

ಆಲಿಯಾ ಭಟ್ ತಂದೆ ಮಹೇಶ್ ಭಟ್ ಖ್ಯಾತ ನಿರ್ದೇಶಕ ಮತ್ತು ತಾಯಿ ಸೋನಿ ರಾಜ್ದಾನ್ ನಟಿ ಮತ್ತು ನಿರ್ದೇಶಕಿಯಾಗಿದ್ದರು. ಅವರ ಸಹಾಯವಿಲ್ಲದೆ ತನ್ನ ಸ್ವಂತ ಪ್ರತಿಭೆಯಿಂದ ಇಂದು ನಟನೆಯ ಉತ್ತುಂಗವನ್ನು ತಲುಪಿದ್ದಾರೆ.

ಆಲಿಯಾ ಭಟ್ ಯಾವುದೇ ಪಾತ್ರದಲ್ಲಿಯಾದರೂ ಸಹ ಲೀಲಾಜಾಲವಾಗಿ ಅಭಿನಯಿಸುತ್ತಾರೆ. 1999ರ 'ಸಂಘರ್ಷ' ಚಿತ್ರದಲ್ಲಿ ಬಾಲ ನಟಿಯಾಗಿ ಪಾದಾರ್ಪಣೆ ಮಾಡಿದ ಇವರು 2012ರ 'ಸ್ಟೂಡೆಂಟ್ ಆಫ್ ದಿ ಇಯರ್' ಚಿತ್ರದ ಮೂಲಕ ನಟಿಯಾಗಿ ಖ್ಯಾತಿಯಾದರು. ಅವರು ನಟಿಸಿದ ಎಲ್ಲಾ ಚಿತ್ರಗಳು ಯಶಸ್ವಿಯಾಗಿರುವುದರ ಹಿಂದೆ ಅವರ ಅಪಾರ ಪರಿಶ್ರಮವಿದೆ ಎಂದರೆ ತಪ್ಪಾಗಲಾರದು.

"ಹೈವೇ, ಗಲ್ಲಿ ಬಾಯ್ಸ್, ರಾಜಿ ಮತ್ತು ಇತ್ತೀಚಿನ 'ಗಂಗೂಬಾಯಿ ಕಾಥಿಯವಾಡಿ' ಚಿತ್ರ ಅವರ ನಟನಾ ಪ್ರತಿಭೆಯನ್ನು ಜಗತ್ತಿಗೆ ಪರಿಚಯಿಸಿತು. ಆಲಿಯಾ ಭಟ್ ಕೇವಲ ನಟಿಯಾಗಿರದೆ ಉದ್ಯಮ ಕ್ಷೇತ್ರದಲ್ಲಿ ಮಕ್ಕಳ ಉಡುಪಿನ 'ಎಡಮಾಮಾ' ಎಂಬ ಸಂಸ್ಥೆಯನ್ನು ಸ್ಥಾಪಿಸಿರುವುದು ಅವರ ದೂರದೃಷ್ಟಿಯನ್ನು ಸೂಚಿಸುತ್ತದೆ.

ಆಲಿಯಾ ಭಟ್ ಕೇವಲ ನಟಿಯಾಗಿರದೆ ಸಾಮಾಜಿಕ ಕಳಕಳಿಯನ್ನು ಸಹ ಹೊಂದಿದ್ದಾರೆ. ಕರ್ನಾಟಕದ ಮಂಡ್ಯ ಜಿಲ್ಲೆಯ ಕಿಕ್ಕೇರಿ ಗ್ರಾಮದ 40 ಕುಟುಂಬಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಟ್ಟಿರುವುದು ಸಹ ಶ್ಲಾಘನೀಯವಾಗಿದೆ. ಏಪ್ರಿಲ್ 14ರಂದು ಆಲಿಯಾ ಭಟ್ ಮತ್ತು ರಣಬೀರ್ ಕಪೂರ್‌ರ ದಾಂಪತ್ಯ ಜೀವನ ಆರಂಭಿಸಿದ್ದು, ಆಲಿಯಾ ಭಟ್‌ಗೆ ಶುಭವಾಗಲೆಂದು ಆಶಿಸೋಣ.

–ರಾ. ಸುಮಾ ಭಟ್, ಚಿಕ್ಕಮಗಳೂರು.

ಕಮಿಷನ್ ಸಂಸ್ಕೃತಿ ಸಮಾಜದ ಅಭಿವೃದ್ಧಿಗೆ ಮಾರಕ

ಮಾನ್ಯರೆ,

ಕಳೆದ ಕೆಲವು ತಿಂಗಳಿಂದ ರಾಜಕಾರಣಿಗಳ ಬಗ್ಗೆ ಆರೋಪಗಳು ಕೇಳಿಬರುತ್ತಿದ್ದು, ಅದು ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿರುವುದನ್ನು ನೋಡಿದ್ದೇವೆ. ಅದರಲ್ಲಿ ಮುಖ್ಯವಾದದ್ದು 40 ಪರ್ಸೆಂಟ್ ಆರೋಪಗಳು. ಸಾಮಾನ್ಯ ಜನತೆ ಕಚೇರಿಗಳಿಗೆ ತಮ್ಮ ಕೆಲಸ ಆಗಲು ಲಂಚ ನೀಡುತ್ತಿದ್ದುದನ್ನು ನಾವುಗಳೆಲ್ಲರೂ ಕಣ್ಣಾರೆ ನೋಡಿದ್ದೇವೆ ಮತ್ತು ಕೇಳಿದ್ದೇವೆ. ಆದರೆ ಈಗಿನ ರಾಜಕಾರಣಿಗಳು ಚುನಾವಣೆಯಲ್ಲಿ ಗೆದ್ದು ಹಣ ಗಳಿಸಲು ರಾಜಕೀಯಕ್ಕೆ ಬಂದಿರುವಂತೆ ತೋರುತ್ತದೆ. ಚುನಾವಣೆಯಲ್ಲಿ ಗೆದ್ದು ಬಂದಂತಹವರು ದೊಡ್ಡ ದೊಡ್ಡ ಸಮಾರಂಭಗಳಲ್ಲಿ ಶಂಕುಸ್ಥಾಪನೆ, ಉದ್ಘಾಟನೆ ಮಾಡಿ ಚುನಾವಣಾ ಪ್ರಚಾರ ಹಾಗೂ ನಾವು ನಮ್ಮ ಕ್ಷೇತ್ರಕ್ಕೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೇವೆ ಎಂದು ಮೇಲ್ನೋಟಕ್ಕೆ ತೋರಿಸಿಕೊಳ್ಳುತ್ತಾರೆ. ಆದರೆ, ಯಾವುದೇ ಕಾಮಗಾರಿ ಮಂಜೂರಾದರೆ ರಾಜಕಾರಣಿಗಳು ಗುತ್ತಿಗೆದಾರರನ್ನು ಕರೆಸಿ ಮೊದಲು ಪರ್ಸೆಂಟೇಜ್ ಅನ್ನು ಮಾತನಾಡುತ್ತಿರುತ್ತಾರೆ. ಇಲ್ಲಿ ಕೆಲಸದ ಗುಣಮಟ್ಟ ಕ್ಕಿಂತ ಪ್ರತಿನಿಧಿಗಳಿಗೆ ಪರ್ಸೆಂಟೇಜ್ ಮುಖ್ಯವಾಗಿರುತ್ತದೆ. ಈ ಪರ್ಸೆಂಟೇಜ್ ಸಂಸ್ಕೃತಿಯಲ್ಲಿ ಯಾವುದೇ ಪಕ್ಷಗಳು ಕೂಡ ಹೊರತಾಗಿಲ್ಲ ಜನಪ್ರತಿನಿಧಿಗಳು ತಮ್ಮ ಪಕ್ಷಗಳು ಅಧಿಕಾರಕ್ಕೆ ಬಂದಾಗ ಹೆಚ್ಚಿಗೆ ಅನುದಾನವನ್ನು ಪಡೆದುಕೊಂಡು ಅಧಿಕ ಪರ್ಸೆಂಟೇಜ್ ಗಳಿಸಲು ಹಂಬಲಿಸುತ್ತಾರೆ. ಆದ್ದರಿಂದ ಸರ್ಕಾರಿ ಕೆಲಸಗಳು ಕಳಪೆ ಎಂಬ ಮನೋಭಾವನೆ ಜನರಲ್ಲಿ ಮೂಡಿದೆ. ಸಾಮಾನ್ಯ ಜನರಾದ ನಾವು ನಮ್ಮ ಊರುಗಳಿಗೆ ಯಾವುದೇ ಕೆಲಸಗಳು ಬಂದರೆ ಪಕ್ಷಭೇದವನ್ನು ಮರೆತು ಗುಣಮಟ್ಟದ ಕೆಲಸವನ್ನು ಮಾಡಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ. ಎಲ್ಲಿಯವರೆಗೆ ಜನ ಪ್ರಶ್ನಿಸುವ ಮನೋಭಾವನೆಯನ್ನು ಬೆಳೆಸಿಕೊಳ್ಳುವುದಿಲ್ಲವೋ ಅಲ್ಲಿವರೆಗೆ ಪರ್ಸೆಂಟೇಜ್ ಸಂಸ್ಕೃತಿ ಮುಂದುವರೆಯುತ್ತದೆ.

–ಹೆಚ್.ಬಸವರಾಜಪ್ಪ, ಹಾಡ್ಯ, ಕೆ.ಆರ್.ನಗರ ತಾ.

ನಾಯಿ ಕಾಶಿಗೆ ಹೋದಂತೆ...

ಮಾನ್ಯರೆ,

ಇತ್ತೀಚೆಗೆ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿಯವರು ಪುರೋಹಿತರು ದಕ್ಷಿಣೆ ಕಾಸು ದೊರಕಿದರೆ ಮಾತ್ರ ಪೂಜಿಸುತ್ತಾರೆ. ಇಲ್ಲದಿರೆ ಇಲ್ಲ ಎಂದು ಜರೆದಿದ್ದಾರೆ. ಈಗ ದೇವರನ್ನು ಮತ್ತು ಜ್ಯೋತಿಷಿಗಳನ್ನು ಅತಿಯಾಗಿ ನಂಬುವ ಸದಾ ಬ್ರಾಹ್ಮಣರಿಗಿಂತ ತುಸು ಹೆಚ್ಚಾಗಿ ಎನಿಸುವಂತೆ ಸದಾ ಪೂಜೆ ಪುನಸ್ಕಾರ, ಹೋಮ ಹವನಗಳಲ್ಲಿ ತೊಡಗಿಸಿಕೊಳ್ಳುವ ಇವರಿಂದ ಇಂತಹ ಮಾತುಗಳ ನಿರೀಕ್ಷೆ ನಮಗಿರಲಿಲ್ಲ. ಇವರು ಶೃಂಗೇರಿ ಮಠದ ಪರಂಪರೆಯನ್ನು ಹಲವಾರು ವೇದಿಕೆಯಲ್ಲಿ ಪ್ರಸ್ತಾಪಿಸಿ ಗೌರವಿಸುವ ರೀತಿಯನ್ನು ನೋಡಿದಾಗ ನನಗೆ ಭ್ರಮನಿರಸನವಾಯಿತು. ಆಗ ನನಗೆ ನೆನಪಾದದ್ದು "ನಾಯಿ ಕಾಶಿಗೆ ಹೋದಂತೆ" ಎಂಬ ಮಾತು. ಇಲ್ಲಿ ನಾಯಿ ಕಾಶಿಗೆ ಹೋದರೆ, ಅದೇನು ವಿಶ್ವನಾಥನ ಗುಡಿ ಸುತ್ತುವುದೇ? ಗಂಗೆಯಲ್ಲಿ ಸ್ನಾನ ಮಾಡುವುದೇ? ಇದೇಕೆ ಎಚ್.ಡಿ.ಕೆ.ಗೆ ಈ ಬಗೆಯ ಆಲೋಚನೆ ಬಂದಿತೋ? ಆ ಕಾಶಿ ವಿಶ್ವನಾಥನೆ ತಿಳಿಸಬೇಕು..

–ನಾಗಮಂಗಲ ನರಸಿಂಹ ಮೂರ್ತಿ, ಮೈಸೂರು.

ಚತುರ್ ಹನಿ

ಕೊನೆ
ಯಾವುದಕ್ಕೂ
ಒಂದು ಕೊನೆ
ಉಂಟು;
ಸಾವಿಗೂ !

ತಪ್ಪೆ?
ನಾವೆಲ್ಲ
ಒಂದಲ್ಲ ಒಂದು ದಿನ
ಸಾಯುವವರೇ; ಆದರೆ
ಇಂದು ಮಡಿದವರಿಗೆ
ಕಂಬನಿ ಮಿಡಿಯುವುದು ತಪ್ಪೆ?

ಕಾರಣ
ವ್ಯಕ್ತಿಗತ ಕಾರಣಕ್ಕಾಗಿ
ಸಾಯಬೇಕೆನಿಸಿದರೆ,
ಅರ್ಥ ಮಾಡಿಕೊಳ್ಳಬಹುದು;
ಜಗತ್ ಕಾರಣಕ್ಕಾಗಿ
ಸಾಯಬೇಕೆನಿಸಿದರೆ
ಏನು ಹೇಳುವುದು?

ಅನಿವಾರ್ಯ
ಇಲ್ಲಿ ಯಾವುದೇ
ದಾರ್ಷ್ಟ್ಯ, ದೌರ್ಜನ್ಯ
ನಡೆಯಲಿ, ಅದರ
ಅನಿವಾರ್ಯಾಂಗ,
ಶೀಲ ಭಂಗ

(ಮರೆವೆಂಬ ಮಾಯಾಂಗನೆ ... ಗುಬ್ಬಿಗೂಡು (ಅಂಕಣ ಏ.5) ಪಕ್ಕದ ಪುಟದಲ್ಲೇ 'ಸ್ಮೃತಿ' ಇರಾನಿ ಸುದ್ದಿ! ಇನ್ನೆಲ್ಲಿ ಮರೆವಿಗೆ ಸ್ಥಾನ?)

– ಸಿಪಿಕೆ, ಮೈಸೂರು

ಚಿಂತನೆ



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಬದಲಾಗುತ್ತಿರುವ, ಬದಲಾಯಿಸಲಾಗುತ್ತಿರುವ ಮನೋಭಾವ

> "ನಮ್ಮ ಆರೋಗ್ಯದಲ್ಲಿ ಇತ್ತೀಚೆಗೆ ಆಗುತ್ತಿರುವ ಏರುಪೇರುಗಳಿಗೆ ನಾವು ಬಳಸುತ್ತಿರುವ ಅಡುಗೆ ಎಣ್ಣೆಯ ಕೊಡುಗೆ ಜಾಸ್ತಿ ಇದೆ ಎಂಬ ಅಂಶವನ್ನು ಅನೇಕ ಅಧ್ಯಯನಗಳು ತಿಳಿಸಿವೆ ಹಾಗೂ ಪರಿಣಿತರೂ ಹೇಳುತ್ತಿದ್ದಾರೆ. ಇತ್ತೀಚೆಗೆ ಮಾರುಕಟ್ಟೆಯಲ್ಲಿ ದೊರಕುತ್ತಿರುವ ಅಡುಗೆ ಎಣ್ಣೆ ಒಂದು ರೀತಿಯ ಕಲಬೆರಕೆಯ ಮಿಶ್ರಣವಾಗಿ ಕಂಡುಬರುತ್ತಿದೆ. (ಆದರೆ ನೋಡಿದರೆ ಅದು ಕಾಣುವುದಿಲ್ಲ). ಇದನ್ನು ಬಳಸುವವರಿಗೆ ಇತ್ತೀಚೆಗೆ ಈ ಎಣ್ಣೆಯಲ್ಲಿ ಏನೇನೋ ಕಲಬೆರಕೆಯಾಗುತ್ತಿದೆ, ಇದರಿಂದ ನಮ್ಮ ಆರೋಗ್ಯದ ಮೇಲೆ ಯಾವ ರೀತಿಯ ಪರಿಣಾಮವಾಗುವುದೋ ಎಂಬ ಹೆದರಿಕೆ ಆರಂಭವಾಗಿದೆ.

ಇತ್ತೀಚೆಗೆ ಜನರ ಮನೋಭಾವದಲ್ಲಿ ಏನೋ ಬದಲಾವಣೆಗಳು ಆಗುತ್ತಿರುವುದು ಮೇಲು ನೋಟಕ್ಕೇ ಸ್ಪಷ್ಟವಾಗುತ್ತಿದೆ. ಜನರ ಆಸೆ, ಅಭಿಲಾಷೆಗಳು ಬದಲಾಗುತ್ತಿದೆ. ಇದು ಒಂದು ಹಂತದಲ್ಲಿ ಬದಲಾದಂತೆ ಕಂಡುಬಂದರೂ, ಮತ್ತೊಂದು ದಿಸೆಯಲ್ಲಿ ಅವರ ಮನೋಭಾವವನ್ನು ಬದಲಿಸುವ ತಂತ್ರಗಳು ಫಲ ನೀಡುತ್ತಿರುವಂತೆ ಕಾಣಿಸುತ್ತಿದೆ. ನಮಗೆ ಅವಶ್ಯಕವಿರಲಿ ಇಲ್ಲದಿರಲಿ, ತೋರಿಕೆಗಾಗಿ ಒಂದಷ್ಟು ಜೀವನ ವಿಧಾನ ಬದಲಿಸಿಕೊಳ್ಳುವ ಪ್ರಯತ್ನಗಳು ನಡೆಯುತ್ತಿದೆ.

ಇದು ಪ್ರಚಾರ ಯುಗ. ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲಾ ಆಕರ್ಷಕ ಜಾಹಿರಾತುಗಳು ಜನರ ಮನಸ್ಸನ್ನು ಗೊಂದಲಗೊಳಿಸುತ್ತಿವೆ. ಇಂತಹ ಜಾಹಿರಾತುಗಳು ಈವರೆವಿಗೆ ನಾವು ನಂಬಿಕೊಂಡು ಬಂದಿದ್ದ ನಂಬಿಕೆಗಳೇ ಸರಿಯಲ್ಲವೇನೋ ಎಂಬಂತಹ ಭ್ರಮೆಯನ್ನು ಸೃಷ್ಟಿಸುತ್ತಿವೆ. ಹೀಗೆ ಭ್ರಮೆ ಹುಟ್ಟಿಸುವಲ್ಲಿ ಈ ಜಾಹಿರಾತುಗಳು ಯಶಸ್ವಿಯಾಗುತ್ತಿವೆ. (ಈಗ ಟಿವಿ ಧಾರಾವಾಹಿಗಳ ನಡುವೆ, ಧಾರಾವಾಹಿಯ ಪಾತ್ರಧಾರಿಗಳು ಜಾಹಿರಾತು ನೀಡುವ ಕಲೆ ಬೆಳೆದಿದೆ. ಸಿನಿಮಾ ನಟರಂತೂ ಇದನ್ನು ಕಾಮಧೇನು ಎಂದು ಭಾವಿಸಿ ಪೈಪೋಟಿಯ ಮೇಲೆ ಜಾಹಿರಾತಿನಲ್ಲಿ ಕಾಣಿಸಿಕೊಳ್ಳುತ್ತಾರೆ). ಈಗ್ಗೆ ಮೂವತ್ತು-ನಲವತ್ತು ವರ್ಷಗಳ ಹಿಂದೆ ಈ ಪ್ರಮಾಣದಲ್ಲಿ ಜಾಹಿರಾತುಗಳು ಇರಲಿಲ್ಲ. ಆದ್ದರಿಂದ ಜನರೂ ತಮ್ಮ ಪರಂಪರಾಗತವಾದ ವಿಧಾನವನ್ನೇ ಅನುಸರಿಸುತ್ತಿದ್ದರು ಹಾಗೂ ಅದರಿಂದಾಗಿ ಆರೋಗ್ಯಕರವಾದ ಜೀವನ ನಡೆಸುತ್ತಿದ್ದರು.

ಈ ಹಿಂದೆ ಬರುತ್ತಿದ್ದ ಜಾಹಿರಾತಿನ ಒಂದು ಜಾಡು ಪರಿಶೀಲಿಸುವುದಾದರೆ ಅಂತಹ ಜಾಹಿರಾತಿನಲ್ಲಿ ಸೀಗೇಪುಡಿಯು ಸ್ನಾನಕ್ಕೆ ಅತ್ಯಂತ ಉಪಯೋಗಿ ಎಂದು ಹೇಳಲಾಗುತ್ತಿತ್ತು. ಜನರಿಗೂ ಎಣ್ಣೆ ಸ್ನಾನ ಎಂದರೆ ಸೀಗೇಕಾಯಿ ಪುಡಿ (ಕೆಲವು ಸಲ ಸುಜ್ಜಲಪುಡಿ) ಬೇಕೇಬೇಕು ಎಂಬಂತೆ ಮನದಟ್ಟಾಗಿತ್ತು. ಜನರು ಅದನ್ನು ಬಳಸುತ್ತಿದ್ದರು. ಸೀಗೇಕಾಯಿಯನ್ನು ನಿಸರ್ಗದ ಸೋಪು ಎಂದು ಕರೆಯಲಾಗುತ್ತಿತ್ತು. ಇದನ್ನು ಬಳಸುವುದರಿಂದ ಕೂದಲು ಉದುರುವುದು, ಬಾಲನೆರೆಗೂದಲು ಬರುವುದು ಹಾಗೂ ಇನ್ನಿತರ ಸಮಸ್ಯೆಗಳು ಇರುವುದಿಲ್ಲ ಎಂಬುದು ಜನರಿಗೆ ಮನದಟ್ಟಾಗಿತ್ತು. ಸೀಗೇಕಾಯಿ ಹೆಸರೇ ಹೇಳುವಂತೆ ಒಂದು ಗಿಡದಲ್ಲಿ ಬೆಳೆಯುವ ಕಾಯಿ. ಅದನ್ನು ಕುಟ್ಟಿ (ಅಥವಾ ಬೀಯಿಸಿ) ಪುಡಿಮಾಡಿ ಶೇಖರಿಸಿಕೊಂಡು ವರ್ಷಪೂರ್ತಿ ಉಪಯೋಗಿಸಲಾಗುತ್ತಿತ್ತು. ಇದು ವೈಜ್ಞಾನಿಕವಾಗಿಯೂ ಉಪಕಾರಿ ಎಂಬುದು ಸಿದ್ಧವಾದ ಅಂಶವಾಗಿತ್ತು. ಸೀಗೇಕಾಯಿಪುಡಿಯನ್ನು ಪ್ರತಿದಿನ ಉಪಯೋಗಿಸುವುದರಿಂದ ಕೂದಲಿನ ಸಮಸ್ಯೆಗಳ ಅನೇಕ ಅಂಶಗಳಿಗೆ ಪರಿಹಾರವೂ ಸಿಗುತ್ತಿತ್ತು. ಹಾಗಾಗಿ ಜನರು ಅದನ್ನು ನೆಮ್ಮದಿಯಾಗಿ ಉಪಯೋಗಿಸುತ್ತಿದ್ದರು. ಆದರೆ ಇಂದು ಆ ಜಾಗಕ್ಕೆ ಶಾಂಪು ಬಂದಿದೆ. ಅದೂ ಒಂದೆರಡು ಬ್ರಾಂಡ್ ಅಲ್ಲ, ಹಲವಾರು ಬ್ರಾಂಡ್‌ಗಳು. ಇದನ್ನು ಬಳಸುವುದೂ ಸುಲಭ. ಕೈಗೆ ಹಾಕಿಕೊಂಡು ತಲೆಗೂದಲಿಗೆ ಉಜ್ಜಿದರೆ ಸಾಕು, ಹೇರಳವಾಗಿ ನೊರೆ ಬರುತ್ತದೆ. ಇಂತಹ ಪ್ರಚಾರಕ್ಕೆ ಜನರು ಮನಸೋತರು. ಸೀಗೇಕಾಯಿ ಮರೆತರು. ಶಾಂಪು ಸುಲಭ ಎಂದು ಕೊಂಡರು. ಅದರ ತಪ್ಪು ಪ್ರಚಾರಗಳಿಗೆ ಮನಸೋತರು. ಹೀಗಾಗಿ ಸೀಗೇಕಾಯಿಯ ಜಾಗವನ್ನು ಶಾಂಪು ಆವರಿಸಿತು. ಜೊತೆಗೆ ಕೂದಲಿನ ಹಲವಾರು ಸಮಸ್ಯೆಗಳೂ ಎದುರಾದವು. ಆದರೆ ಇದಕ್ಕೆ ಶಾಂಪು ಕಾರಣ ಎಂಬ ಕಲ್ಪನೆಯೇ ಮನದಲ್ಲಿ ಮೂಡಲಿಲ್ಲ. (ಶಾಂಪೂ ನೈಸರ್ಗಿಕ ಅಲ್ಲ ಎಂಬುದು ನಮ್ಮ ಅರಿವಿಗೇ ಬಂದಿಲ್ಲ) ಅಷ್ಟರಮಟ್ಟಿಗೆ ಆ ಕಂಪನಿಗಳು ಯಶಸ್ಸು ಕಂಡವು.

ಅದೇ ರೀತಿ ಸ್ನಾನಕ್ಕೆ ಕಡಲೆಹಿಟ್ಟು ಬಳಕೆ ಈ ಹಿಂದೆ ಸಾಮಾನ್ಯವಾಗಿತ್ತು. ಕಡಲೆಹಿಟ್ಟು ಸೌಂದರ್ಯ ವರ್ಧಕ ಎಂಬುದೂ ಸಾಬೀತಾಗಿತ್ತು. ಕಡಲೆಹಿಟ್ಟನ್ನು ಈಗಿನ ಸೋಪಿನ ರೀತಿಯಲ್ಲಿ ಬಳಸಲಾಗುತ್ತಿತ್ತು. ತಲೆ ಸ್ನಾನಕ್ಕೂ ಕಡಲೆಹಿಟ್ಟು ಉಪಯೋಗಿಸಲಾಗುತ್ತಿತ್ತು. (ಇದನ್ನು ಈಗಲೂ ಉಪಯೋಗಿಸುವ ಜನರಿದ್ದಾರೆ). ನಮ್ಮ ಚರ್ಮದ ಮೇಲೆ ಕಂಡುಬರುವ ಸತ್ತ ಜೀವಕೋಶಗಳನ್ನು ನಿವಾರಿಸಿ, ಚರ್ಮಕ್ಕೆ ಕಾಂತಿ ನೀಡುವ ಕೆಲಸವನ್ನು ಅದು ಮಾಡುತ್ತಿತ್ತು. ಚರ್ಮದ ಸ್ವಚ್ಛತೆ ಇದರಿಂದ ಸಾಧ್ಯವಾಗುತ್ತಿತ್ತು. ಆದರೆ ಇಂದು ಇದರ ಜಾಗದಲ್ಲಿ ಸೋಪು ಬಂದು ಕೂತಿದೆ. ಇಂದು ಅಂಗಡಿಗಳಲ್ಲಿ (ಮಾಲ್‌ಗಳಲ್ಲಿ) ಹತ್ತಾರು ಕಂಪನಿಗಳ ನೂರಾರು ತರಹದ ಸೋಪುಗಳು ಕಂಡುಬರುತ್ತವೆ. (ವಿದೇಶಿ ಸೋಪುಗಳು ಲಭ್ಯವಿದೆ), ಇದೂ ಸಹಾ ಬಳಸಲು ಸುಲಭ. ಮೈಗೆ ಹಚ್ಚುತ್ತಿದ್ದ ಹಾಗೆ ನೊರೆ ಬರುವುದು ಹಾಗೂ ಅದರ ಸುವಾಸನೆಗೆ ಜನರು ಮರುಳಾದರು. ಆದರೆ ಈಗ ಚರ್ಮದ ಖಾಯಿಲೆಗಳು ಜಾಸ್ತಿಯಾಗಿವೆ. ಜನರ ಹಳೆಯ ಭಾವನೆ ಅರಿತು ಮುಖದ ಅಂದ ಹೆಚ್ಚಿಸಿಕೊಳ್ಳಬೇಕಾದರೆ ತಮ್ಮ ಕಂಪನಿಯ ಬ್ರಾಂಡಿನ ಕಡಲೆಹಿಟ್ಟಿನ ಫೇಸ್ ಪ್ಯಾಕ್ ಖರೀದಿಸಿ ಎನ್ನುವ ಜಾಹಿರಾತು ಈಗ ಬರುತ್ತಿದೆ. ಇದೂ ಸಹಾ ಜನರನ್ನು ಮರಳು ಮಾಡುವ ವಿಧಾನವೇ ಆಗಿದೆ. ಇದು ನಮಗೆ ಅರ್ಥವಾಗಬೇಕು ಅಷ್ಟೇ.

ನಮ್ಮ ಆರೋಗ್ಯದಲ್ಲಿ ಇತ್ತೀಚೆಗೆ ಆಗುತ್ತಿರುವ ಏರುಪೇರುಗಳಿಗೆ ನಾವು ಬಳಸುತ್ತಿರುವ ಅಡುಗೆ ಎಣ್ಣೆಯ ಕೊಡುಗೆ ಜಾಸ್ತಿ ಇದೆ ಎಂಬ ಅಂಶವನ್ನು ಅನೇಕ ಅಧ್ಯಯನಗಳು ತಿಳಿಸಿವೆ ಹಾಗೂ ಪರಿಣಿತರೂ ಹೇಳುತ್ತಿದ್ದಾರೆ. ಇತ್ತೀಚೆಗೆ ಮಾರುಕಟ್ಟೆಯಲ್ಲಿ ದೊರಕುತ್ತಿರುವ ಅಡುಗೆ ಎಣ್ಣೆ ಒಂದು ರೀತಿಯ ಕಲಬೆರಕೆಯ ಮಿಶ್ರಣವಾಗಿ ಕಂಡುಬರುತ್ತಿದೆ. (ಆದರೆ ನೋಡಿದರೆ ಅದು ಕಾಣುವುದಿಲ್ಲ). ಇದನ್ನು ಬಳಸುವವರಿಗೆ ಇತ್ತೀಚೆಗೆ ಈ ಎಣ್ಣೆಯಲ್ಲಿ ಏನೇನೋ ಕಲಬೆರಕೆಯಾಗುತ್ತಿದೆ, ಇದರಿಂದ ನಮ್ಮ ಆರೋಗ್ಯದ ಮೇಲೆ ಯಾವ ರೀತಿಯ ಪರಿಣಾಮವಾಗುವುದೋ ಎಂಬ ಹೆದರಿಕೆ ಆರಂಭವಾಗಿದೆ. ಅದರಲ್ಲೂ ಪ್ಯಾಕೆಟ್‌ಗಳಲ್ಲಿ ದೊರಕುವ ಎಣ್ಣೆಯಲ್ಲಿ ಬಳಸುವ ಸಂರಕ್ಷಕ (ಪ್ರಿಸರ್ವೇಟಿವ್)ಗಳು ಆರೋಗ್ಯ ವೃದ್ಧಿಸುವ ಅಂಶಗಳನ್ನು ಹೊಂದಿರುವುದಿಲ್ಲ, ಮಾರುಕಟ್ಟೆಯಲ್ಲಿ ದೊರಕುವ ಅಡುಗೆ ಎಣ್ಣೆಯಲ್ಲಿ ಹೆಚ್ಚಾಗಿ ಟ್ರೈ-ಆರ್ಥೋ-ಕ್ರೆಸಿಲ್-ಫಾಸ್ಪೇಟ್ ಬಳಕೆ ಮಾಡಲಾಗುತ್ತದೆ ಎಂದು ಒಂದು ಅಧ್ಯಯನ ಹೇಳುತ್ತದೆ. ಇಂತಹ ವರದಿಗಳಿಂದ ಜನರು ಗಾಬರಿ ಬೀಳುವಂತೆ ಆಗುತ್ತಿದೆ. ಇದರ ಪರಿಣಾಮ ಇಂದು ಗಾಣದಿಂದ ತಯಾರಿಸಿದ ಎಣ್ಣೆಗಳ ಕಡೆಗೆ ಜನರು ಗಮನ ಹರಿಸುವಂತಾಗಿದೆ. ಹಣ ಹೆಚ್ಚಾದರೂ ಪರವಾಗಿಲ್ಲ, ಆರೋಗ್ಯ ಹಾಳಾಗದಿದ್ದರೆ ಸಾಕು ಎಂದು ಭಾವಿಸುವಂತಾಗಿದೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶ ಎಂದರೆ ಈ ರೀತಿ ಅಡುಗೆ ಎಣ್ಣೆಗಳಿಂದ ಆರೋಗ್ಯ ಹಾಳಾಗುತ್ತದೆ ಎಂದು ಹೇಳುವವರೇ ಧಾರಾಳವಾಗಿ ಬೀದಿ ಬದಿಯ ಕರಿದ ಪದಾರ್ಥ ಸೇವಿಸುತ್ತಾರೆ, ಆಹಾರವನ್ನು ಯೋಚಿಸದೇ ಸ್ವೀಕರಿಸುತ್ತಾರೆ. ಆಗ ಇವರು ತಮ್ಮ ಆರೋಗ್ಯದ ಕಾಳಜಿ ಮರೆಯುತ್ತಾರೆ. ಇತ್ತೀಚೆಗೆ ಒಂದು ಹೊಟೆಲ್ಗೆ ಹೋಗಿದ್ದಾಗ ಪೂರಿ ಸಿಗುವುದೇ? ಎಂದರೆ, ಇಲ್ಲ, ಇತ್ತೀಚೆಗೆ ನಾವು ಪೂರಿ ಮಾಡುವುದನ್ನು ನಿಲ್ಲಿಸಿದ್ದೇವೆ ಎಂದರು. ಅವರು ಆತ್ಮೀಯರಾದ ಕಾರಣ, ಇದಕ್ಕೆ ಕಾರಣವೇನು? ಎಂದು ಕೇಳಿದಾಗ ಪೂರಿ ಮಾಡಲು ಬಾಂಡಲೆಗೆ ಎಣ್ಣೆಯನ್ನು ಹಾಕಿ ಕಾಯಿಸುತ್ತಿರಬೇಕು. ಗ್ರಾಹಕರು (ತಿನ್ನಲು ಬರುವವರು) ಆರ್ಡರ್ ಮಾಡಿದಾಗ ಪೂರಿ ಕರಿಯಬೇಕು. ಆದಾದ ನಂತರವೂ ಎಣ್ಣೆ ಕಾಯುತ್ತಲೇ ಇರಬೇಕು. ಮತ್ತೆ ಅರ್ಧ ಗಂಟೆಗೆ ಇನ್ನೊಂದು ಆರ್ಡರ್ ಬಂದರೆ ಮತ್ತೆ ಕರಿಯುವುದು, ಹೀಗೆ ಎಣ್ಣೆಯನ್ನು ಬಿಸಿ ಮಾಡುತ್ತಲೇ ಇರಬೇಕಾಗುತ್ತದೆ. ಈ ರೀತಿ ಎಣ್ಣೆಯನ್ನು ಎರಡು ಮೂರು ದಿನ ಉಪಯೋಗಿಸಬಹುದು. ನಂತರ ಅದು ಕಪ್ಪಾಗುತ್ತದೆ ಕರಿದಾಗ ಹಿತವಲ್ಲದ ವಾಸನೆಯೂ ಬರುತ್ತದೆ. ಆಗ ಆ ಎಣ್ಣೆ ಚೆಲ್ಲಬೇಕು. ಇದರಿಂದ ನಷ್ಟವಾಗುತ್ತದೆ. ಆದ್ದರಿಂದ ನಾವು ಪೂರಿ ಮಾಡುವುದನ್ನು ನಿಲ್ಲಿಸಿದ್ದೇವೆ ಎಂದರು. ಅಲ್ಲದೇ ಈಗಿನ ಎಣ್ಣೆಯ ಗುಣಮಟ್ಟವೂ ಕಳಪೆಯಾಗಿರುವುದರಿಂದ ಅದು ಬಳಕೆ ಬೇಡ ಎಂದು ಹೀಗೆ ಯೋಚಿಸಿದ್ದೇವೆ ಎಂದರು. ಮನೆಯಲ್ಲಿ ಒಮ್ಮೆ ಕರಿದ ನಂತರ, ಮತ್ತೆ ಕರಿಯಲು ಆ ಎಣ್ಣೆ ಉಪಯೋಗಿಸುವುದೋ? ಬೇಡವೋ? ಎಂದು ಯೋಚಿಸುವ ನಾವು ಹೊರಗೆ ಧಾರಾಳವಾಗಿ ತಿನ್ನುತ್ತೇವೆ.

ಈ ಹಿಂದೆ ಶುದ್ಧವಾದ ಅಡುಗೆ ಎಣ್ಣೆ ದೊರಕುತ್ತಿತ್ತು. (ಆಗ ಪ್ಯಾಕೆಟ್‌ಗಳ ಪದ್ಧತಿ ಇರಲಿಲ್ಲ). ಅನೇಕ ಮನೆಗಳಲ್ಲಿ ಸಾಂಬಾರ್ ಹಾಕಿಕೊಂಡು ಅನ್ನ ಕಲೆಸುವಾಗ ಬೊಗಸೆ ಗಟ್ಟಲೆ ಅಡುಗೆ ಎಣ್ಣೆ ಹಾಕಿಕೊಂಡು ಅನ್ನ ಕಲೆಸಿ ತಿನ್ನುತ್ತಿದ್ದರು. ಈಗ ಮಾರುಕಟ್ಟೆಯಲ್ಲಿ ದೊರಕುವ ಎಣ್ಣೆಯನ್ನು ಹೀಗೆ ಬಳಸಲು ಗುಂಡಿಗೆ ಗಟ್ಟಿ ಇರಬೇಕು ಎನಿಸುವಂತಾಗಿದೆ.

ಇಂದು ನಮಗೆ ಈ ಆನ್‌ಲೈನ್ ವ್ಯಾಮೋಹ ಜಾಸ್ತಿಯಾಗಿದೆ. ಇದು ಇಂದು ಸಿದ್ಧಪಡಿಸಿದ ಆಹಾರ ಸರಬರಾಜಿಗೂ ವೇಗವಾಗಿ ಕಾಲಿರಿಸಿದೆ. ಈ ಆನ್‌ಲೈನ್ ಮೂಲಕ ಆರ್ಡರ್ ಮಾಡಿ ಪಡೆಯುವ ಆಹಾರ ಒಂದಷ್ಟು ಪರಿಮಳ ಬೀರುತ್ತದೆ. ಆದರೆ ಅದರಲ್ಲಿ ಎಷ್ಟು ಪ್ರಮಾಣದ ಶುದ್ಧ ಪದಾರ್ಥ ಬಳಸಲಾಗಿದೆ ಎಂಬುದು ತಿಳಿಯುವುದಿಲ್ಲ. ನಿರಂತರವಾಗಿ ನಾಲ್ಕಾರು ದಿನ ಈ ರೀತಿ ಆರ್ಡರ್ ಮಾಡಿ, ಆಹಾರ ತರಿಸಿ ತಿಂದವರು ಯಾವುದೋ ಚಡಪಡಿಕೆಗೆ ಒಳಗಾಗುವುದನ್ನು ಕಾಣಬಹುದು. ನಮ್ಮಲ್ಲಿ ಮೊದಲಿನಿಂದಲೂ ಹೇಳುವ ಮಾತು ಎಂದರೆ 'ಕಾಸೂ ಕೇಡು, ತಲೆಯೂ ಬೋಳು' ಎಂದು. ಇದನ್ನು ಈಗಿನ ವಿಷಯಕ್ಕೆ ಹೋಲಿಸುವುದಾದರೆ ಹಣವೂ ಹೋಯಿತು, ಆರೋಗ್ಯವೂ ಹೋಯಿತು ಎಂಬಂತೆ ಕಂಡುಬರುತ್ತದೆ.

ಇದಕ್ಕೆಲ್ಲಾ ಕಾರಣ ನಮ್ಮ ಡೋಲಾಯಮಾನವಾದ ಮನಸ್ಸು ನಮಗೆ ಇಂತಹುದೇ ಬೇಕು, ಅದು ಒಳ್ಳೆಯದು ಎಂದು ಗೊತ್ತಿದ್ದರೂ, ಅದಕ್ಕೆ ವಿರುದ್ಧವಾದ ರೀತಿಯಲ್ಲಿ ಜೀವನ ಸಾಗಿಸುತ್ತಿದ್ದೇವೆ. ಜಾಹಿರಾತುದಾರರು ಹಣ ಮಾಡುವ ಧಾವಂತದಲ್ಲಿ ಅನೇಕ ಸುಳ್ಳು ಆಶ್ವಾಸನೆ ನೀಡಿರುತ್ತಾರೆ. ಅದನ್ನೇ ಪದೇಪದೇ ಓದಿ, ಕೇಳಿ, ನೋಡಿ ಮನಸ್ಸಿನಲ್ಲಿ ಅದನ್ನೇ ತುಂಬಿಕೊಂಡು ನಮ್ಮ ಮನಸ್ಸಿಗೆ ವಿರುದ್ಧವಾಗಿ, ಅನಾರೋಗ್ಯದೆಡೆಗೆ ಧಾವಿಸುತ್ತಿದ್ದೇವೆ ಎನಿಸುತ್ತದೆ. ನಮಗೇನು ಬೇಕು? ಎಂಬುದು ನಮಗೆ ಮಾತ್ರ ತಿಳಿದಿರಲು ಸಾಧ್ಯ. ಬೇರೆಯವರು ಇದು ನಿಮಗೆ ಹೊಂದಾಣಿಕೆಯಾಗುತ್ತದೆ ಎಂದಾಗ ಅದನ್ನು ನಂಬುವುದು ಅಳುಕು ಮನಸಿನ ಸೂಚನೆ ಎನಿಸುತ್ತದೆ. ನನ್ನ ಜೀವನ ನನಗನಿಸಿದಂತೆ ಎಂಬ ದೃಢ ನಿರ್ಧಾರ ಬೆಳೆಯಬೇಕು.

ಕೆ.ಎಲ್.ರಾಹುಲ್ ಶತಕ: ಲಖನೌಗೆ ಭರ್ಜರಿ ಜಯ

ಸತತ 6ನೇ ಸೋಲು ಅನುಭವಿಸಿದ ಮುಂಬೈಗೆ ಮುಖಭಂಗ



ಮುಂಬೈ, ಏ.16– ಐಪಿಎಲ್ ವೃತ್ತಿ ಜೀವನದ 100ನೇ ಪಂದ್ಯದಲ್ಲಿ ಅಮೋಘ ಶತಕ ಸಿಡಿಸಿದ ಕನ್ನಡಿಗ ಕೆ.ಎಲ್.ರಾಹುಲ್ ಅವರ ಭರ್ಜರಿ ಬ್ಯಾಟಿಂಗ್ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ಮುಂಬೈ ಇಂಡಿಯನ್ಸ್ ವಿರುದ್ಧ 18 ರನ್‌ಗಳ ಗೆಲುವು ದಾಖಲಿಸಿದೆ.

ಈ ಮೂಲಕ ಆಡಿರುವ 6 ಪಂದ್ಯಗಳಲ್ಲಿ 4ನೇ ಗೆಲುವು ದಾಖಲಿಸಿರುವ ಲಖನೌ, ಒಟ್ಟು 8 ಅಂಕ ಸಂಪಾದಿಸಿ ಅಂಕಪಟ್ಟಿಯಲ್ಲಿ 2ನೇ ಸ್ಥಾನಕ್ಕೆ ಏರಿದೆ. ಮತ್ತೊಂದೆಡೆ ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ಸತತ ಅನೇ ಸೋಲಿನ ಮುಖಭಂಗಕ್ಕೊಳಗಾಗಿದೆ.

ಇಲ್ಲಿನ ಬ್ರಬೋರ್ನ್ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಖನೌಗೆ ನಾಯಕ ಕೆ.ಎಲ್.ರಾಹುಲ್, ಕ್ವಿಂಟನ್ ಡಿಕಾಕ್ ಮೊದಲ ವಿಕೆಟ್‌ಗೆ 52 ರನ್ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ 24 ರನ್ ಗಳಿಸಿದ್ದ ಡಿಕಾಕ್ ವಿಕೆಟ್ ಒಪ್ಪಿಸಿದರು. ಬಳಿಕ ಮನೀಶ್ ಪಾಂಡೆ ಜೊತೆಗೂಡಿದ ರಾಹುಲ್ 2ನೇ ವಿಕೆಟ್‌ಗೂ 72 ರನ್‌ಗಳ ಅಮೂಲ್ಯ ಜೊತೆಯಾಟದಲ್ಲಿ ಭಾಗಿಯಾದರು. ಪಾಂಡೆ 38 ರನ್ ಗಳಿಸಿ ಔಟ್ ಆದರು. ಅತ್ತ ಕೇವಲ 33 ಎಸೆತಗಳಲ್ಲಿ ಅರ್ಧಶತಕ ಪೂರ್ಣಗೊಳಿಸಿದ ರಾಹುಲ್, ಮುಂಬೈ ಬೌಲರ್‌ಗಳನ್ನು ದಂಡಿಸಿದರು. ಅಲ್ಲದೇ ಮೈದಾನದ ಎಲ್ಲ ದಿಕ್ಕಿಗೂ ಚೆಂಡನ್ನು ಅಟ್ಟಿದ ರಾಹುಲ್, ಅಭಿಮಾನಿಗಳನ್ನು ರಂಜಿಸಿದರಲ್ಲದೆ 56 ಎಸೆತಗಳಲ್ಲಿ ಶತಕ ಪೂರ್ಣಗೊಳಿಸಿದರು. ಇದು ಐಪಿಎಲ್‌ನಲ್ಲಿ ರಾಹುಲ್ ಬ್ಯಾಟ್‌ನಿಂದ ಸಿಡಿದ ಮೂರನೇ ಶತಕವಾಗಿದೆ. 60 ಎಸೆತ ಎದುರಿಸಿದ ರಾಹುಲ್ 9 ಬೌಂಡರಿ ಹಾಗೂ 5 ಸಿಕ್ಸರ್ ಒಳಗೊಂಡ 103 ರನ್ ಗಳಿಸಿ ಅಜೇಯರಾಗಿ ಉಳಿದರು. ಇನ್ನುಳಿದಂತೆ ಮಾರ್ಕಸ್ ಸ್ಟೋಯಿನಿಸ್ 10 ಹಾಗೂ ದೀಪಕ್ ಹೂಡಾ 15 ರನ್ ಗಳಿಸಿದರು. ಅಂತಿಮವಾಗಿ ಲಖನೌ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 199ರನ್‌ಗಳ ಬೃಹತ್ ಮೊತ್ತ ಪೇರಿಸಿತು. ಮುಂಬೈ ಪರ ಜಯದೇವ್ ಉನಾದ್ಕಟ್ 2, ಮುರುಗನ್ ಅಶ್ವಿನ್ ಹಾಗೂ ಫ್ಯಾಬಿಯನ್ ಅಶ್ವಿನ್ ತಲಾ ಒಂದೊಂದು ವಿಕೆಟ್ ಪಡೆದರು.

ಬಳಿಕ ಗುರಿ ಬೆನ್ನತ್ತಿದ ಮುಂಬೈ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 181 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಮುಂಬೈ ಪರ ಡೆವಾಲ್ಡ್ ಬ್ರೆವಿಸ್ 13 ಎಸೆತಗಳಲ್ಲಿ 1 ಸಿಕ್ಸರ್, 6 ಬೌಂಡರಿ ಒಳಗೊಂಡ 31, ಸೂರ್ಯಕುಮಾರ್ ಯಾದವ್ 37, ತಿಲಕ್ ವರ್ಮಾ 26, ಕೀರನ್ ಪೊಲಾರ್ಡ್ 25, ಉನಾದ್ಕಟ್ 14, ಇಶಾನ್ ಕಿಶಾನ್ 13 ರನ್ ಗಳಿಸಿದರು. ಲಖನೌ ಪರ ಆವೇಶ್ ಖಾನ್ 3, ಹೋಲ್ಡರ್, ಚಮೀರಾ, ಬಿಷ್ಣೋಯಿ ಹಾಗೂ ಸ್ಟೋಯಿನಿಸ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಶತಕ ಸಿಡಿಸಿದ ರಾಹುಲ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಡಿಕೆ, ಮ್ಯಾಕ್ಸಿ ಅಬ್ಬರ: ಆರ್‌ಸಿಬಿಗೆ ಗೆಲುವು



ಮುಂಬೈ, ಏ.16– ಗ್ಲೆನ್ ಮ್ಯಾಕ್ಸ್‌ವೆಲ್ ಹಾಗೂ ದಿನೇಶ್ ಕಾರ್ತಿಕ್ ಅವರ ಅಬ್ಬರದ ಬ್ಯಾಟಿಂಗ್ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 16 ರನ್‌ಗಳ ಗೆಲುವು ದಾಖಲಿಸಿದೆ.


ಈ ಮೂಲಕ ಆಡಿರುವ 6 ಪಂದ್ಯಗಳಲ್ಲಿ 4ನೇ ಜಯದೊಂದಿಗೆ ಒಟ್ಟು 8 ಅಂಕಗಳನ್ನು ಸಂಪಾದಿಸಿರುವ ಆರ್‌ಸಿಬಿ ಅಂಕಪಟ್ಟಿಯಲ್ಲಿ 3ನೇ ಸ್ಥಾನಕ್ಕೇರಿದೆ. ಅತ್ತ ಡೆಲ್ಲಿ 5 ಪಂದ್ಯಗಳಲ್ಲಿ ಮೂರನೇ ಸೋಲಿಗೆ ಶರಣಾಗಿದೆ.

ಇಲ್ಲಿನ ವಾಂಖೇಡೆ ಮೈದಾನದಲ್ಲಿ ನಡೆದ ಶನಿವಾರ ನಡೆದ 2ನೇ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 189 ರನ್ ಗಳಿಸಿತ್ತು. ತಂಡದ ಆರಂಭ ಉತ್ತಮವಾಗಿರಲಿಲ್ಲ. ತಂಡವು ಮೊತ್ತ 40 ರನ್ ಆಗುವಷ್ಟರಲ್ಲಿ ಆರ್‌ಸಿಬಿ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಅಬ್ಬರಿಸಿದ ಗ್ಲೆನ್ ಮ್ಯಾಕ್ಸ್‌ವೆಲ್ 34 ಎಸೆತಗಳಲ್ಲಿ 2 ಸಿಕ್ಸರ್, 7 ಬೌಂಡರಿ ಒಳಗೊಂಡ 55ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ ಜೊತೆಯಾದ ಶಹಬಾಜ್ ಅಹ್ಮದ್ ಹಾಗೂ ದಿನೇಶ್ ಕಾರ್ತಿಕ್ 6ನೇ ವಿಕೆಟ್‌ಗೆ 97 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಕೇವಲ 26 ಎಸೆತಗಳಲ್ಲಿ ಅರ್ಧಶತಕ ಸಿಡಿಸಿದ ಕಾರ್ತಿಕ್ 34 ಎಸೆತಗಳಲ್ಲಿ ತಲಾ 5 ಸಿಕ್ಸರ್, ಬೌಂಡರಿ ಒಳಗೊಂಡ 66 ರನ್ ಗಳಿಸಿ ಅಜೇಯರಾಗಿ ಉಳಿದರು. ಉಳಿದಂತೆ ಶಹಬಾಜ್ ಅಹ್ಮದ್ 34 ರನ್ ಗಳಿಸಿದರು. ಡೆಲ್ಲಿ ಪರ ಶಾರ್ದೂಲ್ ಠಾಕೂರ್, ಖಲೀಲ್ ಅಹ್ಮದ್, ಅಕ್ಷರ್ ಪಟೇಲ್ ಹಾಗೂ ಕುಲದೀಪ್ ಯಾದವ್ ತಲಾ ಒಂದೊಂದು ವಿಕೆಟ್ ಪಡೆದರು.

ಬಳಿಕ 190 ರನ್‌ಗಳ ಗುರಿ ಬೆನ್ನತ್ತಿದ ಡೆಲ್ಲಿ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 173 ರನ್ ಗಳಿಸಲಷ್ಟೇ ಶಕ್ತವಾಗಿ ಸೋಲು ಅನುಭವಿಸಿತು. ತಂಡದ ಪರ ಆರಂಭಿಕ ಡೇವಿಡ್ ವಾರ್ನರ್ 66, ನಾಯಕ ರಿಷಬ್ ಪಂತ್ 34 ರನ್ ಗಳಿಸಿದ್ದು ಬಿಟ್ಟರೇ ಉಳಿದವರಿಂದ ಬೃಹತ್ ಮೊತ್ತ ದಾಖಲಾಗಲಿಲ್ಲ. ಉಳಿದಂತೆ ಪೃಥ್ವಿ ಷಾ 16, ಮಿಚೆಲ್ ಮಾರ್ಷ್ 14, ಶಾರ್ದೂಲ್ ಠಾಕೂರ್ 17 ರನ್ ಗಳಿಸಿದರು. ಆರ್‌ಸಿಬಿ ಪರ ಜೋಶ್ ಹ್ಯಾಜಲ್‌ವುಡ್ 3 ಹಾಗೂ ಮೊಹಮ್ಮದ್ ಸಿರಾಜ್ 2, ಹಸರಂಗ 1 ವಿಕೆಟ್ ಪಡೆದರು. ದಿನೇಶ್ ಕಾರ್ತಿಕ್ ಪಂದ್ಯ ಪುರುಷರಾದರು.

ಸೋಲು, ಸೋಲು, ಸೋಲು': ರಾಕಿಭಾಯ್ ಡೈಲಾಗ್‌ನಲ್ಲಿ ವ್ಯಂಗ್ಯ

ಮುಂಬೈ: ಈ ಬಾರಿಯ ಐಪಿಎಲ್‌ನಲ್ಲಿ ಸತತ 6 ಸೋಲು ಅನುಭವಿಸಿರುವ



ಮುಂಬೈ ಇಂಡಿಯನ್ಸ್ ತೀವ್ರ ಮುಖಭಂಗಕ್ಕೊಳಗಾಗಿದ್ದು, ಸಾಮಾಜಿಕ ಜಾಲತಾಣದಲ್ಲಿ ಮುಂಬೈ ಇಂಡಿಯನ್ಸ್ ಟ್ರೋಲ್‌ಗೆ ಗುರಿಯಾಗಿದೆ. ಕೆಜಿಎಫ್ 2 ಸಿನಿಮಾದ ರಾಕಿಭಾಯ್ ಅವರ ಜನಪ್ರಿಯ 'ವೈಲೆನ್ಸ್ ವೈಲೆನ್ಸ್ ವೈಲೆನ್ಸ್' ಡೈಲಾಗ್ ಬದಲು ಟ್ವಿಟರ್ ಬಳಕೆದಾರರೊಬ್ಬರು 'ಸೋಲು, ಸೋಲು, ಸೋಲು' ಎಂದು ಮುಂಬೈ ತಂಡವನ್ನು ವ್ಯಂಗ್ಯ ಮಾಡಿದ್ದಾರೆ ಐಪಿಎಲ್‌ನಲ್ಲಿ ದಾಖಲೆಯ ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್, ಈ ಬಾರಿ ಇದುವರೆಗೆ ಆಡಿರುವ ಎಲ್ಲ ಆರು ಪಂದ್ಯಗಳಲ್ಲಿ ಸೋಲು ಅನುಭವಿಸಿದೆ ಇದರೊಂದಿಗೆ 'ಕನಿಷ್ಠ ಒಂದು ಪಂದ್ಯವನ್ನಾದರೂ ಗೆಲ್ಲಿ' ಎಂದು ಮತ್ತೊಬ್ಬರು ಹೀಯಾಳಿಸಿದ್ದಾರೆ.

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	5	4	1	0	8
ಲಕ್ನೋ	6	4	2	0	8
ಆರ್‌ಸಿಬಿ	6	4	2	0	8
ರಾಜಸ್ಥಾನ್	5	3	2	0	6
ಪಂಜಾಬ್	5	3	2	0	6
ಕೆಕೆಆರ್	6	3	3	0	6
ಎಸ್‌ಆರ್‌ಹೆಚ್	5	3	2	0	6
ಡೆಲ್ಲಿ	5	2	3	0	4
ಸಿಎಸ್‌ಕೆ	5	1	4	0	2
ಮುಂಬೈ	6	0	6	0	0

ಇಂದಿನ ಪಂದ್ಯಗಳು

[ಏಪ್ರಿಲ್ 17]

ಪಂಜಾಬ್ V/S ಎಸ್‌ಆರ್‌ಹೆಚ್
ಸ್ಥಳ: ಡಾ.ಡಿ.ವೈ.ಪಾಟೀಲ್ ಸ್ಪೋರ್ಟ್ಸ್ ಅಕಾಡೆಮಿ, ಮುಂಬೈ
ಸಮಯ: ಮಧ್ಯಾಹ್ನ 3.30

ಗುಜರಾತ್ V/S ಸಿಎಸ್‌ಕೆ
ಸ್ಥಳ: ಎಂಸಿಎ ಕ್ರೀಡಾಂಗಣ, ಪುಣೆ
ಸಮಯ: ರಾತ್ರಿ 7.30

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ರೈಲಿನ ಬೋಗಿ ಸ್ವಚ್ಛಗೊಳಿಸುವ ಸ್ವಯಂಚಾಲಿತ ಘಟಕ ಉದ್ಘಾಟನೆ



ಮೈಸೂರು, ಏ.16– ರೈಲಿನ ಬೋಗಿ ಸ್ವಚ್ಛಗೊಳಿಸುವ ಸ್ವಯಂಚಾಲಿತ ಘಟಕವನ್ನು ನೈಋತ್ಯ ರೈಲ್ವೆ, ಹುಬ್ಬಳ್ಳಿ, ಜನರಲ್ ಮ್ಯಾನೇಜರ್ ಸಂಜೀವ್ ಕಿಶೋರ್ ಅವರು ಮೈಸೂರಿನಲ್ಲಿ ಶನಿವಾರ ಉದ್ಘಾಟಿಸಿದರು.

ವಾರ್ಷಿಕ ತಪಾಸಣೆಯ ಭಾಗವಾಗಿ ಇಂದು ಅಶೋಕ ಪುರಂನ ಕೇಂದ್ರ ಕಾರ್ಯಾಗಾರ ಪರಿಶೀಲನೆಗೆ ಆಗಮಿಸಿದ ಅವರು ಕೇಂದ್ರ ಕಾರ್ಯಾಗಾರದಲ್ಲಿ ಎಲ್‌ಎಚ್‌ಬಿ ಸ್ಪ್ರಿಂಗ್, ಕ್ಯಾರೇಜ್ ಲಿಫ್ಟ್ ಮತ್ತು ಚಕ್ರದ ವಿಭಾಗವನ್ನು ಪರಿಶೀಲಿಸಿದರು. ನಂತರ ನಗರ ರೈಲು ನಿಲ್ದಾಣದಲ್ಲಿ ಸ್ವಯಂಚಾಲಿತ ರೈಲಿನಲ್ಲಿ ಕೋಚ್ ಸ್ವಚ್ಛಗೊಳಿಸುವ ಘಟಕ ವನ್ನು ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಈ ಸ್ವಯಂಚಾಲಿತ ಯಂತ್ರದಿಂದ ನೀರಿನ ವೆಚ್ಚ ಮತ್ತು ಮಾನವ ಶಕ್ತಿಯನ್ನು ಕಡಿಮೆ ಮಾಡಬಹುದು ಹಾಗೂ ಉತ್ತಮ ರೀತಿಯಲ್ಲಿ ಕೋಚ್‌ಗಳು ಸ್ವಚ್ಛವಾಗುತ್ತದೆ ಮತ್ತು ಪರಿಸರ ಸ್ನೇಹಿಯಾಗಿದ್ದು, ಪ್ರತಿಬಾರಿ ಸುಮಾರು ಶೇ.60 ರಿಂದ 70ರಷ್ಟು ನೀರು ಮರು ಬಳಕೆಯಾಗುತ್ತದೆ ಹಾಗೂ 24 ಬೋಗಿವುಳ್ಳ ರೈಲನ್ನು ಸ್ವಚ್ಛಗೊಳಿಸಲು 5ರಿಂದ 6 ನಿಮಿಷಗಳು ತೆಗೆದುಕೊಳ್ಳುತ್ತದೆ. ಈ ಸ್ವಯಂಚಾಲಿತ ಯಂತ್ರ ಇಲ್ಲದೆ ಸ್ವಚ್ಛಗೊಳಿಸಲು ಮುಂದಾದರೆ ಸರಿ ಸುಮಾರು 180 ನಿಮಿಷಗಳು ತೆಗೆದುಕೊಳ್ಳುತ್ತಿತು. ಎಂದು ತಿಳಿಸಿದ್ದಾರೆ. ನೈಋತ್ಯ ರೈಲ್ವೆ, ಹುಬ್ಬಳ್ಳಿ ಪ್ರಧಾನ ಮೆಕ್ಯಾನಿಕಲ್ ಇಂಜಿನಿಯರ್ ಯು.ಸುಬ್ಬರಾವ್, ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಹುಲ್ ಅಗರ್ವಾಲ್, ನೈಋತ್ಯ ರೈಲ್ವೆ ಮೈಸೂರು ವಿಭಾಗ ಹಾಗೂ ಮೈಸೂರು ವಿಭಾಗದ ಹಿರಿಯ ಅಧಿಕಾರಿಗಳು ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಬೆಳದಿಂಗಳ ಬಿಸಿಯೂಟ ಸವಿದು ಸಂಭ್ರಮಿಸಿದ ನೈಪುಣ್ಯ ಮಕ್ಕಳು




ಮೈಸೂರು, ಏ.16(ಎಂಕೆ)– 'ಬೆಳದಿಂಗಳ ಬಿಸಿಯೂಟ' ಸವಿದು ಆಟವಾಡಿ ಕುಣಿದು ಕುಪ್ಪಳಿಸಿದ ಪುಟಾಣಿಗಳು....!

ಮೈಸೂರಿನ ಆರ್.ಟಿ.ನಗರದ 'ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆ'ಯಲ್ಲಿ ಹಮ್ಮಿಕೊಂಡಿರುವ 'ಬೇಸಿಗೆಬಂಡಿ' ಬೇಸಿಗೆ ಶಿಬಿರದಲ್ಲಿ ಭಾಗವಹಿಸಿರುವ ನೂರಾರು ಪುಟಾಣಿಗಳು 'ಬೆಳದಿಂಗಳ ಊಟ ಸವಿದು, ತಮ್ಮಿಚ್ಛೆಯ ಆಟವಾಡಿ ಸಂಭ್ರಮಿಸಿದ್ದಾರೆ. ಏ.30ರವರೆಗೆ ನಡೆಯುವ 'ಬೇಸಿಗೆಬಂಡಿ' ಬೇಸಿಗೆ ಶಿಬಿರದಲ್ಲಿ 150 ವಿದ್ಯಾರ್ಥಿಗಳು ಭಾಗವಹಿಸಿದ್ದು, ನಾಟಕ, ದೇಶಿ ಹಾಗೂ ಸಾಹಸ ಕ್ರೀಡೆಗಳು, ಚಿತ್ರಕಲೆ, ಸಂಗೀತ, ಜಾನಪದ ಸಂಗೀತ, ನೃತ್ಯ ಕಲಿಸುವುದರ ಜೊತೆಗೆ ಕೆಸರು ಗದ್ದೆ ಓಟ, ರಸಪ್ರಶ್ನೆ, ಭಾಷಣ ಸ್ಪರ್ಧೆ, ಚರ್ಚಾ ಸ್ಪರ್ಧೆ ಹಾಗೂ ಹಳ್ಳಿಗಳಿಗೆ ಭೇಟಿ ನೀಡಲಾಗುತ್ತಿದೆ. ರೇಡಿಯೋ ಸಂದರ್ಶನ, ರಾಮಾಯಣ–ಮಹಾಭಾರತ ಸೇರಿದಂತೆ ಹಲವು ನೀತಿ ಕಥೆಗಳನ್ನು ಹೇಳಿಕೊಡುವುದು ಸೇರಿದಂತೆ ಹತ್ತು–ಹಲವು ವಿಭಿನ್ನ ಕಾರ್ಯಕ್ರಮಗಳ ಮೂಲಕ ಮಕ್ಕಳಿನ ಪ್ರತಿಭೆ ಹೊರತರುವ ಪ್ರಯತ್ನ ನಡೆಸಲಾಗುತ್ತಿದೆ. 8 ಮಂದಿ ಶಿಕ್ಷಕರ ಜೊತೆಗೆ ಹತ್ತಾರು ಸಂಪನ್ಮೂಲ ವ್ಯಕ್ತಿಗಳು ಮಕ್ಕಳ ಕಲಿಕೆಗೆ ಬೆನ್ನೆಲುಬಾಗಿ ಶ್ರಮಿಸುತ್ತಿದ್ದಾರೆ.

ರಾಜ್ಯ ರಕ್ಷಣೆಗೆ ಜೆಡಿಎಸ್ ಬೆಂಬಲಿಸಿ

ಜನತಾ ಜಲಧಾರೆ ವೇದಿಕೆ ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಕರೆ



■ ನನ್ನ ಜೀವನ ಹೋರಾಟಕ್ಕೆ ಮುಡುಪು ■ ತೀರ್ಪು ಕೊಡುವ ಮೂಲಕ ಶಕ್ತಿ ಪ್ರದರ್ಶಿಸಿ

ಶ್ರೀರಂಗಪಟ್ಟಣ;ಏ.16(ವಿನಯ್ ಕಾರೇಕುರ)–ನಾಡು, ನುಡಿ, ಜಲದ ವಿಚಾರಕ್ಕಾಗಿ 1962 ರಿಂದ 60 ವರ್ಷ ಕಾಲ ನಿರಂತರವಾಗಿ ಹೋರಾಟ ಮಾಡಿಕೊಂಡು ಬರುತ್ತಿದ್ದು, ರಾಜ್ಯದ ರಕ್ಷಣೆಗೆ ಜೆಡಿಎಸ್ ಪ್ರಾದೇಶಿಕ ಪಕ್ಷವನ್ನು ಬೆಂಬಲಿಸಬೇಕು ಎಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಕರೆ ನೀಡಿದ್ದಾರೆ.

ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ಏರ್ಪಡಿಸಲಾಗಿದ್ದ ಜನತಾ ಜಲಧಾರೆ ವೇದಿಕೆ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡಿಗರು ಕುಡಿಯುವ ನೀರಿಗೂ ಭಿಕ್ಷೆ ಬೇಡಬಾರದು, ಈ ಬಾರಿ ಕನ್ನಡಿಗರು ಹೆಚ್.ಡಿ.ಕುಮಾರಸ್ವಾಮಿ ಅವರ ಕೈ ಬಲಪಡಿಸುವ ಮೂಲಕ ಕನ್ನಡಿಗರ ಶಕ್ತಿ ಏನೆಂಬುದನ್ನು ತೋರಿಸಬೇಕಿದೆ ಎಂದರು.

ಜನತಾ ಜಲಧಾರೆ ಎಂಬುದು ಕುಮಾರಸ್ವಾಮಿ ಅವರ ಕಲ್ಪನೆಯ ಕೂಸಾಗಿದ್ದು, ಪ್ರಾದೇಶಿಕ ಪಕ್ಷದ ಹಾಗೂ ರಾಜ್ಯದ ಉಳಿವಿಗಾಗಿ ನಾನು ನಿರಂತರ ಹೋರಾಟ ಮಾಡುತ್ತಿದ್ದೇನೆ ಈ ಜಲಧಾರೆ ಹೋರಾಟ ಚುನಾವಣಾ ತಯಾರಿಯಲ್ಲ. ಇದು ಜನತೆಯ ಹಿತಕ್ಕಾಗಿ.

> **ಕೆಆರ್‌ಎಸ್ ಅಣೆಕಟ್ಟೆ ಕಟ್ಟಲು ನಾಲ್ವಡಿ ಕೃಷ್ಣರಾಜ ಒಡೆಯರ್, ವಿಶ್ವೇಶ್ವರಯ್ಯ ಎಷ್ಟು ಶ್ರಮವಹಿಸಿದ್ದರು, ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ಬೆಂಗಳೂರಿಗರಿಗೆ ಕುಡಿಯುವ ನೀಡು ಕೊಡಲು ಆಗಲಿಲ್ಲ. ಈ ಬಗ್ಗೆ ಹೋರಾಟ ಮಾಡಲು ಬಿಜೆಪಿ ಸಂಸದರನ್ನ ಆಹ್ವಾನಿಸಿದ್ದೆ. ಆದರೆ ಬಿಜೆಪಿ, ಕಾಂಗ್ರೆಸ್‌ನ ಯಾವ ನಾಯಕರೂ ನನ್ನ ಜೊತೆ ಕೈ ಜೋಡಿಸಲಿಲ್ಲ. ಇದೀಗ ಬೆಂಗಳೂರು ಜನರಿಗೆ ಕುಡಿಯುವ ನೀರು ಕೊಡುತ್ತೇವೆ ಎಂದು ಬೀದಿಗಿಳಿದಿದ್ದಾರೆ. ಒಂದು ಸ್ಥಾನ ಕಳೆದುಕೊಳ್ಳಲು ಯಾವ ಪಕ್ಷಕ್ಕೂ ಇಷ್ಟವಿಲ್ಲ. ಎಲ್ಲರೂ ಎಲ್ಲದರಲ್ಲೂ ರಾಜಕೀಯ ಮಾಡುತ್ತಾರೆ. ಇಂತಹ ನಾಟಕೀಯ ಬೆಳವಣಿಗೆಗಳು ನನ್ನ ಮನಸ್ಸಿಗೆ ನೋವುಂಟು ಮಾಡಿದೆ.**
> – ಹೆಚ್.ಡಿ. ದೇವೇಗೌಡ, ಮಾಜಿ ಪ್ರಧಾನಿ.

ನನ್ನ ಶರೀರ ಇರುವವರೆಗೂ ರಾಜ್ಯದಹಿತ ಹಾಗೂ ನೀರಾವರಿ ಯೋಜನೆಗಳಿಗಾಗಿ ನಿರಂತರ ಹೋರಾಟ ಮಾಡುತ್ತೇನೆ ಎಂದರು.

ರಾಜ್ಯದಲ್ಲೇ ಉಗಮಗೊಂಡು, ನಮ್ಮಲ್ಲೇ ಅಣೆಕಟ್ಟೆ ಇದ್ದರೂ, ಕುಡಿಯುವ ನೀರು ಹಾಗೂ ರೈತರ ವ್ಯವಸಾಯಕ್ಕೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ ಪಕ್ಕದ ತಮಿಳುನಾಡು ರಾಜ್ಯದಲ್ಲಿ ವರ್ಷಕ್ಕೆ ಮೂರು ಬೆಳೆ ಬೆಳೆಯುತ್ತಾರೆ ಇದು ದುರಂತವೇ ಸರಿ ದೇವೇಗೌಡರು ಬೇಸರ ವ್ಯಕ್ತ ಪಡಿಸಿದರು.

ನಾನು ಪ್ರಧಾನಿಯಾಗಿದ್ದಾಗ ಮೇಕೆದಾಟು ಅಣೆಕಟ್ಟೆ ನಿರ್ಮಾಣಕ್ಕೆ ಒಪ್ಪಿಗೆ ಕೇಳಿ, 650 ಕೋಟಿ ವೆಚ್ಚದ ಅಂದಾಜು ಪಟ್ಟಿ ತಯಾರಿಸಿದ್ದೆ. ತಮಿಳುನಾಡಿಗೆ ನೀರಿನ ತೊಂದರೆ ಆದರೆ ನೀರು ಬಿಟ್ಟುಕೊಡುವ ಬಗ್ಗೆಯೂ ಆ ವೇಳೆ ಚರ್ಚಿಸಿದ್ದೆವು. ಆದರೆ ತಮಿಳುನಾಡಿನ ಅಂದಿನ ಸಿಎಂ ಒಪ್ಪಿರಲಿಲ್ಲ. ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲೂ ಅಂತರಾಜ್ಯ ನದಿಗಳ ವಿವಾದ ಬಗೆಹರಿಸಲು ನ್ಯಾಯಾಧಿಕರಣ ಇದೆ. ಆದರೆ ಇಲ್ಲಿ ಟ್ರಿಬ್ಯೂನಲ್ ಮೂಲಕ ಅನ್ಯಾಯ ಮಾಡಿದರು ಎಂದು ಬೇಸರ ವ್ಯಕ್ತಪಡಿಸಿದರು.

ಇಡೀ ಜೀವನ ಹೋರಾಟಕ್ಕೆ ಮುಡಿಪಾಗಿಟ್ಟಿದ್ದೇನೆ, ನೀರಿಗಾಗಿ ಎರಡು ಬಾರಿ ರಾಜೀನಾಮೆ ಸಹ ನೀಡಿದ್ದೇನೆ. ನೀರು ನಮ್ಮದು ಆದರೆ ನಮಗೆ ಕುಡಿಯಲು ಇಲ್ಲ. ನೀರಿಗಾಗಿ ನಾನು ಹೋರಾಟ ಮಾಡುತ್ತಿದ್ದ ವೇಳೆ ಪ್ರಧಾನಿ ವಾಜಪೇಯಿ ಕಣ್ಣೀರಿಟ್ಟು ನನ್ನ ಬಳಿ ಮಾತನಾಡಿದ್ದರು. ತಮಿಳುನಾಡಿನ 30 ಸಂಸದರು ಬೆಂಬಲ ನೀಡುತ್ತಿದ್ದಾರೆ. ನಾನು ಏನು ಮಾಡಲು ಆಗಲ್ಲ, ದಯವಿಟ್ಟು ನ್ಯಾಯಾಲಯದಲ್ಲಿ ಹೋರಾಟ ಮಾಡಿ ಎಂದಿದ್ದರು ಎಂದು ಹಿಂದಿನ ಘಟನೆಯನ್ನು ಸ್ಮರಿಸಿದರು.

ಇಂದಿರಾ ಗಾಂಧಿಯನ್ನ ಚಿನ್ನದಲ್ಲಿ ತೂಗಿಸಿದ್ರು, ಆದರೆ ಇಂದಿರಾಗಾಂಧಿ ರಾಜ್ಯಕ್ಕೆ ಒಂದು ರೂಪಾಯಿ ಕೊಟ್ಟಿದ್ದರಾ? ಎಂದು ಪ್ರಶ್ನಿಸಿದ ಅವರು ನಮ್ಮ ಕುಮಾರಸ್ವಾಮಿ ಸಿಎಂ ಆದರೆ ನಮ್ಮ ನೀರು ನಮ್ಮದು, ನೀವು ತೀರ್ಪು ಕೊಡಬೇಕು, ನೀವೆಲ್ಲರು ಸಹ ಶಕ್ತಿ ಪ್ರದರ್ಶನ ಮಾಡಿ. ಎಲ್ಲರು ಸಹ ಆಶೀರ್ವಾದ ಮಾಡಿ ಎಂದರು.

ಕಾಂಗ್ರೆಸ್ ರಾಜಕೀಯ: ಜೆಡಿಎಸ್ ಪಕ್ಷ ಮೇಕೆದಾಟು ಯೋಜನೆಗೆ ಡಿಪಿಆರ್ ಸಿದ್ಧಪಡಿಸಿತ್ತು ಆದರೆ ಕಾಂಗ್ರೆಸ್ ಪಕ್ಷ ಈ ವಿಷಯವನ್ನು ಮುಂದಿಟ್ಟುಕೊಂಡು ಇದೀಗ ರಾಜಕೀಯ ಮಾಡುತ್ತಿದೆ ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಾ ತಿಳಿಸಿದರು.

ರೈತರ ಸಾಲ ಮನ್ನಾ ಮಾಡಲು ಕುಮಾರಸ್ವಾಮಿ ಸಿಎಂ ಆದರು, ಆದರೆ ಅವರಿಗೆ ಸಮ್ಮಿಶ್ರ ಸರ್ಕಾರದಲ್ಲಿ ಕೊಡಬಾರದ ಕಷ್ಟ ಕೊಟ್ಟಿದ್ದರು. ಸಹ ಸಾಲ ಮನ್ನಾ ಮಾಡುವ ಮೂಲಕ ರೈತರ ಪರ ನಿಂತರು. ಪಾಂಡವಪುರದಲ್ಲಿ ಬಸ್ ನೀರಿಗೆ ಬಿದ್ದು, ಸಾವು, ನೋವು ಸಂಭವಿಸಿದ್ದಾಗ ತಮ್ಮ ತಂದೆ ದೇವೇಗೌಡ ಪುತ್ಥಳಿ ಅನಾವರಣ ಕಾರ್ಯಕ್ರಮವನ್ನು ಬಿಟ್ಟು ಸ್ಥಳಕ್ಕೆ ದೌಡಾಯಿಸಿ ಕಣ್ಣೀರಿಟ್ಟರು. ಇಂತಹ ಮುಖ್ಯಮಂತ್ರಿಗಳು ಪ್ರಸ್ತುತ ದಿನಗಳಲ್ಲಿ ನೋಡಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಪ್ರಸ್ತುತ ರಾಜ್ಯದಲ್ಲಿ ಹಲಾಲ್ ಕಟ್ ಹಾಗೂ ಜಟ್ಕಾ ಕಟ್ ಸೇರಿದಂತೆ ಇತರೆ ವಿಷಯಗಳಲ್ಲಿ ಅಶಾಂತಿ ಸೃಷ್ಟಿಸಲಾಗುತ್ತಿದೆ. ಇದರ ವಿರುದ್ಧವಾಗಿ ಮೊದಲು ಧ್ವನಿ ಎತ್ತಿ ಸರ್ಕಾರದ ವಿರುದ್ಧ ಚಾಟಿ ಬೀಸಿದ ನಮ್ಮ ಧೀಮಂತ ನಾಯಕ ಕುಮಾರಸ್ವಾಮಿ. ಅವರಿಗೆ ವೋಟಿನ ಹಿಂದೆ ಹೋಗುವ ಮನಸ್ಸಿದ್ದರೆ, ಅವರು ಬೇರೆ ರೀತಿ ಯೋಜನೆಗಳನ್ನು ಮಾಡುತ್ತಿದ್ದರು, ರೈತರ ಸಂಕಷ್ಟಕ್ಕೆ ಮಿಡಿಯುವ ಉದ್ದೇಶದಿಂದ ಜನತಾ ಜಲಧಾರೆ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಹಾಗಾಗಿ 2023ರ ಚುನಾವಣೆಯಲ್ಲಿ ಅವರಿಗೆ ಬೆಂಬಲ ವ್ಯಕ್ತಪಡಿಸಿ ಮುಖ್ಯಮಂತ್ರಿಯನ್ನಾಗಿ ಮಾಡಬೇಕು ಎಂದು ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ದೇವೇಗೌಡರ ಹೋರಾಟ: ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮೇಲುಕೋಟೆ ಶಾಸಕ ಸಿ.ಎಸ್. ಪುಟ್ಟರಾಜು ಅವರು ಮಾತನಾಡಿ ಕಾವೇರಿ ನೀರಿನ ವಿಚಾರದಲ್ಲಿ ಮಂಡ್ಯ ಜಿಲ್ಲೆಗೆ ಅನ್ಯಾಯವಾಗಿತ್ತು. ಅಂತಹ ಸಂದರ್ಭದಲ್ಲಿ ನಮ್ಮ ಜೊತೆ ಹೋರಾಟ ಮಾಡಿದ್ದು ನಮ್ಮ ಹೆಚ್.ಡಿ. ದೇವೇಗೌಡರು ಎಂದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೇಕೆದಾಟಿನ ಬಳಿ ಡ್ಯಾಂ ಕಟ್ಟಲು, ದೇವೇಗೌಡರ ಸೂಚನೆ ಮೇರೆಗೆ ಯೋಜನೆ ಜಾರಿಗೆ ತಂದಿತ್ತು. ಆದರೆ ಪ್ರಸ್ತುತ ಮಹಾನ್ ವ್ಯಕ್ತಿಗಳು ಈ ವಿಷಯವಾಗಿ ರಾಜಕಾರಣ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ವಿರುದ್ಧ ಕಿಡಿಕಾರಿದ ಅವರು, 2023 ಕ್ಕೆ ರಾಜ್ಯದ ಸಿಎಂ ಆಗಿ ಕುಮಾರಸ್ವಾಮಿ ಮತ್ತೊಮ್ಮೆ ಅಧಿಕಾರ ಹಿಡಿಯಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯರಾದ ಶರವಣ, ಅಪ್ಪಾಜಿಗೌಡ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ತಾಲೂಕು ಅಧ್ಯಕ್ಷ ಪೈ.ಮುಕುಂದ, ಯೂತ್ ಅಧ್ಯಕ್ಷ ಕಡತನಾಳು ಸಚಿಜಯ್, ಪುರಸಭೆ ಅಧ್ಯಕ್ಷೆ ನಿರ್ಮಲಾ, ಉಪಾಧ್ಯಕ್ಷ ಕೃಷ್ಣಪ್ಪ ಸೇರಿದಂತೆ ಮುಖಂಡರುಗಳು ಹಾಗೂ ಕಾರ್ಯಕರ್ತರುಗಳು ಹಾಜರಿದ್ದರು.

ಶ್ರೀರಂಗಪಟ್ಟಣ ಪುರಸಭೆ ಉಪಾಧ್ಯಕ್ಷರಾಗಿ ಗಂಜಾ ಕೃಷ್ಣಪ್ಪ ಅವಿರೋಧವಾಗಿ ಆಯ್ಕೆ



ಶ್ರೀರಂಗಪಟ್ಟಣ,ಏ,16(ವಿನಯ್ ಕಾರೇಕುರ)–ಶ್ರೀರಂಗಪಟ್ಟಣ ಪುರಸಭೆ ಉಪಾಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಗಂಜಾ ಕೃಷ್ಣಪ್ಪ ಅವಿರೋಧವಾಗಿ ಶನಿವಾರ ಆಯ್ಕೆಯಾದರು.

ಎಸ್.ಪ್ರಕಾಶ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ತಹಸೀಲ್ದಾರ್ ಶ್ವೇತ ಎನ್.ರವೀಂದ್ರ ನೇತೃತ್ವದಲ್ಲಿ ಚುನಾವಣೆ ನಡೆಯಿತು.

23 ಸದಸ್ಯರ ಸ್ಥಾನವನ್ನು ಹೊಂದಿರುವ ಪಟ್ಟಣ ಪುರಸಭೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ಬೆಂಬಲಿತ ಕೃಷ್ಣಪ್ಪ ಹಾಗೂ ಪಕ್ಷೇತರ ಸದಸ್ಯ ಎಸ್.ನಂದೀಶ್ ನಾಮಪತ್ರ ಸಲ್ಲಿಸಿದ್ದರು. ಬಳಿಕ ನಿಗದಿತ ಸಮಯದೊಳಗೆ ನಂದೀಶ್ ತಮ್ಮ ನಾಮಪತ್ರವನ್ನು ವಾಪಸ್ ಪಡೆದಿದ್ದರಿಂದ ಕೃಷ್ಣಪ್ಪರನ್ನು ಅವಿರೋಧವಾಗಿ ಆಯ್ಕೆಯಾಗಿದ್ದಾರೆಎಂದು ತಹಸೀಲ್ದಾರ್ ಶ್ವೇತ ಎನ್.ರವೀಂದ್ರ ಘೋಷಣೆ ಮಾಡಿದರು.

ನೂತನ ಉಪಾಧ್ಯಕ್ಷ ಕೃಷ್ಣಪ್ಪ ಮಾತನಾಡಿ, ಸರ್ವ ಸದಸ್ಯರ ಒಮ್ಮತದ ತೀರ್ಮಾನದೊಂದಿಗೆ ಪುರಸಭೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವುದಾಗಿ ಭರವಸೆ ನೀಡಿದರು.

ಪುರಸಭೆ ಮುಖ್ಯಾಧಿಕಾರಿ ಮಹದೇವಯ್ಯ, ಅಧ್ಯಕ್ಷೆ ನಿರ್ಮಲಾ ವೇಣುಗೋಪಾಲ್ ಸೇರಿದಂತೆಇತರೆ ಸದಸ್ಯರು ನೂತನ ಉಪಾಧ್ಯಕ್ಷರಿಗೆ ಸಿಹಿ ತಿನಿಸಿ ಅಭಿನಂದಿಸಿದರು.

ಮಂಡ್ಯ ವಿವಿ ಅತ್ಯುತ್ಕೃಷ್ಟ ಮಟ್ಟಕ್ಕೆ ಬೆಳೆದು ಮಾದರಿಯಾಗಬೇಕು

ಕುಲಪತಿಗಳೊಂದಿಗೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ್ ನಾರಾಯಣ್ ಚರ್ಚೆ



ಮಂಡ್ಯ,ಏ.16(ಮೋಹನ್‌ರಾಜ್)–ಇಲ್ಲಿನ ಸ್ಥಳೀಯ ವಿಶ್ವವಿದ್ಯಾಲಯವನ್ನುಅತ್ಯುತ್ಕೃಷ್ಟ ಮಟ್ಟಕ್ಕೆ ಬೆಳೆಸಬೇಕಾಗಿದ್ದು, ಸ್ಥಳೀಯ ಕೃಷಿ ಮತ್ತು ಕೃಷಿಕ ಸಮುದಾಯದ ಸಬಲೀಕರಣಕ್ಕೆ ನೆರವಾಗುವಂತಹ ತಂತ್ರಜ್ಞಾನದ ಅನ್ವಯಿಕತೆ ಹಾಗೂ ಉದ್ಯೋಗ ಸೃಷ್ಟಿಗೆ ಒತ್ತು ಕೊಡಬೇಕು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ್ ತಿಳಿಸಿದ್ದಾರೆ.

ವಿಶ್ವವಿದ್ಯಾಲಯವನ್ನು ಗುಣಮಟ್ಟದೊಂದಿಗೆ ಸ್ಥಳೀಯ ಪರಿಸರಕ್ಕೆ ಪೂರಕವಾಗಿ ಬೆಳೆಸಲು ಏನೇನು ಮಾಡಬೇಕು ಎನ್ನುವುದನ್ನು ಕುರಿತು ಶನಿವಾರ ಅವರು ವಿವಿ ಕುಲಪತಿ ಪ್ರೊಪುಟ್ಟರಾಜು ಮತ್ತು ಎಲ್ಲಾ ವಿಭಾಗಗಳ ಮುಖ್ಯಸ್ಥರೊಂದಿಗೆ ಸುದೀರ್ಘ ಚರ್ಚೆ ನಡೆಸಿದರು.

ಬಳಿಕ ಮಾತನಾಡಿದ ಅವರು, 'ವಿಶ್ವ ವಿದ್ಯಾಲಯಗಳು ಬೇರಾವುದೋ ಮಾದರಿಗಳನ್ನು ಕುರುಡಾಗಿ ಅನುಸರಿಸುವುದು ಸರಿಯಲ್ಲ. ಬದಲಿಗೆ, ಸಮಾಜಕ್ಕೆ ಪೂರಕವಾದ ಶಿಕ್ಷಣ ಕ್ರಮವನ್ನು ಒದಗಿಸಬೇಕು. ಇದರ ಲಾಭವು ಸ್ಥಳೀಯ ಯುವ ಜನರಿಗೆ ಸಿಗುವಂತೆ ಮಾಡಲು ಕೈಗಾರಿಕೆಗಳೊಂದಿಗೆ ಸಹಯೋಗ ಮತ್ತು ವಿದೇಶಿ ವಿ.ವಿ.ಗಳೊಂದಿಗೆ ಟ್ವಿನ್ನಿಂಗ್ ಪದವಿ ಕಾರ್ಯಕ್ರಮಗಳಿಗೆ ಆದ್ಯತೆ ಕೊಡಬೇಕು. ಮಂಡ್ಯ ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯವಿದ್ದು, ಕೃಷಿಕರು ಕಬ್ಬಿನ ಬೆಳೆಯನ್ನೇ ಆಶ್ರಯಿಸಿದ್ದಾರೆ.ಇದರಲ್ಲಿ ಹೆಚ್ಚಿನ ಇಳುವರಿ, ಸಿಹಿಯ ಅಂಶ, ನೀರಿನ ಮಿತ ಬಳಕೆ ಇವೆಲ್ಲವನ್ನೂ ಸಾಧಿಸುವಂತಹ ತಂತ್ರಜ್ಞಾನಗಳನ್ನು ಮಂಡ್ಯ ವಿವಿ ಪರಿಚಯಿಸಬೇಕು. ಈ ಗುರಿಗಳನ್ನೆಲ್ಲ ತಲುಪಲು ಅಲ್ಪಾವಧಿ ಮತ್ತು ದೀರ್ಘಾವಧಿ ಯೋಜನೆಗಳನ್ನು ರೂಪಿಸಬೇಕು ಎಂದುಅವರು ನುಡಿದರು.

ವಿಚಾರ ವಿನಿಮಯದ ಒಂದು ಹಂತದಲ್ಲಿ ಕುಲಪತಿ ಪುಟ್ಟರಾಜು ಅವರು, ವಿ.ವಿ. ವತಿಯಿಂದ ಎಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸುವ ಅಗತ್ಯವಿದೆ ಎಂದರು. ಆದರೆ ಸಚಿವರು, 'ಈಗಾಗಲೇ ಇರುವ ಎಂಜಿನಿಯರಿಂಗ್ ಕಾಲೇಜುಗಳಲ್ಲೇ ಸಾವಿರಾರು ಸೀಟುಗಳು ಖಾಲಿ ಉಳಿದಿವೆ. ಆದ್ದರಿಂದ ಇದು ಅಗತ್ಯವಿಲ್ಲ. ಇದರ ಬದಲು, ಸ್ಥಳೀಯ ಉದ್ದಿಮೆಗಳನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಮೈಸೂರು ವಿ.ವಿ.ಯಿಂದ ನೆರವಿನ ಭರವಸೆ: ಈಗಷ್ಟೇ ಪ್ರವರ್ಧಮಾನಕ್ಕೆ ಬರುತ್ತಿರುವ ಮಂಡ್ಯ ವಿ.ವಿ.ಯನ್ನು ಸದೃಢವಾಗಿ ಬೆಳೆಸಲು ಅಗತ್ಯ ನೆರವು ನೀಡುವಂತೆ ಮೈಸೂರು ವಿವಿ ಕುಲಪತಿ ಪ್ರೊ.ಹೇಮಂತಕುಮಾರ್‌ಅವರಿಗೆ ಸೂಚಿಸಿದರು. ಇದಕ್ಕೆ ಅವರು ಕೂಡ ಸಹಮತ ವ್ಯಕ್ತಪಡಿಸಿದರು. ಸಭೆಯಲ್ಲಿ ಮಾತನಾಡಿದ ಅವರು, ಹೊಸ ವಿ.ವಿ.ಯೊಂದು ಗಟ್ಟಿಯಾಗಿ ನೆಲೆಗೊಳ್ಳಬೇಕಾದರೆ ಹಲವು ರೀತಿ–ನೀತಿಗಳಿವೆ. ಹೊಸತರಲ್ಲಿ ಇಂತಹ ಸವಾಲುಗಳು ಅನಿವಾರ್ಯ ಮತ್ತು ಸಹಜ. ಮೈಸೂರು ವಿ.ವಿ. ಈ ನಿಟ್ಟಿನಲ್ಲಿ ತನ್ನ ಅನುಭವವನ್ನು ಮುಕ್ತವಾಗಿ ಹಂಚಿಕೊಳ್ಳಲಿದೆ ಎಂದರು.

ಮನುಷ್ಯನ ಒಳಿತಿಗಾಗಿ ಧರ್ಮಗಳ ಬಳಸಿಕೊಳ್ಳಬೇಕು ಎಂಬುದು ಡಾ.ಅಂಬೇಡ್ಕರ್ ಆಶಯವಾಗಿತ್ತು

■ ಸಂಸದ ಶ್ರೀನಿವಾಸ್ ಪ್ರಸಾದ್ ವಿವರಣೆ ■ ಡಾ.ಅಂಬೇಡ್ಕರ್ ವಿಶ್ವನಾಯಕ; ಡಾ.ದ್ವಾರಕನಾಥ್

ಮೈಸೂರು, ಏ.16(ಎಂಕೆ)–ವಿಶ್ವದ ಎಲ್ಲಾ ಧರ್ಮಗಳು ಭಾರತದಲ್ಲಿವೆ. ಒಂದು ಧರ್ಮ ಇನ್ನೊಂದು ಧರ್ಮವನ್ನು ಪರಸ್ಪರ ಗೌರವಿಸಿ, ಪ್ರೀತಿಸಬೇಕೆ ಹೊರತು ನಮ್ಮದೇ ಮೇಲು ಎಂದು ವೈಭವೀಕರಿಸಬಾರದು. ಧರ್ಮಗಳನ್ನು ಮನು ಷ್ಯನ ಒಳಿತಿಗಾಗಿ ಉಪಯೋಗಿಸಿಕೊಳ್ಳಬೇಕು ಎಂಬುದೇ ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಅವರಿಂದ ರಚಿತವಾದ ಸಂವಿಧಾನದ ಆಶಯ ಎಂದು ಸಂಸದ ವಿ.ಶ್ರೀನಿವಾಸ್ ಪ್ರಸಾದ್ ತಿಳಿಹೇಳಿದರು.

ಮೈಸೂರು ಜಿಲ್ಲಾ ವಕೀಲರ ಸಂಘದ ವತಿಯಿಂದ ನ್ಯಾಯಾಲಯದ ಆವರಣದಲ್ಲಿ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿ ಆಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಧರ್ಮದ ಅಮಲಿನಲ್ಲಿ ಗಲಾಟೆ ಮಾಡುವುದು ಸರಿಯಲ್ಲ. ಧರ್ಮ ಇರುವುದು ಮನಷ್ಯರ ಒಳಿತಿಗಾಗಿ ಎಂದು ಹೇಳಿದರು.

ಬಾಬಾಸಾಹೇಬ್ ಅಂಬೇಡ್ಕರ್ ಅವರು ಬೆಂಕಿಯ ಜ್ವಾಲೆಯಿಂದ ಎದ್ದು ಬಂದವರು ಎಂದು ಹೇಳುತ್ತೇವೆ. ತಮ್ಮ ಸಣ್ಣ ವಯಸ್ಸಿನಿಂದ ಕಷ್ಟಗಳನ್ನು ಎದುರಿಸಿ ಬೆಳೆದು ಬಂದಿದ್ದಾರೆ. ಭಾರತದಲ್ಲಿ ಅಂಬೇಡ್ಕರ್ ಅನುಭವಿಸಿದ ನೋವನ್ನು ಮತ್ಯಾವ ನಾಯಕರೂ ಅನುಭವಿಸಿಲ್ಲ ಆದ್ದರಿಂದಲೇ ಅವರನ್ನು ಮಹಾ ನಾಯಕ, ವಿಶ್ವಜ್ಞಾನಿ ಎಂದು ಕರೆಯುವುದು. ಇಂದು ನಾವೆಲ್ಲರೂ ಸಮಾಜದ ಮುಖ್ಯ ವಾಹಿನಿಗೆ ಬರುತ್ತಿದ್ದೇವೆ ಎಂದು ಹೇಳಿದರೆ, ಅದಕ್ಕೆ ಅಂಬೇಡ್ಕರ್ ನೀಡಿದ ಸಂದೇಶ, ತೋರಿದ ಮಾರ್ಗ ದಾರಿದೀಪವಾಗಿದೆ ಎಂದರು.

ಆಧ್ಯಾತ್ಮ ನಾಯಕ: ಬಾಬಾ ಸಾಹೇಬ್ ಅಂಬೇಡ್ಕರ್ ನಮ್ಮ ಆಧ್ಯಾತ್ಮ ನಾಯಕ. ದೇಶದಾದ್ಯಂತ ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ ಕುಗ್ರಾಮ ದಲ್ಲೂ ವರ್ಣನೆ ಮಾಡಲು ಸಾಧ್ಯವಾಗದಂತಹ ಸಡಗರ–ಸಂಭ್ರಮದಿಂದ ಅಂಬೇಡ್ಕರ್ ಅವರ ಜನ್ಮದಿನವನ್ನು ಆಚರಣೆ ಮಾಡಲಾಗುತ್ತಿದೆ ಎಂದು ಹೇಳಿದರು.

ದೇಶಕ್ಕೆ ಸ್ವಾತಂತ್ರ್ಯಬಂದ ನಂತರ ನೆಹರು ಮಂತ್ರಿ ಮಂಡಲದಲ್ಲಿ ದೇಶದ ಮೊದಲ ಕಾನೂನು ಸಚಿವರಾದ ಅಂಬೇಡ್ಕರ್ ಅವರು 'ಹಿಂದೂ ಕೋಡ್‌ಬಿಲ್' ಮಂಡನೆಗೆ ಅವಕಾಶ ನೀಡಲಿಲ್ಲ ಎಂಬ ಕಾರಣಕ್ಕೆ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟವರು. ಬ್ರಿಟಿಷರು ಆಡಳಿತದಲ್ಲಿ ನಡೆದ ಚಿಕಾಗೋ ರೌಂಡ್ ಟೇಬಲ್ ಕಾನ್ಫರೆನ್ಸ್‌ನಲ್ಲಿ ಬಿಟ್ರನ್ ಪ್ರಧಾನಿ ವಿನ್ಸೆಂಟ್ ಚರ್ಚಿಲ್ ನಗುತ್ತಾ, ಇನ್ನೂ ನಿಮ್ಮ ದೇಶದಲ್ಲಿ ಶೇ.80 ರಷ್ಟು ಅನಕ್ಷರಸ್ಥರು ಇದ್ದೀರಾ. ಮೂಢನಂಬಿಕೆಗಳು ಜಾಸ್ತಿ ಇವೆ. ಧರ್ಮದ ಬಗ್ಗೆ ವಿವಾದಗಳಿವೆ. ನಿಮಗಷ್ಟು ತಿಳುವಳಿಕೆಯಿಲ್ಲ ಎಂದು ಹಿಯಾಳಿಸಿದ್ದಕ್ಕೆ ಸರಿಯಾದ ಉತ್ತರವನ್ನು ಕೊಟ್ಟವರು ಬಾಬಾ ಸಾಹೇಬ್ ಅಂಬೇಡ್ಕರ್ ಎಂದು ಬಣ್ಣಿಸಿದರು.



ಮೈಸೂರು ಜಿಲ್ಲಾ ವಕೀಲರ ಸಂಘದ ವತಿಯಿಂದ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಸಂಸದ ವಿ.ಶ್ರೀನಿವಾಸ್ ಪ್ರಸಾದ್, ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಕುಂದೂರು ಮಠದ ಶರತ್‌ಚಂದ್ರ ಸ್ವಾಮೀಜಿ, ಮೈಸೂರು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಎಂ.ಎಲ್.ರಘುನಾಥ್, ಹಿಂದುಳಿದ ವರ್ಗಗಳ ಆಯೋಗ ಮಾಜಿ ಅಧ್ಯಕ್ಷ ಡಾ.ಸಿ.ಎಸ್.ದ್ವಾರಕನಾಥ್ ಮತ್ತಿತರರಿದ್ದರು.

ಅಂಬೇಡ್ಕರ್ ಬರೆದ ಸಂವಿಧಾನವನ್ನು ಮೊಟ್ಟ ಮೊದಲಿಗೆ ಸ್ವಾಗತ ಮಾಡಿದವರು ಅಮೆರಿಕಾ ದೇಶದ ಮುಖ್ಯನ್ಯಾಯಮೂರ್ತಿಗಳು. 'ಇಂಡಿಯನ್ ಕಾನ್ಸ್ಟಿಟ್ಯೂಷನ್ ಈಸ್ ಬೆಸ್ಟ್ ಕಾನ್ಸ್ಟಿಟ್ಯೂಷನ್ ಇನ್ ದ ವರ್ಲ್ಡ್' ಎಂದು ಹೇಳುತ್ತಾರೆ. ಅಷ್ಟು ವ್ಯವಸ್ಥಿತವಾಗಿ ಸಂವಿಧಾನ ರೂಪಿಸಲಾಗಿದೆ. ಈ ದೇಶದ ನೂರಾರು ಕೋಟಿ ಜನರು ಒಗ್ಗಟ್ಟಾಗಿ ನಾವೆಲ್ಲರೂ ಭಾರತೀಯರು ಎಂಬ ಮನಸ್ಥಿತಿ, ಚಿಂತನೆ ಬರಬೇಕಾಗಿದೆ ಎಂದರು.

ವಿಶ್ವನಾಯಕ: ಹಿಂದುಳಿದ ವರ್ಗಗಳ ಆಯೋಗ ಮಾಜಿ ಅಧ್ಯಕ್ಷ ಡಾ.ಸಿ.ಎಸ್.ದ್ವಾರಕನಾಥ್ ಮಾತನಾಡಿ, ಬಾಬಾ ಸಾಹೇಬ್ ಅಂಬೇಡ್ಕರ್ ಇತರೆ ಮುಖಗಳನ್ನು ನೋಡದ ನಾವು ಅವರನ್ನು ಮೊದಲು ಗ್ರಹಿಸಿದ್ದು, ಅವರೊಬ್ಬ ದಲಿತ ನಾಯಕ, ಅದಾದ ನಂತರ ಸಂವಿಧಾನ ಶಿಲ್ಪಿ ಎಂದೆವು. 1993ರ ಬಳಿಕ ಅವರ ಬಗ್ಗೆ ಹೆಚ್ಚೆಚ್ಚು ನಮ್ಮ ಗಮನಕ್ಕೆ ಬಂತು. ಅದು ಮಹಾರಾಷ್ಟ್ರ ಸರ್ಕಾರ ಅಂಬೇಡ್ಕರ್ ಅವರ ವಾಲ್ಯೂಮ್‌ಗಳನ್ನು ಪ್ರಕಟಿಸಿದಾಗ. ನಾನು ಅಮೆರಿಕಾ ಕೊಲಂಬೋ ವಿವಿಗೆ ಹೋಗಿದ್ದೆ, ಅವರನ್ನು ನೆಲ್ಸನ್ ಮಂಡೇಲಾ, ಅಬ್ರಹಾಂ ಲಿಂಕನ್‌ರಂತಹ ನಾಯಕರೊಂದಿಗೆ ಹೋಲಿಕೆ ಮಾಡಿ ಅಧ್ಯಯನ ನಡೆಸಿದಾಗ ತಿಳಿದದ್ದು ಅಂಬೇಡ್ಕರ್ ಬರೀ ದಲಿತ, ಭಾರತದ ನಾಯಕರಲ್ಲ. ಅವರೊಬ್ಬರು ವಿಶ್ವದ ನಾಯಕರು ಎಂದು.

ನಾನು ಯಾವುದೇ ಆಧಾರವಿಲ್ಲದೆ ಹೇಳುತ್ತಿಲ್ಲ. ಬಹುಶಃ ಅರ್ಥಶಾಸ್ತ್ರ ವಿಷಯ ಕುರಿತು ಭಾರತದಲ್ಲಿ ಮೊಟ್ಟ ಮೊದಲ ಡಾಕ್ಟರೇಟ್ ಪಡೆದ ವ್ಯಕ್ತಿ ಅಂಬೇಡ್ಕರ್. ನೊಬೆಲ್ ಪ್ರಶಸ್ತಿ ಪಡೆದ ಅಮರ್ತ್ಯಸೇನ್ ಅವರೇ 'ಈ ಈಸ್ ದ ಮಾಸ್ಟರ್ ಆಫ್ ಮೈ ಎಕಾನಾಮಿಕ್ಸ್' ಎಂದು ಹೇಳುತ್ತಾರೆ. ನಾನು ಅರ್ಥಶಾಸ್ತ್ರದ ಒಂದು ವಿಷಯದಲ್ಲಿ ಅಧ್ಯಯನ ನಡೆಸಿದ್ದಕ್ಕೆ ನೊಬೆಲ್ ಪ್ರಶಸ್ತಿ ಸಿಕ್ಕಿದೆ ಎಂದಾದರೆ, ಅಂಬೇಡ್ಕರ್ ಅವರಿಗೆ ಇನ್ನೆಷ್ಟು ನೊಬೆಲ್ ಪ್ರಶಸ್ತಿ ಕೊಡಬೇಕಾಗಿತ್ತು ಎನ್ನುತ್ತಾರೆ. ಅವರು ಅತ್ಯಂತ ದೊಡ್ಡ ಅರ್ಥಶಾಸ್ತ್ರಜ್ಞರು. ಅದೇ ರೀತಿ ಅಂಬೇಡ್ಕರ್ ಬಹುದೊಡ್ಡ ಇತಿಹಾಸಕಾರರೂ, ಕೃಷಿ ತಜ್ಞರು, ನೀರಾವರಿ ಪರಿಣಿತರು ಆಗಿದ್ದರು ಎಂದು ಹೇಳಿದರು.

ಮುಖ್ಯಮಂತ್ರಿಗಳಿಂದ ಅಸ್ಪೃಶ್ಯತೆಯ ನಿವಾರಣೆ ಹೇಗೆ ಸಾಧ್ಯ?

ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರ ತೆಗೆಸಿದ ರಾಯಚೂರು ಜಿಲ್ಲಾ ನ್ಯಾಯಾಧೀಶರ ವಿರುದ್ಧ ಕ್ರಮಕೈಗೊಳ್ಳದ ರಾಜ್ಯದ ಮುಖ್ಯಮಂತ್ರಿಗಳಿಂದ ಅಸ್ಪೃಶ್ಯತೆಯ ನಿವಾರಣೆ ಹೇಗೆ ಸಾಧ್ಯ?. ನ್ಯಾಯಾಧೀಶರ ವಿರುದ್ಧ ಕ್ರಮಕೈಗೊಳ್ಳದ ಮುಖ್ಯಮಂತ್ರಿಗಳು ಸಂತೋಷಪಡುತ್ತಾ ಮುಂದಿನ ಬಜೆಟ್‌ನಲ್ಲಿ ಅಸ್ಪೃಶ್ಯತೆಯ ನಿವಾರಣೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಾಗಿ ಹೇಳುತ್ತಾರೆ. ಕೊಪ್ಪಳದಲ್ಲಿ ದೇಗುಲ ಪ್ರವೇಶಿಸಿದ 3 ವರ್ಷದ ಬಾಲಕನಿಗೆ 10 ಸಾವಿರ ದಂಡ ವಿಧಿಸಿರುವುದನ್ನು ನೋಡಿದರೆ, ಯಾವ ರೀತಿ ಅಸ್ಪೃಶ್ಯತೆಯ ನಿವಾರಣೆ ಮಾಡುತ್ತೀರಿ ಎಂಬುದನ್ನು ತಾವೇ ಹೇಳಬೇಕು.

– ವಿ.ಶ್ರೀನಿವಾಸ್ ಪ್ರಸಾದ್, ಸಂಸದ

> ಮೀಸಲಾತಿ ಎಂಬುದು ಬಡತನ ನಿರ್ಮೂಲನಾ ಕಾರ್ಯಕ್ರಮವಲ್ಲ. ಸಾಮಾಜಿಕ ಕಳಂಕಕ್ಕಾಗಿ ನೀಡುತ್ತಿರುವ ಸಾಮಾಜಿಕ ನ್ಯಾಯದ ಕಾರ್ಯಕ್ರಮ. ಅಂಬೇಡ್ಕರ್ ಅವರನ್ನು ಕೋಟ್ ಮಾಡದೆ ಯಾವುದೇ ಜಡ್ಜ್‌ಮೆಂಟ್ ಕೊಡಲು ಸಾಧ್ಯವಿಲ್ಲ. ಹಿಜಾಬ್ ಕುರಿತ ತೀರ್ಪಿನಲ್ಲಿ ಆರ್ಟಿಕಲ್ 25(ಧಾರ್ಮಿಕ ಹಕ್ಕು)ರ ಕುರಿತು ಹೇಳು ಹೇಳುತ್ತೀರಿ. ಆರ್ಟಿಕಲ್ 15 ಮತ್ತು 25ರ ನಡುವೆ ತೀರ್ಪಿನಲ್ಲಿ ಡಿಕ್ರಿಯಾಗಿರುವುದರ ಬಗ್ಗೆ ಗಂಭೀರವಾಗಿ ಯೋಜನೆ ಮಾಡಬೇಕಾಗುತ್ತದೆ.
> – ಡಾ.ಸಿ.ಎಸ್.ದ್ವಾರಕನಾಥ್, ಹಿಂದುಳಿದ ವರ್ಗಗಳ ಆಯೋಗ ಮಾಜಿ ಅಧ್ಯಕ್ಷ

ಇದೇ ವೇಳೆ 2019ನೇ ಸಾಲಿನ ಡಾ.ಬಿ.ಆರ್.ಅಂಬೇಡ್ಕರ್ ನ್ಯಾಷನಲ್ ಫೆಲೋಶಿಪ್ ಪ್ರಶಸ್ತಿ ಪಡೆದ ವಕೀಲ ಎಸ್.ಉಮೇಶ್ ಹಾಗೂ 2021ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ಪಡೆದ ಕೆ.ಗೋವಿಂದರಾಜು ಅವರನ್ನು ಅಭಿನಂದಿಸಲಾಯಿತು. ಕುಂದೂರು ಮಠದ ಶರತ್‌ಚಂದ್ರ ಸ್ವಾಮೀಜಿ, ಮೈಸೂರು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಎಂ.ಎಲ್.ರಘುನಾಥ್, ಕರ್ನಾಟಕ ರಾಜ್ಯ ವಕೀಲರ ಪರಿಷತ್ ಉಪಾಧ್ಯಕ್ಷ ಬಿ.ಆರ್.ಚಂದ್ರಮೌಳಿ, ವಕೀಲರಾದ ಹೆಚ್.ಎಸ್.ಮಹದೇವಸ್ವಾಮಿ, ಜಿ.ಎಂ.ನಾಗೇಶ್, ಬಿ.ಎಸ್.ಭಾಗ್ಯಮ್ಮ, ಎನ್.ಪುನೀತ್, ಭೀಮಯ್ಯ, ವಿಷ್ಣು, ಮೇಘನಾ, ಸುರೇಶ್, ಗಿರೀಶ್, ಸಂದೀಪ್ ಮತ್ತಿತರರು ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟದಲ್ಲಿ ಬೇಕಾಬಿಟ್ಟಿ ವಾಹನ ಚಾಲನೆ

ಬ್ರೇಕ್ ಹಾಕಲು ಪೊಲೀಸ್ ಕ್ರಮ

ಮೈಸೂರು, ಏ.16(ಎಸ್‌ಬಿಡಿ)–ಮೈಸೂರಿನ ಚಾಮುಂಡಿಬೆಟ್ಟದ ರಸ್ತೆಯಲ್ಲಿ ಅಡ್ಡಾದಿಡ್ಡಿ ವಾಹನ ಓಡಿಸುವವರಿಗೆ ಬ್ರೇಕ್ ಹಾಕಲು ಪೊಲೀಸರು ವಿಶೇಷ ಕಾರ್ಯಾಚರಣೆ ಆರಂಭಿಸಿದ್ದಾರೆ. ಬೆಟ್ಟದ ರಸ್ತೆಗಳಲ್ಲಿ ಯುವಕರು ದ್ವಿಚಕ್ರ ವ್ಹೀಲಿಂಗ್ ಮಾಡುತ್ತಾರೆ, ಅತೀ ವೇಗವಾಗಿ ಚಾಲಿಸಿ ಜನರನ್ನು ಭಯಭೀತಗೊಳಿಸುವುದರ ಜೊತೆಗೆ ಕರ್ಕಶ ಹಾರ್ನ್‌ನಿಂದ ಕಿರಿಕಿರಿ ಮಾಡುತ್ತಾರೆ ಎಂಬ ದೂರುಗಳು ಸಾರ್ವಜನಿಕರಿಂದ ಕೇಳಿಬಂದ ಹಿನ್ನೆಲೆಯಲ್ಲಿ ಮೈಸೂರಿನ ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಂಚಾರ ಪೊಲೀಸರು ಮತ್ತೆ ಆಪರೇಷನ್ ಚಾಮುಂಡಿ ಕಾರ್ಯಾಚರಣೆಯನ್ನು ಚುರುಕುಗೊಳಿಸಿದ್ದಾರೆ.

ಬೆಟ್ಟದ ತಾವರೆಕಟ್ಟೆ ಬಳಿ ಎಸಿಪಿಗಳಾದ ಪೂರ್ಣಚಂದ್ರ ತೇಜಸ್ವಿ, ಗಂಗಾಧರ ಮೂರ್ತಿ ಸಮ್ಮುಖದಲ್ಲಿ ವಿವಿಧ ಠಾಣೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದರು. ಉತ್ತನಹಳ್ಳಿ ಕಡೆಯಿಂದ ಬೆಟ್ಟಕ್ಕೆ ಸಂಪರ್ಕಿಸುವ ರಸ್ತೆಯಲ್ಲಿ ಕೆ.ಆರ್.ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಮಂಜುನಾಥ್ ಇನ್ನಿತರ ಅಧಿಕಾರಿಗಳು ಹಾಗೂ ಸಿಬ್ಬಂದಿ ಹದ್ದಿನ ಕಣ್ಣಿಟ್ಟಿದ್ದರು. ಈ ವೇಳೆ ಹಲವು ವಾಹನಗಳನ್ನು ತಡೆದು, ದಾಖಲೆಗಳ ಪರಿಶೀಲನೆ ನಡೆಸುವ ಮೂಲಕ ಕಾರ್ಯಾಚರಣೆ ಬಗ್ಗೆ ವಾಹನ ಸವಾರರಲ್ಲಿ ಜಾಗೃತಿ ಮೂಡಿಸಿದರು. ಅಜಾಗರೂಕ ಚಾಲನೆ ಕಾನೂನು ಬಾಹಿರ ಹಾಗೂ ಅಪಾಯಕಾರಿ. ಯಾರದೋ ನಿರ್ಲಕ್ಷ್ಯಕ್ಕೆ ಮತ್ಯಾರಿಗೋ ತೊಂದರೆಯಾಗುತ್ತದೆ. ನಗರ ಸಾರಿಗೆ ಬಸ್‌ಗಳು ಸೇರಿದಂತೆ ಕಾರುಗಳು ಸಂಚಾರ ಹೆಚ್ಚಾಗಿರುತ್ತದೆ. ಈ ನಿಟ್ಟಿನಲ್ಲಿ ಪೊಲೀಸರು ಇಂದಿನಿಂದ ಹೆಚ್ಚಿನ ನಿಗಾ ವಹಿಸಿದ್ದಾರೆ. ಹೀಗೆ ಅಪಾಯ ಲೆಕ್ಕಿಸದೆ ಸಾರ್ವಜನಿಕರ ಪ್ರಾಣಕ್ಕೂ ಕಂಟಕ ತರುವ ವಾಹನ ಸವಾರರನ್ನು ಹಿಡಿದು, ದಂಡದ ಜೊತೆಗೆ ಶಿಸ್ತು ಕ್ರಮ ಕೈಗೊಳ್ಳುವುದಾಗಿ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.



ಮಲ್‌ಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ನೂತನ ಶೋ ರೂಂನಲ್ಲಿ ಬಲು ಅಪರೂಪದ ಕಲಾತ್ಮಕ ಆಭರಣಗಳ ಸಂಗ್ರಹವನ್ನು ಗುಂಡ್ಲುಪೇಟೆ ಶಾಸಕ ನಿರಂಜನ್ ಕುಮಾರ್ ಹಾಗೂ ಮಿಸ್ ಮೈಸೂರು ತಾನಿಷ್ಕ ಮೂರ್ತಿ ಶನಿವಾರ ಉದ್ಘಾಟಿಸಿದರು.

ಏ.19, 20ರಂದು ವಿದ್ಯುತ್ ವ್ಯತ್ಯಯ

ಮೈಸೂರು, ಏ.16–ಬಿಳಿಕೆರೆ ಉಪ ವಿದ್ಯುತ್ ಕೇಂದ್ರದಲ್ಲಿ ಹೊಸ ಶಕ್ತಿ ಪರಿವರ್ತಕ ಅಳವಡಿಸುವ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಏ.19 ಮತ್ತು 20ರಂದು ಮನುಗನಹಳ್ಳಿ, ಚೆಲ್ಲಹಳ್ಳಿ, ತೆಂಕನಕೊಪ್ಪಲು, ಆಲನಹಳ್ಳಿ, ಕ್ಯಾತನಹಳ್ಳಿ, ಗಾಗೇನಹಳ್ಳಿ, ಮುಳ್ಳೂರು, ಬಿಳಿಕೆರೆ, ಮನುಗಾನಹಳ್ಳಿ, ಹಳೇಬೀಡು, ಬೋಳನಹಳ್ಳಿ, ಚಿಕ್ಕಬೀಚನಳ್ಳಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜುವಿನಲ್ಲಿ ವ್ಯತ್ಯಯವಾಗಲಿದೆ.



ಈ 2 ದಿನಗಳಲ್ಲಿ ಹಗಲಿನ ವೇಳೆಯಲ್ಲಿ ವಿದ್ಯುತ್ ಸರಬರಾಜಿರುವುದಿಲ್ಲ. ರಾತ್ರಿ ವೇಳೆ ಮಾತ್ರ ಕರೆಂಟ್ ನೀಡಲಾಗುವುದು. ಗ್ರಾಹಕರು ಇಲಾಖೆಯೊಂದಿಗೆ ಸಹಕರಿಸುವಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಬಿಳಿಕೆರೆ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ನಾಳೆಯಿಂದ ಮುದ್ರಾಪ್ರಾಣಾಯಾಮ ಶಿಬಿರ

ಮೈಸೂರು,ಏ.16–ಮೈಸೂರಿನ ಧನ್ಯ ಸ್ಕೂಲ್ ಆಫ್ ಯೋಗ ಹಾಗೂ ಮುದ್ರಾ ಪ್ರಾಣಾಯಾಮ ರಿಸರ್ಚ್ ಸೆಂಟರ್ ವತಿಯಿಂದ ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಮಹಿಳಾ ಸಮಾಜದಲ್ಲಿ ಏ.18ರಿಂದ ಪ್ರತಿದಿನ ಬೆಳಗ್ಗೆ 6.30ರಿಂದ 7.30 ರವರೆಗೆ ಹಾಗೂ ಸಂಜೆ 6.30 ರಿಂದ 7.30 ರವರೆಗೆ ಮುದ್ರಾ ಪ್ರಾಣಾಯಾಮ, ಸಂಕಲ್ಪ ಸಿದ್ಧಿ ಧ್ಯಾನದ ಮೂಲಕ ಮಧುಮೇಹ, ರಕ್ತದೊತ್ತಡ, ಬೊಜ್ಜು, ಅಸ್ತಮ, ಅಲರ್ಜಿ ಇನ್ನಿತರ ಮನೋದೈಹಿಕ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಿಕೊಳ್ಳಬಹುದು. ವಿವರಗಳಿಗೆ ಮೊ. 9945614565, 9141096102 ಸಂಪರ್ಕಿಸಬಹುದು.



ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ನಾಡೋಜ ಪ್ರಶಸ್ತಿ ಪುರಸ್ಕೃತ ಕನ್ನಡ ಭಾಷಾ ತಜ್ಞರಾದ ಟಿ.ವಿ.ವೆಂಕಟಾಚಲ ಶಾಸ್ತ್ರಿ ಅವರನ್ನು ಮೈಸೂರು ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಜಯಲಕ್ಷ್ಮಿಪುರಂನ ಅವರ ನಿವಾಸದಲ್ಲಿ ಸನ್ಮಾನಿಸಲಾಯಿತು. ಚಿತ್ರದಲ್ಲಿ ಧಾರ್ಮಿಕ ಮುಖಂಡರಾದ ಯೋಗಾನರಸಿಂಹ (ಮುರಳಿ), ಒಂಟಿಕೊಪ್ಪಲಿನ ವೆಂಕಟರಮಣಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕ ಸತ್ಯನಾರಾಯಣ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ಕೆ.ಎಂ.ನಿಶಾಂತ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ವಿಕಾಸ್ ಶಾಸ್ತ್ರಿ ಇತರರಿದ್ದಾರೆ.

ಇಂದು ಕೈಗಾರಿಕಾ ಸಂಸ್ಥೆ ಚುನಾವಣೆ

ಮೈಸೂರು, ಏ.16–ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ 2022–23ರ ಸಾಲಿನ ಆಡಳಿತ ಮಂಡಳಿ ಚುನಾವಣೆ ನಾಳೆ (ಏ.17) ನಡೆಯಲಿದೆ. ಮೈಸೂರಿನ ನಂ.429, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾದಲ್ಲಿ ಬೆಳಗ್ಗೆ 12ರಿಂದ 3ರವರೆಗೆ ಮತದಾನ ನಡೆಯಲಿದೆ. ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಖಜಾಂಚಿ ಹಾಗೂ ಕಾರ್ಯಕಾರಿ ಮಂಡಳಿ ಸದಸ್ಯ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

ಕೈಗಾರಿಕಾ ಸಂಸ್ಥೆ ಚುನಾವಣೆ ಬಹಿಷ್ಕರಿಸಲು ನಿರ್ಧಾರ

ನಾಳೆ(ಏ.17) ನಿಗದಿಪಡಿಸಿರುವ ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ (CIIL) ಸಂಸ್ಥೆಯ ಸರ್ವ ಸದಸ್ಯರ ಸಭೆ ಮತ್ತು ಚುನಾವಣೆ ಬಹಿಷ್ಕರಿಸಲು ಕೈಗಾರಿಕೋದ್ಯಮಿಗಳು ನಿರ್ಧರಿಸಿದ್ದಾರೆ ಎಂದು ಮೇಟಗಳ್ಳಿ ಕೈಗಾರಿಕಾ ಸಂಘದ ಅಧ್ಯಕ್ಷ ಎಂ.ಜಿ.ಬೈಂದೂರ್ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, 2013ರಿಂದ ಚುನಾವಣೆ ನಡೆಸದೇ 2017ರಿಂದ 2020ರವರೆಗೆ ಆಡಿಟ್ ಮಾಡಿಸದೇ ಸರ್ವ ಸದಸ್ಯರ ಸಭೆ ಕರೆದಿರುವುದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂಸಿಸಿಐ ಮತದಾರರ ಪಟ್ಟಿಯಲ್ಲಿ ಮೃತಪಟ್ಟಿರುವ ಸದಸ್ಯರ ಹೆಸರು, ಮುಚ್ಚಿರುವ ಉದ್ಯಮಗಳ ಹೆಸರನ್ನು ಪ್ರಕಟಿಸಲಾಗಿದ್ದು, ಚುನಾವಣಾ ಅಕ್ರಮ ನಡೆಯುವ ಸಾಧ್ಯತೆ ಇದೆ ಎಂದು ಆರೋಪಿಸಿದ್ದಾರೆ.

ಹುಯಿಲಾಳು ಗ್ರಾಮದಲ್ಲಿ ನಾಯಿಗಳ ದಾಳಿಯಿಂದ ಕುರಿಗಳ ಮಾರಣಹೋಮ

ಮೈಸೂರು, ಏ.16(ಆರ್‌ಕೆ)–ಮೈಸೂರು ತಾಲೂಕು, ಹುಯಿಲಾಳು ಗ್ರಾಮದಲ್ಲಿ ಬೀದಿನಾಯಿಗಳು, ಕುರಿಗಳ ಮೇಲೆ ದಾಳಿ ನಡೆಸಿ ಗಾಯಗೊಳಿಸುತ್ತಿವೆ. ಹಿಂಡು ಹಿಂಡಾಗಿ ದಾಳಿ ಮಾಡುತ್ತಿರುವ ನಾಯಿಗಳು, ಮನೆಯ ಹಿತ್ತಲಲ್ಲಿ ಕೂಡಿ ಹಾಕಿರುವ ಕುರಿಗಳನ್ನು ಕಚ್ಚಿ ತಿನ್ನುತ್ತಿರುವುದರಿಂದ ಈಗಾಗಲೇ ಹಲವು ಕುರಿಗಳು ಸತ್ತು ಹೋಗಿವೆ ಎಂದು ಸ್ಥಳೀಯ ಗ್ರಾಮ ಪಂಚಾಯಿತಿ ಸದಸ್ಯ ರಮೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಮನೆಯಿಂದ ಜಮೀನಿಗೆ ಮೇಯಿಸಲು ಕರೆದೊಯ್ಯುವಾಗ ಮತ್ತು ಸಂಜೆ ಮನೆಗೆ ಮರಳುವಾಗ ದಾಳಿ ನಡೆಸುತ್ತಿರುವ ನಾಯಿಗಳ ಹಿಂಡು, ರಕ್ಷಿಸಲು ಹೋದ ಮನುಷ್ಯರ ಮೇಲೂ ದಾಳಿ ನಡೆಸುತ್ತಿರುವುದರಿಂದ ಜನರು ಭಯಭೀತರಾಗಿದ್ದಾರೆ ಎಂದು ತಿಳಿಸಿದರು.

ಕಳೆದ 3 ತಿಂಗಳಿಂದ ಸುಮಾರು 200 ಕುರಿಗಳನ್ನು ಕಚ್ಚಿ ಗಾಯಗೊಳಿಸಲಾಗಿದ್ದು, ಹಲವು ಸಾವನ್ನಪ್ಪಿವೆ. ಇದರಿಂದ ಮಾಲೀಕರಿಗೆ ನಷ್ಟವಾಗುತ್ತಿರುವುದಲ್ಲದೆ, ಗ್ರಾಮಸ್ಥರು ಆತಂಕಪಡುವಂತಾಗಿದೆ. ಈ ಬಗ್ಗೆ ಗ್ರಾಪಂ ಅಭಿವೃದ್ಧಿ ಅಧಿಕಾರಿಗೂ ಹಲವು ಭಾರಿ ದೂರು ನೀಡಿದರೂ ಕ್ರಮ ವಹಿಸಿಲ್ಲ ಎಂದು ರಮೇಶ್ ದೂರಿದರು. ಕುರಿಗಳ ರಕ್ತದ ರುಚಿ ಕಂಡಿರುವ ಬೀದಿ ನಾಯಿಗಳು, ಮಕ್ಕಳು, ಮಹಿಳೆಯರ ಮೇಲೂ ದಾಳಿ ಮಾಡುವ ಆತಂಕ ಎದುರಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ನಾಯಿಗಳ ಹಾವಳಿ ತಪ್ಪಿಸುವ ಮೂಲಕ ಅನಾಹುತಗಳನ್ನು ತಪ್ಪಿಸುವಂತೆಯೂ ಅವರು ಒತ್ತಾಯಿಸಿದ್ದಾರೆ.

ಸ್ಕೂಟರ್‌ಗೆ ಕಾರು ಡಿಕ್ಕಿ: ಸವಾರ ಸಾವು

ಮೈಸೂರು, ಏ.16(ಆರ್‌ಕೆ)–ಸ್ಕೂಟರ್‌ಗೆ ಹಿಂದಿನಿಂದ ಕಾರು ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ ಹೂಟಗಳ್ಳಿ ಎಸ್‌ಆರ್‌ಎಸ್ ಕಾಲೋನಿ ಬಳಿ ಹುಣಸೂರು ರಸ್ತೆಯಲ್ಲಿ ಶುಕ್ರವಾರ ಸಂಜೆ ಸಂಭವಿಸಿದೆ.

ಮೈಸೂರಿನ ಹಿನಕಲ್ ನಿವಾಸಿ ಅಣ್ಣಯ್ಯ ನಾಯ್ಕ(58) ಸಾವನ್ನಪ್ಪಿದವರು. ಹಿನಕಲ್‌ನಿಂದ ಹೂಟಗಳ್ಳಿ ಕಡೆಗೆ ಹೋಂಡಾ ಆಕ್ಟೀವಾ ಸ್ಕೂಟರ್‌ನಲ್ಲಿ ಹೋಗುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಮಾರುತಿ ಸ್ವಿಫ್ಟ್ ಡಿಸೈರ್ ಕಾರು, ಎಸ್‌ಆರ್‌ಎಸ್ ಕಾಲೋನಿ ಸಮೀಪ ಶುಕ್ರವಾರ ಸಂಜೆ 4.15 ಗಂಟೆ ವೇಳೆ ಡಿಕ್ಕಿ ಹೊಡೆದಿದೆ.

ಘಟನೆಯಿಂದ ತೀವ್ರವಾಗಿ ಗಾಯಗಳಾದ ಸ್ಕೂಟರ್ ಸವಾರನನ್ನು ಕೆ.ಆರ್.ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ತಪಾಸಣೆ ನಡೆಸಿದ ವೈದ್ಯರು, ಅಣ್ಣಯ್ಯ ನಾಯ್ಕ ಅವರು ಮೃತಪಟ್ಟಿರುವುದನ್ನು ದೃಢಪಡಿಸಿದರು. ಸ್ಥಳಕ್ಕೆ ಧಾವಿಸಿದ ವಿವಿ ಪುರಂ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಪ್ರಸನ್ನಕುಮಾರ್ ಹಾಗೂ ಸಿಬ್ಬಂದಿ, ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡು ಕಾರು ಮತ್ತು ಚಾಲಕ ನಂಜುಂಡ ರೆಡ್ಡಿಯನ್ನು ವಶಕ್ಕೆ ಪಡೆದರು.

ಮಹಿಳಾ ಸಂಘಗಳಿಗೆ ಬಡ್ಡಿರಹಿತ ಸಾಲ ಯೋಜನೆ

ಧನಗಳ್ಳಿಯಲ್ಲಿ ಬೆಳೆ ಸಾಲದ ಚೆಕ್ ವಿತರಿಸಿದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಘೋಷಣೆ

ಮೈಸೂರು, ಏ.16(ಎಂಟಿವೈ)– ಮಹಿಳಾ ಸಂಘಗಳು ಖಾಸಗಿ ಸಂಸ್ಥೆಗಳಿಂದ ಹೆಚ್ಚಿನ ಬಡ್ಡಿಗೆ ಸಾಲ ಪಡೆಯದೇ ಎಂಸಿಡಿಸಿಸಿ ಬ್ಯಾಂಕ್‌ನಲ್ಲಿ ಕಡಿಮೆ ಬಡ್ಡಿಗೆ ಆರ್ಥಿಕ ನೆರವು ಪಡೆದುಕೊಳ್ಳುವಂತೆ ಸಲಹೆ ನೀಡಿದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹಾಗೂ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ ಮಹಿಳಾ ಸಂಘಗಳಿಗೆ ಬಡ್ಡಿ ರಹಿತ ಸಾಲ ನೀಡಲು ಯೋಜನೆ ರೂಪಿಸಲಾಗುತ್ತಿದೆ ಎಂದರು.

ಚಾಮುಂಡೇಶ್ವರಿ ಕ್ಷೇತ್ರದ ಧನಗಳ್ಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹೊಸ ಸದಸ್ಯರಿಗೆ ಬೆಳೆ ಸಾಲದ ಚೆಕ್ ವಿತರಿಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳಲ್ಲಿ ಮಹಿಳಾ ಸಂಘಗಳು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಸೇರಿದಂತೆ ವಿವಿಧ ಖಾಸಗಿ ಹಣಕಾಸು ಸಂಸ್ಥೆಗಳಿಂದ ಹೆಚ್ಚಿನ ಬಡ್ಡಿ ನೀಡಿ ಸಾಲ ಪಡೆಯುತ್ತಿರುವುದು ಕಂಡು ಬಂದಿದೆ. ಅವುಗಳ ಬದಲು ಎಂಸಿಡಿಸಿಸಿ ಬ್ಯಾಂಕ್‌ನಲ್ಲಿ ಕಡಿಮೆ ಬಡ್ಡಿ ದರದಲ್ಲಿ ಸಾಲ ಪಡೆದು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಮುಂದಾಗಬೇಕು ಎಂದರು.

ನಾನು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷನಾದ ಬಳಿಕ ಅಪೆಕ್ಸ್ ಬ್ಯಾಂಕ್ ಆಡಳಿತ ಮಂಡಳಿಯವರೊಂದಿಗೆ ಹೋರಾಟ ಮಾಡಿ ಬಿಲ್ಡಿಂಗ್ ಫಂಡ್ 10 ಲಕ್ಷದಂತೆ ಎಂಟು ಸಂಘಗಳಿಗೆ ಕೊಡಿಸಿದ್ದೇನೆ. ಮಹಿಳಾ ಸಂಘಗಳು ಬೇರೆ ಸಂಘಗಳಿಗೆ ಶೇ.28ರಷ್ಟು ಬಡ್ಡಿ ಕಟ್ಟುವ ಬದಲು ಶೇ.12ರ ಬಡ್ಡಿ ದರದಲ್ಲಿ ಎಂಸಿಡಿಸಿಸಿ ಬ್ಯಾಂಕ್‌ನಲ್ಲಿ ಸಾಲ ಪಡೆದುಕೊಳ್ಳಬಹುದು. 15 ಲಕ್ಷ ರೂ.ವರೆಗೆ ಮಹಿಳಾ ಸಂಘಗಳಿಗೆ ಸಾಲ ಸೌಲಭ್ಯ ನೀಡಲಾಗುತ್ತದೆ. ಮುಂದಿನ ದಿನಗಳಲ್ಲಿ ಇನ್ನೂ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡಲು ಪ್ರಯತ್ನ ಮಾಡುತ್ತೇವೆ ಎಂದರು.



ಸಾಲ ಪಡೆದ ಮಹಿಳಾ ಸಂಘಗಳು ಈ ಹಿಂದೆ ಧರ್ಮಸ್ಥಳ ಸಂಘಕ್ಕೆ ಪ್ರಾಮಾಣಿಕವಾಗಿ ಹಣ ಕಟ್ಟುವಂತೆ ನಮ್ಮ ಬ್ಯಾಂಕ್‌ಗೂ ಕಟ್ಟಲು ಬದ್ಧರಾಗಬೇಕು. ಈಗಾಗಲೇ ಧನಗಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 5 ಕೋಟಿ ರೂ. ಸಾಲ ನೀಡಿದ್ದೇವೆ. ಶ್ರೀರಾಂಪುರದಲ್ಲಿ 3 ತಿಂಗಳಲ್ಲಿ ನಮ್ಮ ಬ್ಯಾಂಕಿನ ನೂತನ ಶಾಖೆ ಆರಂಭವಾಗಲಿದೆ. ಮಹಿಳೆಯರು ಹೆಚ್ಚು ಸದುಪಯೋಗಪಡಿಸಿಕೊಂಡು ಯಶಸ್ವಿಯಾಗಿ ನಡೆದಲ್ಲಿ ಎಂಸಿಡಿಸಿಸಿ ಬ್ಯಾಂಕ್ ಹಾಗೂ ಅಪೆಕ್ಸ್ ಬ್ಯಾಂಕ್‌ನಿಂದ ಹೆಚ್ಚಿನ ಸಹಕಾರ ನೀಡುತ್ತೇವೆ ಎಂದು ಭರವಸೆ ನೀಡಿದರು.

ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಚಿಕ್ಕಳ್ಳಿ ಕುಮಾರ್ ಮಾತನಾಡಿ, ರೈತರು ಮಧ್ಯವರ್ತಿಗಳ ಕಪಿ ಮುಷ್ಠಿಗೆ ಒಳಗಾಗಿ ಭೂಮಿಯನ್ನು ಎಕರೆಗೆ 5 ರಿಂದ 6 ಲಕ್ಷ ರೂ. ಮಾರಿಕೊಂಡಿದ್ದಾರೆ. ಆದರೂ 614 ಜನ ರೈತರು ಸಾಲ ಪಡೆಯುತ್ತಿರುವುದು ಸಂತೋಷದ ವಿಷಯ. ರೈತರು ಭೂಮಿಯನ್ನು ಮಾರಾಟ ಮಾಡಬೇಡಿ. ಮಾರಾಟ ಮಾಡಿರುವವರು ಹಣವನ್ನು ಎಂಸಿಡಿಸಿಸಿ ಬ್ಯಾಂಕ್‌ನಲ್ಲಿ ಠೇವಣಿ ಮಾಡಿ. ಸಾಲ ಪಡೆದಿರುವವರು ಸಕಾಲಕ್ಕೆ ಮರುಪಾವತಿ ಮಾಡಿದರೆ ಬೇರೆಯವರಿಗೆ ಸಾಲ ಕೊಡಲು ಅನುಕೂಲವಾಗುತ್ತದೆ ಎಂದರು.

ಧನಗಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಿ.ಗುರುಸ್ವಾಮಿ ಮಾತನಾಡಿ ನಮ್ಮ ಸಂಘ 1977ರಲ್ಲಿ ಸ್ಥಾಪನೆಯಾಗಿ 8 ಗ್ರಾಮಗಳನ್ನು ಒಳಗೊಂಡಿದೆ. 1750 ಸದಸ್ಯರಿದ್ದು ಈ ಬಾರಿ 1,24,46000 ಬೆಳೆಸಾಲ ನೀಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಬಸಪ್ಪ, ನಿರ್ದೇಶಕರಾದ ಸಿದ್ದರಾಮು ಎಂ.ಚಿಕ್ಕಣ್ಣ, ಮಾದನಾಯಕ, ಜವರೇಗೌಡ, ಕಾಳಲಿಂಗೇಗೌಡ, ಬಸವೇಗೌಡ, ಸಿದ್ದರಾಜು, ಕೃಷ್ಣಮೂರ್ತಿ, ಸಿದ್ದಮ್ಮ, ತಿಮ್ಮಮ್ಮ, ವೇಣುಗೋಪಾಲ್, ಮಾಕಿ ಮಹದೇವು, ಧನಗಳ್ಳಿ ಬಸವರಾಜು, ಶಿವರಾಜು, ಮೂಗಶಾಂತೇಗೌಡ, ಕಾರ್ಯದರ್ಶಿ ಕೃಷ್ಣ ಇನ್ನಿತರರು ಉಪಸ್ಥಿತರಿದ್ದರು.

ಗಾಂಧಿನಗರದಲ್ಲಿ 'ಮಹಾನಾಯಕ ಭೀಮ ರಥೋತ್ಸವ'



ಡಾ.ಬಿ.ಆರ್.ಅಂಬೇಡ್ಕರ್ ಗಾಂಧಿನಗರ ನಾಗರಿಕರ ಹಿತರಕ್ಷಣಾ ಸಮಿತಿ ವತಿಯಿಂದ ಆಯೋಜಿಸಲಾಗಿದ್ದ 'ಮಹಾನಾಯಕ ಭೀಮ ರಥೋತ್ಸವ'ಕ್ಕೆ ಎನ್.ಆರ್. ವಿಭಾಗದ ಎಸಿಪಿ ಎಂ.ಶಿವಶಂಕರ್ ಚಾಲನೆ ನೀಡಿದರು.

ಮೈಸೂರು, ಏ.16(ಎಸ್‌ಬಿಡಿ)– ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತೋತ್ಸವದ ಅಂಗವಾಗಿ ಮೈಸೂರಿನ ಗಾಂಧಿನಗರದಲ್ಲಿ 'ಮಹಾನಾಯಕ ಭೀಮ ರಥೋತ್ಸವ' ಏರ್ಪಡಿಸಲಾಗಿತ್ತು.

ಡಾ.ಬಿ.ಆರ್.ಅಂಬೇಡ್ಕರ್ ಗಾಂಧಿನಗರ ನಾಗರಿಕರ ಹಿತರಕ್ಷಣಾ ಸಮಿತಿಯ ವತಿಯಿಂದ ಆಯೋಜಿಸಲಾಗಿದ್ದ ರಥೋತ್ಸವ ಗಾಂಧಿನಗರದ ಬಸ್ ನಿಲ್ದಾಣ ಬಳಿಯ ಮೈದಾನದಿಂದ ಪ್ರಾರಂಭಗೊಂಡು, ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಅಂಬೇಡ್ಕರ್ ವೃತ್ತ, ಅಶೋಕ ರಸ್ತೆಯ ಮುಖಾಂತರ ಪುರಭವನದ ಅಂಬೇಡ್ಕರ್ ಪ್ರತಿಮೆ ಬಳಿ ಮುಕ್ತಾಯವಾಯಿತು. ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯದಂತೆ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುವ ವಿಶೇಷ ಹಾಗೂ ಆಕರ್ಷಕ ಸ್ತಬ್ಧಚಿತ್ರದ ರಥೋತ್ಸವ, ಸಾರ್ವಜನಿಕರ ಮನಸೂರೆಗೊಂಡಿತು.

ಡೊಳ್ಳು ಕುಣಿತ, ಪೂಜಾ ಕುಣಿತ, ಗೊರವರ ಕುಣಿತ, ಚಿಲಿಪಿಲಿ ಗೊಂಬೆ, ನಾಸಿಕ್ ಬ್ಯಾಂಡ್, ತಮಟೆ, ನಗಾರಿ, ಕಂಸಾಳೆ ಸೇರಿದಂತೆ ವಿವಿಧ ಸಾಂಸ್ಕೃತಿಕ ಜಾನಪದ ಕಲಾ ತಂಡಗಳು ಮೆರವಣಿಗೆಯ ಮೆರುಗು ಹೆಚ್ಚಿಸಿದ್ದವು.

ಎನ್.ಆರ್.ವಿಭಾಗದ ಎಸಿಪಿ ಎಂ.ಶಿವಶಂಕರ್ ಭೀಮ ರಥೋತ್ಸವಕ್ಕೆ ಚಾಲನೆ ನೀಡಿದರು. ಸ್ಥಳೀಯ ಕಾರ್ಪೊರೇಟರ್ ಡಾ.ಅಶ್ವಿನಿ ಶರತ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಮೈಸೂರು ವಿವಿ ಅಧಿಕಾರಿ ಪ್ರೊ.ಮಾದೇಶ್, ವಾಣಿವಿಲಾಸ ನೀರು ಸರಬರಾಜು ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಡಿ. ಅಶ್ವಿನ್, ಬೋಧಿಸತ್ವ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ, ವಕೀಲ ತಿಮ್ಮಯ್ಯ, ವಲಯ ಕಚೇರಿ 7ರ ಸಹಾಯಕ ಆಯುಕ್ತ ನಂಜುಂಡಯ್ಯ, ಸಮಿತಿಯ ಅಧ್ಯಕ್ಷ ಶರತ್ ಸತೀಶ್, ಪ್ರಧಾನ ಕಾರ್ಯದರ್ಶಿ ಸಿ.ದೇವರಾಜು, ಪದಾಧಿಕಾರಿಗಳಾದ ಸುರೇಶ್, ರಾಜೇಶ್, ಮಂಜುನಾಥ್, ರಾಜು, ವಿಜಯ್, ರಾಕೇಶ್, ರಂಗಸ್ವಾಮಿ, ಉಮೇಶ್ ಮತ್ತಿತರರು ಭಾಗವಹಿಸಿದ್ದರು.



ಮೈಸೂರಿನ ವಾತ್ಸಲ್ಯ ಸೇವಾ ಫೌಂಡೇಶನ್ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿಯನ್ನು ಆಚರಿಸಲಾಯಿತು. ಚಿತ್ರದಲ್ಲಿ ಜಿಲ್ಲಾಸ್ಪತ್ರೆಯ ವೈದ್ಯಾಧಿಕಾರಿ ಡಾ.ವೆಂಕಟೇಶ್ ಸಮಾಜ ಸೇವಕ ಎಂ.ಎಸ್.ಬಾಲಸುಬ್ರಹ್ಮಣ್ಯಂ, ವಾತ್ಸಲ್ಯ ಸೇವಾ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಎ.ಸಿ.ರವಿಕುಮಾರ್, ಶುಶ್ರೂಷಕಿ ಶ್ವೇತಾ, ನಿವೃತ್ತ ಶಿಕ್ಷಕಿ ಜಯಲಕ್ಷ್ಮಿ ಹಾಗೂ ಹಿರಿಯ ಜೀವಿಗಳನ್ನು ಕಾಣಬಹುದು.

ಸಂಗೀತ ವಿವಿ ಗುತ್ತಿಗೆ ನೌಕರರಿಗೆ ನ್ಯಾಯ ಸಿಗದಿದ್ದರೆ ಅಮರಣಾಂತ ಉಪವಾಸ

ದಲಿತ ವೆಲ್‌ಫೇರ್ ಟ್ರಸ್ಟ್ ಎಚ್ಚರಿಕೆ

ಮೈಸೂರು, ಏ.16(ಆರ್‌ಕೆಬಿ)– ವರ್ಷದಿಂದ ಬಾಕಿ ಇರುವ ವೇತನ ಪಾವತಿ ಮಾಡಬೇಕು ಹಾಗೂ ತಮ್ಮನ್ನು ಸೇವೆಯಲ್ಲಿ ಮುಂದುವರಿಸಬೇಕು ಎಂದು ಆಗ್ರಹಿಸಿ ಮೈಸೂರಿನ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯದ ಗುತ್ತಿಗೆ ನೌಕರರು ಕಳೆದ 53 ದಿನಗಳಿಂದ ಸತತವಾಗಿ ಪ್ರತಿಭಟನಾ ಧರಣಿ ನಡೆಸುತ್ತಿದ್ದರೂ ರಾಜ್ಯ ಸರ್ಕಾರ ಗಮನ ಹರಿಸದೆ ನಿರ್ಲಕ್ಷ್ಯ ವಹಿಸಿರುವುದನ್ನು ದಲಿತ್ ವೆಲ್‌ಫೇರ್ ಟ್ರಸ್ಟ್ ಖಂಡಿಸಿದೆ. ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಅಧ್ಯಕ್ಷ ಶಾಂತರಾಜು ಮಾತನಾಡಿ, ಬೋಧಕೇತರ ನೌಕರರು ಫೆ.5ರಂದು ಎಂದಿನಂತೆ ಕರ್ತವ್ಯಕ್ಕೆ ತೆರಳಿದಾಗ ಅವರನ್ನು ಕಾರಣ ನೀಡದೇ ಗೇಟ್‌ನಲ್ಲೇ ತಡೆದು, ಗೇಟ್‌ಗೆ ಬೀಗ ಹಾಕಿದ್ದರು. ಕಾರಣ ಹಾಗೂ ನೋಟಿಸ್ ಸಹ ನೀಡದೇ ವಿವಿ ಕುಲಪತಿ ನೌಕರರ ಬಗ್ಗೆ ನಿರ್ಲಕ್ಷ್ಯದಿಂದ ವರ್ತಿಸಿದ್ದಾರೆ. ಈ ಸಂಬಂಧ ಸಚಿವರು, ಸಂಸದರು, ಶಾಸಕರುಗಳೆಲ್ಲರಿಗೂ ಮನವಿ ನೀಡಿದ್ದರೂ, ಯಾರೊಬ್ಬರೂ ಇವರ ಪ್ರತಿಭಟನೆಗೆ ಸ್ಪಂದಿಸಿಲ್ಲ ಎಂದು ಆರೋಪಿಸಿದರು.

ಗುತ್ತಿಗೆ ನೌಕರರ ಬಗ್ಗೆ ಕಾನೂನು ತೊಡಕಿದೆ ಎನ್ನುತ್ತಾರೆಯೇ ಹೊರತು ಯಾವ ಕಾನೂನು ತೊಡಕಿದೆ ಎಂಬ ಬಗ್ಗೆ ಮಾಹಿತಿ ನೀಡುತ್ತಿಲ್ಲ. ಇದು ಹಲವು ಅನುಮಾನಗಳಿಗೆ ಎಡೆ ಮಾಡಿದೆ ಎಂದು ಹೇಳಿದರು. ಪ್ರತಿಭಟನೆ ನಡೆಸುತ್ತಿರುವ ನೌಕರರಿಗೆ ಮೈಸೂರಿನ ಹಲವು ಪ್ರಗತಿಪರ ಸಂಘಟನೆಗಳು ಬೆಂಬಲಿಸಿದ್ದು, ಅವರಿಗೆ ನ್ಯಾಯ ದೊರಕಿಸಿಕೊಡುವುದು ನಮ್ಮ ಜವಾಬ್ದಾರಿಯಾಗಿದೆ. ಹಾಗಾಗಿ ಧರಣಿ ಕುಳಿತಿರುವ 19 ಮಂದಿ ನೌಕರರೊಂದಿಗೆ ಚರ್ಚೆ ಮಾಡಿ, ಅಮರಣಾಂತ ಉಪವಾಸ ಕುಳಿತುಕೊಳ್ಳುವ ಬಗ್ಗೆ ನಿರ್ಧರಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಾಹಿತಿ, ಚಿಂತಕ ನಾ.ದಿವಾಕರ, ಟ್ರಸ್ಟ್‌ನ ಪದಾಧಿಕಾರಿಗಳಾದ ಚಿಕ್ಕಂದಾನಿ, ನಂಜುಂಡಸ್ವಾಮಿ ಉಪಸ್ಥಿತರಿದ್ದರು.

ಪ್ರಾಥಮಿಕ ಶಿಕ್ಷಕರ ನೇಮಕಾತಿ ಅವೈಜ್ಞಾನಿಕ: ಆರೋಪ

ಮೈಸೂರು,ಏ.16(ಆರ್‌ಕೆಬಿ)– ಆರರಿಂದ ಎಂಟನೇ ತರಗತಿ ವರೆಗಿನ ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿ ವೇಳೆ ಹೊರಡಿಸಿರುವ ಮೆರಿಟ್ ವಿಧಾನ ತಾರತಮ್ಯ ಹಾಗೂ ಅಸಮಾನತೆಯಿಂದ ಕೂಡಿದೆ ಎಂದು ಸೆಮಿಸ್ಟರ್ ಪದ್ಧತಿಗೂ ಹಿಂದೆ ವಿದ್ಯಾಭ್ಯಾಸ ಮಾಡಿದವರ ಪರವಾಗಿ ಸಿ.ಅರುಣ್ ಕುಮಾರ್ ಚಿಲ್ಕುಂದ ಬೇಸರ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರಿಗೆ ಬರೆದ ಪತ್ರವನ್ನು ಬಿಡುಗಡೆ ಮಾಡಿ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆ, ಶಿಕ್ಷಕರ ಅರ್ಹತಾ ಪರೀಕ್ಷೆ, ಪದವಿ ಶಿಕ್ಷಣ ಮತ್ತು ಶಿಕ್ಷಕರ ಶಿಕ್ಷಣ ಕೋರ್ಸ್ ನಲ್ಲಿ ಪಡೆದ ಶೇಕಡಾವಾರು ಅಂಕಗಳನ್ನು ಆಧರಿಸಿ ವೆಯ್ಟೇಜ್ ಲೆಕ್ಕ ಹಾಕಿ, ಅದರ ಆಧಾರದ ಮೇಲೆ ಪ್ರತ್ಯೇಕವಾಗಿ ಅರ್ಹ ಅಭ್ಯರ್ಥಿಗಳ ಮೆರಿಟ್ ಸಿದ್ಧಪಡಿಸುವುದಾಗಿ ತಿಳಿಸಲಾಗಿದೆ ಎಂದು ಹೇಳಿದರು.

ಇದರಿಂದ ಸೆಮಿಸ್ಟರ್ ಪದ್ಧತಿಯಲ್ಲಿ ಶಿಕ್ಷಣ ಪಡೆದವರಿಗೆ ಮುಕ್ಕಟೆಯಾಗಿ ಅಂಕಗಳು ಸಿಗುತ್ತವೆ. ಬದಲಾಗಿ ಈ ಪದ್ಧತಿಗೂ ಮೊದಲು ಶಿಕ್ಷಣ ಪಡೆದವರಿಗೆ ಭಾರಿ ಅನ್ಯಾಯವಾಗಲಿದೆ. ಹೀಗಾಗಿ ಈ ಅವೈಜ್ಞಾನಿಕ ಪದ್ಧತಿ ಕೈಬಿಡಬೇಕು. ಜಿಲ್ಲಾವಾರು ನೇಮಕಾತಿ ನಡೆಸದೇ ರಾಜ್ಯ ಮಟ್ಟದಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇಮಕಾತಿ ಪ್ರಕ್ರಿಯೆ ನಡಸಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಅಭ್ಯರ್ಥಿಗಳಾದ ಬಿ.ಮೂರ್ತಿ, ಪ್ರಸಾದ್, ರಮೇಶ್, ಗೋವಿಂದರಾಜು, ಬಸವರಾಜು ಉಪಸ್ಥಿತರಿದ್ದರು.



ಮೈಸೂರಿನ ಎಫ್‌ಟಿಎಸ್‌ನ ಜೈಭೀಮ್ ಅಂಬೇಡ್ಕರ್ ವೃತ್ತದಲ್ಲಿನ ಬಾಬಾ ಸಾಹೇಬರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಅವರ 131ನೇ ಹುಟ್ಟುಹಬ್ಬದ ಅಂಗವಾಗಿ ಗೌರವ ನಮನ ಸಲ್ಲಿಸಲಾಯಿತು. ಈ ವೇಳೆ ಮುಖಂಡರಾದ ಸುರೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದಾರೆ.

ಜಾನಪದ ಗಾಯಕರಾದ ಅಮ್ಮ ರಾಮಚಂದ್ರ, ಮಳವಳ್ಳಿ ಮಹದೇವಸ್ವಾಮಿಗೆ ಅಭಿನಂದನೆ

ಮೈಸೂರು,ಏ.16(ಜಿಎ)–ನಗರದ ಕಲಾಮಂದಿರದಲ್ಲಿ ಆರಭಿ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ವಸಂತೋತ್ಸವ ಕಾರ್ಯಕ್ರಮದಲ್ಲಿ ಜಾನಪದ ಗಾಯಕರಾದ ಅಮ್ಮ ರಾಮಚಂದ್ರ ಮತ್ತು ಮಳವಳ್ಳಿ ಮಹದೇವ ಸ್ವಾಮಿ ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಜಾನಪದ ಗೀತೆ, ಭಾವಗೀತೆ ಸೇರಿದಂತೆ 22 ಗಿತೆಗಳನ್ನು ಹಾಡುವ ಮೂಲಕ ನೆರೆದಿದ್ದ ಜನರನ್ನು ರಂಜಿಸಿದರು. ಡಾ.ಕುಲದೀಪ್, ಪಿ.ಮಹೇಶ್ ಕುಮಾರ್, ಡಾ.ಸೀತಾಲಕ್ಷ್ಮಿ, ಡಾ.ಸೋಮನಾಥ್ ವಾಸುದೇವ್, ಡಾ.ಜಿ.ವಿ.ಭಾರತಿ, ಡಾ.ಸುನೀತ, ಜ್ಯೋತಿ, ಡಾ.ವಾಣಿ, ಡಾ.ರಘು ವೀರ್, ಪ್ರೇಮಲತ, ಮೈಸೂರು ಮಹಾಲಿಂಗ, ಜೀವನ್‌ಕುಮಾರ್, ರೂಪಶ್ರೀ, ನಿಖಿಲ್ ಪ್ರಭು, ಮಹದೇವ, ರಮ್ಯ, ಆರಾಧನ ಮತ್ತಿತರರು ಉಪಸ್ಥಿತರಿದ್ದರು.



ಕಳೆದ ಗುರುವಾರ ಚಾಮರಾಜ ಕ್ಷೇತ್ರದ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ, ಸಂಜೀವಿನಿ ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಎಂ.ಕುಮಾರ್ ಅವರು ಪೌರಕಾರ್ಮಿಕರಿಗೆ ಸಿಹಿ ತಿನಿಸುವ ಮೂಲಕ ಹುಟ್ಟುಹಬ್ಬ ಆಚರಿಸಿಕೊಂಡರು.

ಮೈಸೂರು ನಗರದಾದ್ಯಂತ 3 ತಿಂಗಳಲ್ಲಿ 3,41,693 ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ದಾಖಲು

1,10,25,300 ರೂ. ದಂಡ ವಸೂಲಿ

ಮೈಸೂರು,ಏ.16(ಆರ್‌ಕೆ)–ಕೋವಿಡ್–19 ಸೋಂಕು ಕಡಿಮೆಯಾಗಿ ನಿರ್ಬಂಧ ತೆರವುಗೊಳ್ಳುತ್ತಿದ್ದಂತೆಯೇ ಮೈಸೂರಲ್ಲಿ ನಿಯಮ ಉಲ್ಲಂಘಿಸುತ್ತಿರುವ ವಾಹನ ಸವಾರರ ವಿರುದ್ಧ ಸಂಚಾರ ಪೊಲೀಸರು ಕಾರ್ಯಾಚರಣೆ ತೀವ್ರಗೊಳಿಸಿದ್ದಾರೆ.

2022ರ ಜನವರಿ 1ರಿಂದ ಮಾರ್ಚ್ 31ರವರೆಗೆ ವಿವಿಧ ಸ್ವರೂಪದ ಒಟ್ಟು 3,41,693 ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ದಾಖಲಿಸಲಾಗಿದ್ದು, ನ್ಯಾಯಾಲಯದಲ್ಲಿ ಪಾವತಿಸಿಕೊಂಡಿರುವ 17,48,500 ರೂ. ಸೇರಿದಂತೆ ಒಟ್ಟು 1,10,25,300 ರೂ. ದಂಡ ಸಂಗ್ರಹಿಸಲಾಗಿದೆ.

ಕಾರ್ಯಾಚರಣೆ ವೇಳೆ ಸ್ಥಳದಲ್ಲೇ 51,24,300 ರೂ. ದಂಡ ಸಂಗ್ರಹಿಸಲಾಗಿದೆ.

ಪ್ರಸಕ್ತ ಸಾಲಿನ 3 ತಿಂಗಳಲ್ಲಿ 5,612 ಹೆಲ್ಮೆಟ್ ಧರಿಸದೇ ವಾಹನ ಚಾಲನೆ, 1,024 ಸೀಟ್ ಬೆಲ್ಟ್ ಧರಿಸದಿರುವುದು, 3,629 ಹಿಂಬದಿ ಸವಾರ ಹೆಲ್ಮೆಟ್ ಧರಿಸದೆ ಇರುವುದು, 3,27,365 ಎಫ್‌ಟಿವಿಆರ್ ಪ್ರಕರಣ ಸೇರಿದಂತೆ ಅಜಾಗರೂಕ ಚಾಲನೆ, ಅತೀ ವೇಗ, ಮದ್ಯಪಾನ ಮಾಡಿ ವಾಹನ ಚಾಲನೆ, ಮೊಬೈಲ್ ಬಳಸುತ್ತಾ ವಾಹನ ಚಾಲನೆ, ಸಿಗ್ನಲ್ ಜಂಪಿಂಗ್, ಫುಟ್‌ಪಾತ್ ಮೇಲೆ ವಾಹನ ಚಾಲನೆ, ಡಿಫೆಕ್ಟಿವ್ ಸೈಲನ್ಸರ್, ಸಮವಸ್ತ್ರ ಧರಿಸದೇ ವಾಹನ ಚಾಲನೆ, ಜಿಗ್‌ಜಾಗ್ ಡ್ರೈವಿಂಗ್, ತ್ರಿಬಲ್ ರೈಡಿಂಗ್ ಸೇರಿದಂತೆ ಒಟ್ಟು 40 ಬಗೆಯ ಸಂಚಾರ ನಿಯಮ ಉಲ್ಲಂಘನೆ ವಿರುದ್ಧ 3,41,693 ಪ್ರಕರಣಗಳನ್ನು ಮೈಸೂರು ನಗರದಲ್ಲಿ ದಾಖಲಿಸಲಾಗಿದೆ. ಅದೇ ರೀತಿ ಕಳೆದ ವರ್ಷ 2021ರ ಜನವರಿ 1ರಿಂದ ಡಿಸೆಂಬರ್ 31ರವರೆಗೆ 12,28,285 ಪ್ರಕರಣ ದಾಖಲಿಸಿ 5,77,32,650 ರೂ. ದಂಡ ಸಂಗ್ರಹಿಸಲಾಗಿತ್ತು. 2020ನೇ ಸಾಲಿನಲ್ಲಿ 10,90,841 ಪ್ರಕರಣ ದಾಖಲಿಸಲಾಗಿದ್ದು, ಒಟ್ಟು 8,99,41,900 ರೂ. ದಂಡ ವಸೂಲಿ ಮಾಡಲಾಗಿದೆ. ಪ್ರಸಕ್ತ ಸಾಲಿನ 3 ತಿಂಗಳ್ಳಲ್ಲಿ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ವಿರುದ್ಧ 243 ಮಂದಿ ವಿರುದ್ಧ ಪ್ರಕರಣ ದಾಖಲಿಸಿರುವ ಸಂಚಾರ ಪೊಲೀಸರು, ಕೋವಿಡ್ ಪರಿಸ್ಥಿತಿಯಿಂದಾಗಿ ಕಾರ್ಯಾಚರಣೆ ನಡೆಸದಿರುವುದರಿಂದ ಕಳೆದ ವರ್ಷ ಕೇವಲ 9 ಹಾಗೂ 2020ರಲ್ಲಿ 315 ಪ್ರಕರಣಗಳನ್ನು ದಾಖಲಿಸಲಾಗಿತ್ತು.



ಸಂಗ್ರಹ ಚಿತ್ರ

ಕೋವಿಡ್ ನಿರ್ಬಂಧಗಳು ಸಂಪೂರ್ಣ ತೆರವುಗೊಂಡಿರುವುದರಿಂದ ಹಾಗೂ ಸೋಂಕಿನ ಪ್ರಕರಣಗಳೂ ಕಂಡುಬರುತ್ತಿಲ್ಲ ವಾದ ಕಾರಣ, ಮೈಸೂರಲ್ಲಿ ನಿತ್ಯ ರಾತ್ರಿ ವೇಳೆ ಸಂಚಾರ ಠಾಣೆ ಪೊಲೀಸರು ಡ್ರಂಕ್ ಅಂಡ್ ಡ್ರೈವ್ ತಪಾಸಣೆ ನಡೆಸಿ ಪ್ರಕರಣ ದಾಖಲಿಸುತ್ತಿದ್ದಾರಲ್ಲದೆ, ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧವೂ ಕಾರ್ಯಾಚರಣೆಯನ್ನು ತೀವ್ರಗೊಳಿಸಿದ್ದಾರೆ.

ಸಂಚಾರ ನಿಯಮ ಪಾಲಿಸಿ, ಅಮೂಲ್ಯ ಪ್ರಾಣ ರಕ್ಷಿಸಿ

ಮೈಸೂರು, ಏ.16(ಆರ್‌ಕೆ)–ಸಂಚಾರ ನಿಯಮಗಳನ್ನು ಪಾಲಿಸಿ ಎಚ್ಚರಿಕೆಯಿಂದ ವಾಹನ ಚಾಲನೆ ಮಾಡುವ ಮೂಲಕ ಅಪಘಾತಗಳನ್ನು ತಪ್ಪಿಸಿ ಅಮೂಲ್ಯ ಪ್ರಾಣ ರಕ್ಷಿಸುವಂತೆ ಮೈಸೂರು ನಗರ ಪೊಲೀಸ್ ಕಮಿಷ್ನರ್ ಡಾ. ಚಂದ್ರಗುಪ್ತ ಸಲಹೆ ನೀಡಿದ್ದಾರೆ.



ತಪಾಸಣೆ ನಡೆಸಿ ದಂಡ ವಸೂಲಿ ಮಾಡುವುದು ನಮ್ಮ ಉದ್ದೇಶವಲ್ಲ. ಅದಕ್ಕಾಗಿ ಕಾರ್ಯಾಚರಣೆಯನ್ನು ನಡೆಸುವುದಿಲ್ಲ. ರಸ್ತೆ ಸುರಕ್ಷೆ, ಸುಗಮ ಸಂಚಾರ ಮತ್ತು ಅಮೂಲ್ಯ ಪ್ರಾಣ ರಕ್ಷಿಸಬೇಕೆಂಬುದೇ ಸಂಚಾರ ನಿಯಮಗಳನ್ನು ಪಾಲಿಸಿ ಎಂದು ಹೇಳಲು ಮುಖ್ಯ ಕಾರಣ ಎಂದರು.

ಅತೀ ವೇಗ, ಅಜಾಗರೂಕ ವಾಹನ ಚಾಲನೆ, ಹೆಲ್ಮೆಟ್ ಧರಿಸದೇ, ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವುದೂ ಸೇರಿದಂತೆ ಸಂಚಾರ ನಿಯಮ ಪಾಲಿಸದಿರುವುದರಿಂದ ಸಂಭವಿಸುವ ರಸ್ತೆ ಅಪಘಾತಗಳಲ್ಲಿ ನಿಮ್ಮ ಹಾಗೂ ಏನೂ ತಪ್ಪು ಮಾಡದ ಅಮಾಯಕರ ಪ್ರಾಣ ಪಕ್ಷಿ ಹಾರಿ ಹೋಗುತ್ತದಲ್ಲದೆ, ಶಾಶ್ವತ ಅಂಗವಿಲರಾಗಬೇಕಾಗುತ್ತದೆ. ಅದರಿಂದ ಮನೆಯ ಅವಲಂಬಿತ ಪತ್ನಿ, ಮಕ್ಕಳು, ವೃದ್ಧ ತಂದೆ–ತಾಯಂದಿರು, ಸಂಬಂಧಿಕರೂ ಅದರ ನೋವನ್ನು ಅನುಭವಿಸಬೇಕಾಗುತ್ತದೆ ಎಂದು ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಸಾರ್ವಜನಿಕರಿಗೆ ತಿಳಿಹೇಳಿದ್ದಾರೆ.

ದಿನದಿಂದ ದಿನಕ್ಕೆ ಮೈಸೂರು ನಗರ ಬೆಳೆಯುತ್ತಿರುವುದರಿಂದ ವಾಹನ ಸಂಚಾರ ದಟ್ಟಣೆಯೂ ಹೆಚ್ಚುತ್ತಿರುವಂತೆಯೇ ಅಪಘಾತಗಳೂ ಸಂಭವಿಸುವುದುಂಟು. ಆದರೆ ಎಚ್ಚರ ವಹಿಸಿ ನಿಧಾನವಾಗಿ ಚಾಲನೆ ಮಾಡಿದಲ್ಲಿ ಸುರಕ್ಷಿತವಾಗಿ ಮನೆಗೆ ಸೇರಬಹುದು ಎಂದು ಪೊಲೀಸ್ ಕಮಿಷ್ನರ್ ಡಾ.ಚಂದ್ರಗುಪ್ತಾ ತಿಳಿಸಿದ್ದಾರೆ.

ಮೈಸೂರು ಮಿತ್ರ ಭಾನುವಾರ 17 ಏಪ್ರಿಲ್ 2022

ಜನತಾ ಜಲಧಾರೆಗಾಗಿ ತಲಕಾವೇರಿಯಲ್ಲಿ ತೀರ್ಥ ಸಂಗ್ರಹ



ಮಡಿಕೇರಿ,ಏ.16– ಜನತಾ ಜಲಧಾರೆ ರಥಯಾತ್ರೆ ಪ್ರಯುಕ್ತ ಭಾಗಮಂಡಲದ ತ್ರಿವೇಣಿ ಸಂಗಮ ಹಾಗೂ ತಲಕಾವೇರಿ ತೀರ್ಥ ಕುಂಡಿಕೆಯಿಂದ ಪವಿತ್ರ ತೀರ್ಥವನ್ನು ಸಂಗ್ರಹಿಸಲಾಯಿತು. ಭಾಗಮಂಡಲ ಮತ್ತು ತಲಕಾವೇರಿಯಲ್ಲಿ ವಿಶೇಷ ಪೂಜೆ ಸಲ್ಲಿಸಿ ಆರತಿ ಬೆಳಗಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಶಾಸಕ ಸಾ.ರಾ. ಮಹೇಶ್, ಕೆ. ಮಹದೇವ್ ಮತ್ತು ಪಕ್ಷ ಪ್ರಮುಖರು ಪವಿತ್ರ ಜಲವನ್ನು ಜಲಧಾರೆ ರಥದಲ್ಲಿ ಅಳವಡಿಸಿದ್ದ ಬೃಹತ್ ಕೊಡಕ್ಕೆ ಸುರಿಯುವ ಮೂಲಕ ರಥಯಾತ್ರೆ ಆರಂಭಿಸಿದರು. ನೂರಾರು ಮಂದಿ ಕಾರ್ಯಕರ್ತರು ದ್ವಿಚಕ್ರ ವಾಹನದಲ್ಲಿ ತಲಕಾವೇರಿಯಿಂದ ಮಡಿಕೇರಿಯವರೆಗೆ ಸಾಗಿ ಬಂದರು.

ನಂತರ ಮಡಿಕೇರಿಯ ಕಾವೇರಿ ಕಲಾಕ್ಷೇತ್ರದಲ್ಲಿ ಏರ್ಪಡಿಸಿದ್ದ ಕಾರ್ಯಕರ್ತರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಶಾಸಕ ಸಾ.ರಾ. ಮಹೇಶ್, ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ 2023ರ ಚುನಾವಣೆಯಲ್ಲಿ ಹೆಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಬರಬೇಕೆಂದು ಹೇಳಿದರು.

2018ರಲ್ಲಿ ಕೊಡಗು ಜಿಲ್ಲೆಯಲ್ಲಿ ಹಿಂದೆಂದೂ ಕಂಡರಿಯದ ಪ್ರಾಕೃತಿಕ ವಿಕೋಪದ ಸಂದರ್ಭ ನಿರಾಶ್ರಿತರಿಗೆ 840 ಮನೆಗಳನ್ನು ನೀಡುವ ಮೂಲಕ ಸಂತ್ರಸ್ತರಿಗೆ ಸೂರು ಒದಗಿಸಿದ್ದಾರೆ. 9.75 ಲಕ್ಷ ರೂ.ಗಳ ವೆಚ್ಚದಲ್ಲಿ ದೊಡ್ಡ ಪ್ರಮಾಣದಲ್ಲಿ ನಿರಾಶ್ರಿತರಿಗೆ ಮನೆಗಳನ್ನು ಒದಗಿಸಿದ ದೇಶದ ಏಕೈಕ ಮುಖ್ಯಮಂತ್ರಿ ಕುಮಾರಸ್ವಾಮಿ ಆಗಿದ್ದಾರೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು. ಅಂದು ನೀಡಿದ ಮನೆಗಳನ್ನು ಹೊರತುಪಡಿಸಿ ಸರಕಾರ ಇಂದಿಗೂ ಯಾವುದೇ ಮನೆಗಳನ್ನು ನಿರ್ಮಿಸಿಲ್ಲ ಎಂದು ಸಾ.ರಾ. ಮಹೇಶ್ ಆರೋಪಿಸಿದರು.

ಕೇವಲ 14 ದಿನದಲ್ಲಿ ಕೊಡಗಿನ 2 ತಾಲೂಕುಗಳ ರಚನೆಗೂ ಕುಮಾರಸ್ವಾಮಿ ಅವರು ಕ್ಯಾಬಿನೆಟ್ ಒಪ್ಪಿಗೆ ಪಡೆಯುವಲ್ಲಿಯೂ ಸಫಲರಾಗಿದ್ದರು ಎಂದರು.

ಸರಕಾರಗಳು ವಿವಿಧ ಯೋಜನೆಗಳನ್ನು ಘೋಷಿಸುತ್ತವೆ. ಆದರೆ ಕಾರ್ಯಗತ ಮಾಡುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ ಶಾಸಕ ಸಾ.ರಾ. ಮಹೇಶ್, ಜನತಾ ಜಲಧಾರೆ ಯೋಜನೆ ಜಾರಿಯಾಗಲು ಕುಮಾರಸ್ವಾಮಿ ಅವರಿಂದ ಮಾತ್ರವೇ ಸಾಧ್ಯ ಎಂದು ಪ್ರತಿಪಾದಿಸಿದರು. ಜನತಾ ಜಲಧಾರೆ ರಥ ಯಾತ್ರೆ ಕೊಡಗಿನಿಂದ ಪಿರಿಯಾಪಟ್ಟಣ, ಹುಣಸೂರು, ಕೆ.ಆರ್. ನಗರ ಮಾರ್ಗವಾಗಿ ಭಾನುವಾರ ಚಾಮುಂಡೇಶ್ವರಿಗೆ ತಲುಪಲಿದೆ ಎಂದು ಮಾಹಿತಿ ನೀಡಿದರು.

ಜೆಡಿಎಸ್ ಪಕ್ಷದ ಕೊಡಗು ಜಿಲ್ಲಾಧ್ಯಕ್ಷ ಕೆ.ಎಂ. ಗಣೇಶ್ ಮಾತನಾಡಿ, ಇಂದು ನೀರಿಲ್ಲದೆ ಬರಗಾಲ ಎದುರಾಗಿದೆ. ಇದನ್ನು ತಪ್ಪಿಸುವ ಸಲುವಾಗಿ ಜನತಾ ಜಲಧಾರೆ ಕಾರ್ಯಕ್ರಮ ರೂಪಿಸಲಾಗಿದೆ. ಮುಖ್ಯಮಂತ್ರಿಯಾಗಿ ಕುಮಾರಸ್ವಾಮಿ ಅವರು ಅಧಿಕಾರಕ್ಕೆ ಬಂದಲ್ಲಿ ಮಾತ್ರವೇ ಈ ಯೋಜನೆ ಸಮಗ್ರವಾಗಿ ಜಾರಿಯಾಗಲು ಸಾಧ್ಯ ಎಂದು ಹೇಳಿದರು.

ಜನತಾ ಜಲಧಾರೆ ರಥಯಾತ್ರೆ ಅಂಗವಾಗಿ ಕುಶಾಲನಗರ, ಹಾರಂಗಿ, ಸೋಮವಾರಪೇಟೆ ವ್ಯಾಪ್ತಿಯ ನದಿಗಳಿಂದಲೂ ನೀರನ್ನು ಸಂಗ್ರಹಿಸಲಾಗುತ್ತದೆ ಎಂದು ಹೇಳಿದರು. ಕುಶಾಲನಗರ, ಸೋಮವಾರಪೇಟೆ ಕಡೆಗಳಲ್ಲಿ ರಥಯಾತ್ರೆ ನಡೆಯಲಿದೆ ಎಂದು ಕೆ.ಎಂ. ಗಣೇಶ್ ಮಾಹಿತಿ ನೀಡಿದರು.

ಜೆಡಿಎಸ್ ಮುಖಂಡ ನಾಪಂಡ ಮುತ್ತಪ್ಪ ಮಾತನಾಡಿ, ಕೊಡಗಿನ ಗಡಿ ಭಾಗದ ಕುಶಾಲನಗರ ಮತ್ತು ಸೋಮವಾರಪೇಟೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಈ ಭಾಗದ 30 ಹಳ್ಳಿಗಳು ನೀರಿನ ಅಭಾವ ಎದುರಿಸುತ್ತಿವೆ. ಮಾತ್ರವಲ್ಲದೇ ವ್ಯವಸಾಯಕ್ಕಾಗಿ ನಾಲೆ ಮೂಲಕ ನೀರೋದಗಿಸುವ ಕಾರ್ಯ ನೆನೆಗುದಿಗೆ ಬಿದ್ದಿದೆ. ಮುಂದಿನ ಚುನಾವಣೆಯಲ್ಲಿ ರಾಜ್ಯದಲ್ಲಿ ಜೆಡಿಎಸ್ ಪಕ್ಷ ಅಧಿಕಾರಕ್ಕೆ ಬಂದಲ್ಲಿ ಈ ಎಲ್ಲಾ ಯೋಜನೆಗಳನ್ನು ಜಾರಿಗೆ ತರಲಾಗುವುದು ಎಂದು ಹೇಳಿದರು.

ಇದೇ ಸಂದರ್ಭ ರಾಷ್ಟ್ರೀಯ ಪಕ್ಷಗಳನ್ನು ತೊರೆದ ಕಾರ್ಯಕರ್ತರು ಶಾಸಕ ಸಾ.ರಾ. ಮಹೇಶ್ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆ ಯಾದರು. ಕಾರ್ಯಕ್ರಮದಲ್ಲಿ ಹುಣಸೂರು ಜೆಡಿಎಸ್ ಮುಖಂಡರಾದ ಸೋಮಶೇಖರ್, ಜೆಡಿಎಸ್ ನಗರಸಭಾ ಸದಸ್ಯ ಮುಸ್ತಾಫ, ಕೊಡಗು ಜಿಲ್ಲಾ ಜೆಡಿಎಸ್ ಅಲ್ಪ ಸಂಖ್ಯಾತರ ಘಟಕದ ಇಸಾಕ್ ಖಾನ್, ಮನ್ಸೂರ್ ಅಲಿ, ಮತೀನ್, ಯುವ ಜೆಡಿಎಸ್‌ನ ಪ್ರಮುಖರಾದ ಸಿ.ಎಲ್.ವಿಶ್ವ, ಯೂಸೂಫ್ ಕೊಂಡಂಗೇರಿ, ಮಹಿಳಾ ಘಟಕದ ರುಬೀನಾ, ನಜ್ಮಾ ನರಿಖೀರ್ ಸೇರಿದಂತೆ ಪಿರಿಯಾಪಟ್ಟಣ, ಹುಣಸೂರು, ಕೆ.ಆರ್. ನಗರದ ಪಕ್ಷ ಪ್ರಮುಖರು ಉಪಸ್ಥಿತರಿದ್ದರು.

ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಸ್ಥಳದ ಅನ್ವೇಷಣೆ

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮಾಹಿತಿ



ಗೋಣಿಕೊಪ್ಪ, ಏ.16– ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಜಿಲ್ಲಾಡಳಿತ ಸ್ಥಳದ ಅನ್ವೇಷಣೆಯಲ್ಲಿದ್ದು, ಈ ಬಗ್ಗೆ ಕಾರ್ಯಪ್ರವೃತ್ತರಾಗಿದ್ದೇವೆ ಎಂದು ಜಿಲ್ಲಾಧಿಕಾರಿ ಡಾ. ಬಿ.ಸಿ.ಸತೀಶ ಅವರು ಕೊಡವ ಕೂಟಾಳಿಯಡ ಕೂಟಕ್ಕೆ ತಿಳಿಸಿದರು.

ಆಸ್ಪತ್ರೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸೋಮವಾರ ಕೊಡವ ಕೂಟಾಳಿಯಡ ಕೂಟದಿಂದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮನವಿ ಸ್ವೀಕರಿಸಿ ಮಾತನಾಡಿದ ಅವರು, ಆಸ್ಪತ್ರೆ ನಿರ್ಮಾಣಕ್ಕೆ ಸೂಕ್ತ ಸ್ಥಳದ ಅವಶ್ಯಕತೆ ಇದೆ. ಜಿಲ್ಲಾಕೇಂದ್ರದ ಸಮೀಪ 5 ಎಕರೆ ಜಾಗದ ಹುಡುಕಲಾಗುತ್ತಿದೆ. ಸ್ಥಳ ದಾನಿಗಳು ಕೂಡ ಆಸ್ಪತ್ರೆಗೆ ಜಾಗ ನೀಡಲು ಮುಂದೆ ಬಂದರೆ, ಕಾರ್ಯಕ್ರಮಕ್ಕೆ ಯೋಜನೆ ರೂಪಿಸಲಾಗುವುದು ಎಂದರು.

ಆಸ್ಪತ್ರೆ ಬೇಡಿಕೆ ಮುಂದಿಟ್ಟುಕೊಂಡು ಕೂಟದಿಂದ ನಡೆಸಿದ ವಿಡಿಯೋ ಅಭಿಯಾನದ ಬಗ್ಗೆ ನಿಯೋಗದಿಂದ ತಿಳಿಸಿಕೊಡಲಾಯಿತು. ಸಾಕಷ್ಟು ಜನಾಭಿಪ್ರಾಯ ಸಂಗ್ರಹಿಸಿದ್ದು, ಸರ್ಕಾರದ ಮುಂದಿಟ್ಟಿದ್ದೇವೆ. ಶಾಸಕರು, ಉಸ್ತುವಾರಿ ಮಂತ್ರಿ, ಕೇಂದ್ರ ಮತ್ತು ರಾಜ್ಯದ ಆರೋಗ್ಯ ಸಚಿವರು, ಪ್ರಧಾನಮಂತ್ರಿಗಳಿಗೂ ಪತ್ರ ಬರೆದಿರುವುದಾಗಿ ತಿಳಿಸಲಾಯಿತು. ತುರ್ತು ಸಮಯದಲ್ಲಿ ಚಿಕಿತ್ಸೆ ದೊರೆಯದೆ, ಹೊರ ನಗರಗಳಿಗೆ ಕರೆದುಕೊಂಡು ಹೋಗುವಾಗ ಪ್ರಾಣ ಕಳೆದುಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದೆ. ಶೀಘ್ರವಾಗಿ ಯೋಜನೆ ಅನುಷ್ಠಾನ ಮಾಡಬೇಕು ಎಂದು ಮನವಿ ಮಾಡಿಕೊಳ್ಳಲಾಯಿತು. ಕೂಟದ ಅಧ್ಯಕ್ಷೆ ಚಿಮ್ಮಚ್ಚೀರ ಪವಿತ ರಜನ್, ಉಪಾಧ್ಯಕ್ಷ ಮಂದೇಯಂಡ ವನಿತ್ ಸಂಜು, ಕಾರ್ಯದರ್ಶಿ ಚೆಟ್ಟೋಳೀರ ಶರತ್ ಸೋಮಣ್ಣ, ಸಾಂಸ್ಕೃತಿಕ ನಿರ್ದೇಶಕಿ ಕಬ್ಬಚ್ಚೀರ ರಶ್ಮಿ ಕಾರ್ಯಪ್ಪ, ಸಂಘಟನಾ ನಿರ್ದೇಶಕ ಅಮ್ಮಾಟಂಡ ಚೇತನ್ ಅಪ್ಪಯ್ಯ, ಸದಸ್ಯೆ ಅಣ್ಣೀರ ಜೂಬಿ ನಿಯೋಗದಲ್ಲಿದ್ದರು.

ನೆಲ್ಚಿಬೊಳಿ ಕೊಡವ ಚಲನಚಿತ್ರ ಬಿಡುಗಡೆ



ವಿರಾಜಪೇಟೆ, ಏ.16– ಕೊಡವ ಭಾಷೆ ಸಂಸ್ಕೃತಿ ಆಚಾರ ವಿಚಾರಗಳನ್ನು ಉಳಿಸಿ ಬೆಳೆಸಿಕೊಂಡು ಹೋಗಲು ಚಲನಚಿತ್ರ ಮುಖ್ಯ ಮಾಧ್ಯಮವಾಗಲಿದೆ ಎಂದು ಶಾಸಕ ಕೆ.ಜಿ. ಬೋಪಯ್ಯ ಹೇಳಿದರು. ವಿರಾಜಪೇಟೆ ಪುರಭವನದಲ್ಲಿ ನಡೆದ 'ನೆಲ್ಚಿಬೊಳಿ' ಎಂಬ ಕೊಡವ ಭಾಷೆಯ ಚಲನಚಿತ್ರವನ್ನು ಬಿಡುಗಡೆಗೊಳಿಸಿದ ಬಳಿಕ ಅವರು ಮಾತನಾಡಿದರು.

ಕೊಡವ ಭಾಷೆಯು ಪ್ರಾದೇಶಿಕ ಭಾಷೆಯಾಗಿದ್ದು, ಈ ಭಾಷೆ ಎಲ್ಲರಿಗೂ ತಿಳಿದಿರುವುದಿಲ್ಲ ಆದ್ದರಿಂದ ಚಿತ್ರ ನೋಡಲು ಜನ ಕಡಿಮೆ ಸಂಖ್ಯೆಯಲ್ಲಿ ಬರುತ್ತಾರೆ. ಅದರೂ 26ನೇ ಕೊಡವ ಚಿತ್ರ ಬಿಡುಗಡೆಯಾಗುತ್ತಿರುವುದು ಅಭಿನಂದನಾರ್ಹವಾಗಿದೆ. ಕೊಡವ ಚಿತ್ರ ಈ ನೆಲದ ಭಾಷೆ ಸಂಸ್ಕೃತಿ ಪದ್ಧತಿಗಳನ್ನು ಉಳಿಸಲು ಸಾಧ್ಯ ಎಂದು ಬೋಪಯ್ಯ ಹೇಳಿದರು. ವೇದಿಕೆಯಲ್ಲಿ ಬಿಜೆಪಿ ರಾಜ್ಯ ಸಮಿತಿ ಸದಸ್ಯೆ ರೀನಾ ಪ್ರಕಾಶ್, 'ಪೂಮಾಲೆ' ಕೊಡವ ವಾರ ಪತ್ರಿಕೆ ಸಂಪಾದಕ ಮಹೇಶ್ ನಾಚಯ್ಯ, ಎಳ್ತ್‌ಕಾರಡ ಕೂಟದ ಅಧ್ಯಕ್ಷ ರವಿ ಸುಬ್ಬಯ್ಯ, ಚಲನಚಿತ್ರ ನಿರ್ದೇಶಕ ಕಾಳಿಮಾಡ ದಿನೇಶ್ ನಾಚಪ್ಪ ಮುಂತಾದವರು ಉಪಸ್ಥಿತರಿದ್ದರು.

ಚಿತ್ರ ನಟ ನೆರವಂಡ ಉಮೇಶ್ ಈ ಚಿತ್ರದ ಕುರಿತು ಮಾತನಾಡಿ ಇದು ಒಂದು ಕೌಟುಂಬಿಕ ಹಿನ್ನೆಲೆಯುಳ್ಳ ಚಿತ್ರವಾಗಿದೆ. ನಾವು ಬದುಕಿನಲ್ಲಿ ಇಚ್ಛಾ ಶಕ್ತಿ ಹೊಂದಿದ್ದರೆ ಏನನ್ನೂ ಸಾಧಿಸಬಹುದು ಎಂಬುದಾಗಿಯೂ ಮನುಷ್ಯನಿಗೆ ಅಂಗವಿಕಲತೆ ಒಂದು ಶಾಪವಲ್ಲ ಎಂದು ಸಮಾಜಕ್ಕೆ ಸಾರಿ ಹೇಳುವ ಚಿತ್ರವಾಗಿದೆ ಎಂದರು. ಈ ಚಲನ ಚಿತ್ರವನ್ನು ಕಾಳಿಮಾಡ ದಿನೇಶ್ ನಿರ್ದೇಶನ ಮಾಡಿ, ಅಭಿನಯಿಸಿದ್ದಾರೆ. ಅಶೋಕ ಮೊಗವೀರ ಮತ್ತು ಕಾಳಿಮಾಡ ದಿನೇಶ್ ನಿರ್ಮಿಸಿದ್ದಾರೆ. (ಜೊತೆ ಜೊತೆಯಲ್ಲಿ ಧಾರವಾಹಿಯ ಹೆಸರಾಂತ ನಟ ಕಳಕಂಡ ದೇವಯ್ಯ, ನೆರವಂಡ ಉಮೇಶ್, ನಾಯಕಿಯಾಗಿ ಮುಂಡಂಡ ವಿಂಪಲ್ ಹಾಗೂ ಕಳ್ಳಿಚಂಡ ಡಿಂಪಲ್, ಮಂಡೀರ ಪದ್ಮ ಬೋಪಯ್ಯ, ವಾಂಚೀರ ಜಯಾ ನಂಜಪ್ಪ, ನೆಲ್ಲಚಂಡ ರೇಖಾ ಪ್ರಕಾಶ್, ತೇಲಪಂಡ ಪವನ್, ಕೋಳೆರ ಮನು ಮುಂತಾದವರಿದ್ದಾರೆ.

ಕೊಡವರ ಸಂಸ್ಕೃತಿ, ಸಂಪ್ರದಾಯ ವೈಜ್ಞಾನಿಕ ಹಿನ್ನೆಲೆಯಿಂದ ರೂಪಿಸಲ್ಪಟ್ಟಿದೆ: ಮಂಜು ಚಿಣ್ಣಪ್ಪ

ಮಡಿಕೇರಿ,ಏ.16: ನಂಬಿಕೆಯ ಬುನಾದಿಯ ಮೇಲೆ ಅನಾದಿ ಕಾಲದಿಂದಲೂ ನಮ್ಮ ಹಿರಿಯರು ಕಾಪಾಡಿಕೊಂಡು ಬಂದಿರುವ ಪಾರಂಪರಿಕ ಹಿರಿಮೆಯನ್ನು ಅನುಸರಿಸಿಕೊಂಡು ಹೋಗಬೇಕಾದ ಅನಿವಾರ್ಯತೆ ಇಂದಿನ ಪೀಳಿಗೆಗಿದೆ ಎಂದು ಯುನೈಟೆಡ್ ಕೊಡವ ಆರ್ಗನೈಜೇಷನ್ ಸಂಘಟನೆಯ ಅಧ್ಯಕ್ಷ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮೂರ್ನಾಡು ಕೊಡವ ಸಮಾಜದಲ್ಲಿ ನಡೆದ ಶ್ರೀ ಆದಿಕಾವೇರಿ ಕೊಡವ ಒಕ್ಕೂಟದ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು ಕೊಡವರ ಸಾಂಸ್ಕೃತಿಕ ಹಾಗೂ ಸಾಂಪ್ರದಾಯಿಕ ವ್ಯವಸ್ಥೆಯು ವೈಜ್ಞಾನಿಕ ಹಿನ್ನೆಲೆಯೊಂದಿಗೆ ರೂಪಿಸಲ್ಪಟ್ಟಿದ್ದು, ಜಗತ್ತಿನ ಎಲ್ಲಾ ಸಾಮಾಜಿಕ ಹಾಗೂ ಆಡಳಿತಾತ್ಮಕ ದೃಷ್ಟಿಕೋನದಿಂದಲೂ ಸಹ ತನ್ನ ವೈಶಿಷ್ಟ್ಯತೆಯನ್ನು ಉಳಿಸಿ ಕೊಂಡಿತ್ತು. ಇದರಿಂದಾಗಿಯೇ ನಿರಂತರ ಆಕ್ರಮಣಗಳ ಹೊರತಾಗಿಯೂ ಕೊಡವರು ತಮ್ಮ ಅಸ್ತಿತ್ವವನ್ನು ಇಷ್ಟರ ಮಟ್ಟಿಗೆ ಉಳಿಸಿಕೊಳ್ಳಲು ಸಾಧ್ಯವಾಯಿತು ಎಂದರು.



ಇತಿಹಾಸದಲ್ಲಿ ಅತ್ಯಂತ ಹೆಚ್ಚಿನ ರಾಜಕೀಯ ಶೋಷಣೆಗೆ ಒಳಪಟ್ಟ ಹಾಗೂ ಅತೀ ಹೆಚ್ಚು ಹತ್ಯಾಕಾಂಡಗಳನ್ನು ಎದುರಿಸಿದ್ದು, ಜನಾಂಗವಾಗಿದೆ ಎಂದು ವಿಶ್ಲೇಷಿಸಿದ ಅವರು, ಅನಾದಿ ಕಾಲದಿಂದಲೂ ವಿವಿಧ ಸಂಸ್ಥಾನಗಳು ಹಾಗೂ ಸ್ವತಃ ಕೊಡಗನ್ನು ಆಳಿದ ರಾಜರುಗಳು ನಡೆಸಿದ ಹತ್ಯಾಕಾಂಡಗಳನ್ನು ಎದುರಿಸಿದ್ದ ಕೊಡವರು ಆನಂತರದಲ್ಲಿ ಟಿಪ್ಪುವಿನ ಮೋಸದ ದೇವಾಟ್ ಪರಂಬು ಹತ್ಯಾಕಾಂಡದಿಂದಾಗಿ ಸಂಪೂರ್ಣ ಅಸ್ತಿತ್ವ ಕಳೆದುಕೊಳ್ಳುವ ಮಟ್ಟಕ್ಕೆ ಬಂದು ನಿಂತಿದೆ. ಇಲ್ಲದಿದ್ದರೆ ಇಂದು ಕೊಡವರ ಜನಸಂಖ್ಯೆಯು ಸುಮಾರು 50 ಲಕ್ಷದಷ್ಟು ಇರುತ್ತಿತ್ತೆಂದು ಅವರು ವಿಷಾದಿಸಿದರು.

ಇದೀಗ ಅಳಿದುಳಿದು ಅಲ್ಪಸಂಖ್ಯಾತರಾಗಿ ಸ್ವಯಂ ಬದುಕು ಕಟ್ಟಿಕೊಳ್ಳುತ್ತಿರುವ ಸಂದರ್ಭದಲ್ಲಿಯೂ ಸಹ ಸಾಂಸ್ಕೃತಿಕವಾಗಿ ಹಾಗೂ ಪಾರಂಪರಿಕವಾಗಿ ಸವಾಲುಗಳನ್ನು ಎದುರಿಸುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ನಮ್ಮ ಹಿರಿಯರು ಕಾಪಾಡಿಕೊಂಡು ಬಂದಿರುವ ಪಾರಂಪರಿಕ, ಸಾಂಸ್ಕೃತಿಕ ನಂಬಿಕೆಯ ಕಟ್ಟುಪಾಡುಗಳು ಮಾತ್ರವೇ ನಮ್ಮನ್ನು ಮಾನಸಿಕವಾಗಿ ಹಾಗೂ ಸಾಮಾಜಿಕವಾಗಿ ಬಲಿಷ್ಠರನ್ನಾಗಿಸಲು ಸಾಧ್ಯ ಎಂದು ಅವರು ಪ್ರತಿಪಾದಿಸಿದರು.

ವೇದಿಕೆಯಲ್ಲಿ ನಿವೃತ್ತ ಪ್ರೊ. ಪಾಂಡಂಡ ಸೋಮಯ್ಯ, ಬಡುವಂಡ ಸೀತಾದೇವಿ, ಯುಕೊ ಸಂಘಟನೆಯ ನೆಲ್ಲಮಕ್ಕಡ ಮಾದಯ್ಯ, ಪುದಿಯೊಕ್ಕಡ ದಿನೇಶ್, ಮಚ್ಚಾಮಾಡ ರಮೇಶ್, ಬೊಳ್ಳಚೆಟ್ಟಿರ ಮೈನಾ ಪ್ರಕಾಶ್, ಕುಂಜಿಲಂಡ ಗ್ರೇಸಿ ಪೂಣಚ್ಚ ಹಾಜರಿದ್ದರು.

ಬಿಳಿಗಿರಿರಂಗಪ್ಪನ ವಿಜೃಂಭಣೆಯ ಮಹಾರಥೋತ್ಸವ

ಯಳಂದೂರು, ಏ.16(ನಾಗರಾಜು)– 'ದಕ್ಷಿಣದ ತಿರುಪತಿ' ಎಂದೇ ಪ್ರಸಿದ್ಧಿ ಪಡೆದಿರುವ ತಾಲೂಕಿನ ಬಿಳಿಗಿರಿರಂಗನ ಬೆಟ್ಟದಲ್ಲಿ ಶ್ರೀಬಿಳಿಗಿರಿರಂಗನಾಥ ಸ್ವಾಮಿ ಮಹಾರಥೋತ್ಸವ (ದೊಡ್ಡಜಾತ್ರೆ) ಶನಿವಾರ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅದ್ಧೂರಿಯಾಗಿ ನಡೆಯಿತು.

ದೇವಸ್ಥಾನ ಜೀರ್ಣೋದ್ಧಾರ ಕಾಮಗಾರಿ ಹಾಗೂ ಕೊರೊನಾ ಹಿನ್ನೆಲೆಯಲ್ಲಿ ಕಳೆದ 5 ವರ್ಷಗಳಿಂದ ಸ್ಥಗಿತಗೊಂಡಿದ್ದ ರಥೋತ್ಸವ ಈ ಬಾರಿ ವಿಜೃಂಭಣೆಯಿಂದ ನಡೆಯಿತು.

ಜಿಲ್ಲೆ, ಹೊರ ಜಿಲ್ಲೆಗಳು, ನೆರೆಯ ತಮಿಳುನಾಡು, ಕೇರಳ ರಾಜ್ಯಗಳಿಂದ ಬಂದಿದ್ದ ಸಾವಿರಾರು ಭಕ್ತಾದಿಗಳು ರಂಗಪ್ಪನ ತೇರನ್ನು ಎಳೆದು ಪುಳಕಿತರಾದರು. ರಥೋತ್ಸವ ಹಿನ್ನೆಲೆ ಮುಂಜಾನೆಯಿಂದಲೇ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯ ನೆರವೇರಿತು.

ಮುಂಜಾನೆ 5 ಗಂಟೆಗೆ ಕಲ್ಯಾಣೋತ್ಸವ, ಬೆಳಗ್ಗೆ 7 ಗಂಟೆಗೆ ಪ್ರಸ್ಥಾನ ಮಂಟಪೋತ್ಸವ, ಮಧ್ಯಾಹ್ನ 12.10ರಿಂದ 12.22ರವರೆಗೆ ಸಲ್ಲುವ ಶುಭ ಕರ್ಕಾಟಕ ಲಗ್ನದ ಚಂದ್ರನ ವಾಂಶ ಶುಭ ಮುಹೂರ್ತದಲ್ಲಿ ಭೂದೇವಿ ಮತ್ತು ಶ್ರೀದೇವಿ ಸಮೇತ ಬಿಳಿಗಿರಿ ರಂಗನಾಥ ಸ್ವಾಮಿಯ ಉತ್ಸವ ಮೂರ್ತಿಗಳನ್ನು ರಥಾರೋಹಣ ಮಾಡಲಾಯಿತು. ಬಳಿಕ ಮಹಾ ರಥೋತ್ಸವಕ್ಕೆ ಜರುಗಿತು.

ನೂರಾರು ಪೊಲೀಸರು ರಥದ ಗಾಲಿಗಳ ಬಳಿ ನಿಂತು ಸುಗಮ ರಥ ಸಾಂಗವಾಗಿ ಸಾಗಲು ಅನುವು ಮಾಡಿಕೊಟ್ಟರು. 1.15ಕ್ಕೆ ತೇರು ಪಶ್ಚಿಮಾಭಿಮುಖವಾಗಿ ಸಾಗಿ ಸ್ವಸ್ಥಾನ ಸೇರಿತು. ದೇವರ ಹೂ, ತೀರ್ಥಗಳನ್ನು ಚಿಮುಕಿಸಿ, ಪ್ರಸಾದ ವಿತರಿಸಲಾಯಿತು. ರಥವನ್ನು ಭಕ್ತರು ಶ್ರದ್ಧಾ ಭಕ್ತಿಗಳಿಂದ ನಮಿಸಿದರು.

ಗರುಡಾಗಮ: ಅಲಂಕೃತ ಸ್ವಾಮಿಯನ್ನು ಹೊತ್ತ ರಥ ಚಲಿಸುತ್ತಿದ್ದಂತೆ ಭಕ್ತರು ಜಯಘೋಷ ಮೊಳಗಿಸಿದರು. ಪೂರ್ವ ದಿಕ್ಕಿನತ್ತ ತೇರು ಸಂಚರಿಸುತ್ತಿದ್ದಂತೆ ದಾಸರು ಎಡಬಿಡದೆ ಜಾಗಟೆ ಬಾರಿಸಿ, ಶಂಖನಾದ ಮಾಡಿದರು. ಮಂಗಳವಾದ್ಯದ ಸದ್ದು ಬನದಲ್ಲಿ ಅನುರಣಿಸಿತು. ರಥದ ಮುಂಭಾಗ ಅರ್ಚಕರು ತೆಂಗಿನಕಾಯಿ, ಕರ್ಪೂರದ ಆರತಿ ಮಾಡಿ, ತೇರನ್ನು ಬೆಳಗಿದರು.

ಈ ಸಂದರ್ಭ ಮೂರು ಗರುಡ ಪಕ್ಷಿಗಳು ತೇರನ್ನು ಪ್ರದಕ್ಷಿಣೆ ಹಾಕಿ ತೆರಳುತ್ತಿದ್ದಂತೆ, ರಂಗನಾಥನ ಭಕ್ತರು ಗೋವಿಂದ., ಗೋವಿಂದ.. ಎಂಬ ಉದ್ಘೋಷ ಮುಗಿಲು ಮುಟ್ಟಿತು.

ಕೃಷಿಕರು ಹೊಸ ಫಸಲಿನ ಧವಸ, ಧಾನ್ಯವನ್ನು ತೂರಿದರೆ, ಹರಕೆಹೊತ್ತ ಮಹಿಳೆಯರು ನಾಣ್ಯಗಳನ್ನು ತೇರಿಗೆ ಚೆಲ್ಲಿ ಸಂಭ್ರಮಿಸಿದರು. ನವ ದಂಪತಿ ಬಾಳೆಹಣ್ಣಿಗೆ ಧವನವನ್ನು ಸಿಕ್ಕಿಸಿ, ರಥಕ್ಕೆ ಎಸೆದು ಹರಕೆ ಒಪ್ಪಿಸಿದರು.

ಪುನೀತ್ ಭಾವಚಿತ್ರ ಪ್ರದರ್ಶನ: ರಥೋತ್ಸವದ ಸಂದರ್ಭದಲ್ಲಿ ಕೆಲವು ಯುವಕರು ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರವನ್ನು ಪ್ರದರ್ಶಿಸಿದ್ದು ಗಮನ ಸೆಳೆಯಿತು. ಪುನೀತ್ ರಾಜ್‌ಕುಮಾರ್ ಪರ ಘೋಷಣೆಗಳನ್ನು ಕೂಗುತ್ತಾ ನೆಚ್ಚಿನ ನಟನನ್ನು ಸ್ಮರಿಸಿದರು.

ಉಚಿತ ಬಸ್ ಸೇವೆ: ಯಳಂದೂರು ಪಟ್ಟಣದಿಂದ ಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಕಿರಿದಾಗಿದೆ. ಜಾತ್ರೆಯ ದಿನ ಈ ಭಾಗದಲ್ಲಿ ವಾಹನ ದಟ್ಟಣೆ ಹೆಚ್ಚಾಗುವುದರಿಂದ ಸಂಚಾರಕ್ಕೆ ತೊಡಕಾಗುತ್ತದೆ ಎಂದು ಅಧಿಕಾರಿಗಳು ಸಲಹೆ ನೀಡಿದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ಚೆಕ್‌ಪೋಸ್ಟ್ ಬಳಿಯಿಂದ ಬೆಟ್ಟಕ್ಕೆ ಕೆಎಸ್‌ಆರ್‌ಟಿಸಿಯಿಂದ ಉಚಿತ ಬಸ್ ವ್ಯವಸ್ಥೆ ಮಾಡಲಾಗಿತ್ತಾದರೂ ಭಕ್ತರ ಸಂಖ್ಯೆ ಹೆಚ್ಚಿದ್ದರಿಂದ ಬೆಳಗ್ಗೆಯಿಂದಲೇ ಕಿ.ಮೀ.ವರೆಗೂ ಟ್ರಾಫಿಕ್ ಜಾಮ್ ಉಂಟಾಗಿತ್ತು. ನೂರಾರು ಭಕ್ತರಿಗೆ ಯಳಂದೂರಿನಲ್ಲೇ ಬಸ್ ಸಿಗದೆ ಪರದಾಡುವಂತಾಯಿತು.

ಗೋವಿಂದ.., ಗೋವಿಂದ... ಉದ್ಘೋಷದೊಂದಿಗೆ ಜರುಗಿದ ರಂಗಪ್ಪನ ಜಾತ್ರೆ



ಶಾಸಕ ಸಿ.ಪುಟ್ಟರಂಗಶೆಟ್ಟಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್.ಕಾತ್ಯಾಯಿನಿದೇವಿ, ತಹಸೀಲ್ದಾರ್ ಕೆ.ಬಿ.ಆನಂದಪ್ಪನಾಯಕ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು, ಪೊಲೀಸ್ ಸಿಬ್ಬಂದಿ ಇದ್ದರು.

ಬದನಗುಪ್ಪೆಯಲ್ಲಿ ಸಂಭ್ರಮದ ಶ್ರೀಮಂಟೇಸ್ವಾಮಿ ಕೊಂಡೋತ್ಸವ....



ಚಾಮರಾಜನಗರ ತಾಲೂಕಿನ ಬದನಗುಪ್ಪೆ ಗ್ರಾಮದಲ್ಲಿ ಶುಕ್ರವಾರ ಸಂಜೆ ಶ್ರೀಮಂಟೇಸ್ವಾಮಿ ಕೊಂಡೋತ್ಸವ ವಿಜೃಂಭಣೆಯಿಂದ ನಡೆಯಿತು. ಚಿತ್ರ: ಬದನಗುಪ್ಪೆ ಮಲ್ಲಣ್ಣ.

ಇಂದು ಎಪಿಎಂಸಿ ಚುನಾವಣೆ: 1,49,665 ಮತದಾರರು

■ ಕಣದಲ್ಲಿ 28 ಅಭ್ಯರ್ಥಿಗಳು ■ ಬೆಳಗ್ಗೆ 7 ರಿಂದ ಸಂಜೆ 4ರ ವರೆಗೆ ಮತದಾನ

ಚಾಮರಾಜನಗರ, ಏ.16(ಎಸ್‌ಎಸ್)– ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ)ಗೆ ಏ.17ರಂದು ಚುನಾವಣೆ ನಡೆಯಲಿದೆ.

ಚಾಮರಾಜನಗರ ಎಪಿಎಂಸಿಗೆ ಚಾಮರಾಜನಗರ ಮತ್ತು ಯಳಂದೂರು ತಾಲೂಕುಗಳು ಒಳಪಟ್ಟಿವೆ. ಈ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 35 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಬೆಳಗ್ಗೆ 7 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದೆ.

ನಗರದ ಸತ್ತಿ ರಸ್ತೆಯಲ್ಲಿರುವ ಯೂನಿವರ್ಸಲ್ ಸ್ಕೂಲ್‌ನಲ್ಲಿ ಶನಿವಾರ ಮಸ್ಟರಿಂಗ್ ಕಾರ್ಯ ನಡೆಯಿತು. ಚುನಾವಣೆಗೆ ನಿಯೋಜನೆಗೊಂಡಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿ ತಮಗೆ ನಿಯೋಜನೆಗೊಂಡಿರುವ ಮತಗಟ್ಟೆಗಳಿಗೆ ಸಾರಿಗೆ ಬಸ್ ಮೂಲಕ ತೆರಳಿದರು.

28 ಅಭ್ಯರ್ಥಿಗಳ ಭವಿಷ್ಯ: ಚಾಮರಾಜನಗರ ಎಪಿಎಂಸಿಯ 12 ನಿರ್ದೇಶಕ ಸ್ಥಾನಗಳಿಗೆ ಮತದಾನ ನಡೆಯಲಿದೆ. ಆಯ್ಕೆ ಬಯಸಿ ಒಟ್ಟು 28 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಈ ಚುನಾವಣೆಗೆ ರಾಜಕೀಯ ಪಕ್ಷಗಳಿಂದ ಹೊರತಾಗಿದ್ದರೂ ಸಹ ಸ್ಪರ್ಧಿಸಿರುವ ಅಭ್ಯರ್ಥಿಗಳು ಒಂದಲ್ಲ ಒಂದು ಪಕ್ಷದೊಂದಿಗೆ ಗುರುತಿಸಿಕೊಂಡಿದ್ದಾರೆ. ಹಿಗಾಗಿ, ಆ ಪಕ್ಷಬೆಂಬಲಿತ ಅಭ್ಯರ್ಥಿ ಎಂದು ಘೋಷಿಕೊಂಡು ಮತಯಾಚಿಸಿದ್ದಾರೆ.

> 6 ಚಾಮರಾಜನಗರ ಎಪಿಎಂಸಿ ನಿರ್ದೇಶಕ ಸ್ಥಾನಗಳಿಗೆ ಭಾನುವಾರ ಮತದಾನ ನಡೆಯಲಿದೆ. ಇದಕ್ಕೆ ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿದೆ. ಮತದಾರರು ಮತಗಟ್ಟೆಗಳಿಗೆ ಆಗಮಿಸಿ ತಮ್ಮ ಹಕ್ಕು ಚಲಾಯಿಸಬೇಕು.
>
> – ಚಿದಾನಂದ ಗುರುಸ್ವಾಮಿ, ಚುನಾವಣಾಧಿಕಾರಿಗಳು ಹಾಗೂ ತಹಸೀಲ್ದಾರ್.

ಒಟ್ಟು 1,49,665 ಮತದಾರರು ಮತ ಚಲಾಯಿಸಲು ಅರ್ಹರಾಗಿದ್ದಾರೆ. ಇದರಲ್ಲಿ 1,11,636 ಪುರುಷರು ಮತ್ತು 38,027 ಮಹಿಳಾ ಮತದಾರರಿದ್ದಾರೆ. ಈ ಚುನಾವಣೆಗೆ ಮತಪತ್ರವನ್ನು ಬಳಸಲಾಗಿದೆ. ಒಬ್ಬ ಮತದಾರ ಒಂದು ಮತವನ್ನು ಮಾತ್ರ ಹಾಕಬೇಕು. ಹೆಚ್ಚಿಗೆ ಮತ ಹಾಕಿದರೆ ಅದು ಅಸಿಂಧುವಾಗಲಿದೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ. ಏ. 20ರ ಬುಧವಾರ ಮತ ಏಣಿಕಾ ಕಾರ್ಯ ನಡೆದು ಫಲಿತಾಂಶ ಹೊರಬೀಳಲಿದೆ.

ಹನೂರಲ್ಲಿ ಗುಡ್‌ಫ್ರೈಡೇ ಆಚರಣೆ



ಹನೂರು,ಏ.16(ಸೋಮು)– ತಾಲೂಕಿನ ವಿವಿಧ ಕ್ರೈಸ್ತ ದೇವಾಲಯಗಳಲ್ಲಿ ಗುಡ್‌ಫ್ರೈಡೇ (ಶುಭ ಶುಕ್ರವಾರ) ಆಚರಣೆಯನ್ನು ಭಕ್ತಿ ಭಾವದಿಂದ ಕ್ರೈಸ್ತ ಬಾಂಧವರು ಪ್ರಾರ್ಥನೆ ಸಲ್ಲಿಸುವ ಮೂಲಕ ಆಚರಿಸಿದರು.

ತಾಲೂಕಿನ ಮಾರ್ಟಳ್ಳಿ, ತೋಮಿ ಯರ್‌ಪಾಳ್ಯ, ಪುಷ್ಪಾಪುರ, ಎಡಳ್ಳಿ ದೊಡ್ಡಿ, ಮಂಗಲ, ವಡ್ಡರದೊಡ್ಡಿ ಸೇರಿದಂತೆ ವಿವಿಧ ಗ್ರಾಮಗಳ ಚರ್ಚ್‌ಗಳಲ್ಲಿ ಶುಭ ಶುಕ್ರವಾರ ಆಚರಿಸಲಾಯಿತು. ಹನೂರು ಆರೋಗ್ಯ ಮಾತೆ ದೇವಾಲಯದ ಫಾದರ್ ರೋಷನ್‌ಬಾಬು ಮಾತನಾಡಿ, ಯೇಸುವನ್ನು ಶಿಲುಬೆಗೆ ಏರಿಸಿದ ದಿನವೇ ಶುಭಶುಕ್ರವಾರವಾಗಿದೆ. ಈ ದಿನದಂದು ಜನರ ಪಾಪಕ್ಕೋಸ್ಕರ ತಮ್ಮ ಪ್ರಾಣವನ್ನೇ ಅರ್ಪಿಸಿದ ಪವಿತ್ರ ದಿನವಾಗಿದೆ. ಈ ದಿನದ ತಯಾರಿಗಾಗಿ ಕ್ರೈಸ್ತರು 40 ದಿನಗಳ ಹಿಂದಿನಿಂದಲೇ ಉಪವಾಸ, ಪ್ರಾರ್ಥನೆ ಮತ್ತು ಪರಮಾತ್ಮನ ಸೇವೆಗಳನ್ನು ಪ್ರಾರಂಭಿಸುತ್ತಾರೆ. ಆನರು ತಾವು ಮಾಡಿದ ಪಾಪಕರ್ಮಗಳಿಗೆ ಪರಿಹಾರ ಬೇಡಿಕೊಳ್ಳುವ ಸಮಯವಾಗಿದೆ. ಈ ಸುದಿನದ ಹಿಂದಿನ ಭಾನುವಾರ ಎಲ್ಲಾ ಜನರು ತೆಂಗಿನ ಗರಿಗಳನ್ನು ಯೇಸುವಿಗೆ ಸಮರ್ಪಿಸಿ ಹೋಜಾನ, ಹೋಜಾನ ಎಂಬ ಗೀತೆಯನ್ನು ಹಾಡುತ್ತಾರೆ. ಇದರ ಜೊತೆ ಪ್ರಭು ಯೇಸುವು ತಮ್ಮ ಗೆಳೆಯರಿಗೆ ನಾನು ನಿಮ್ಮನ್ನು ಪ್ರೀತಿಸಿದಂತೆ ನೀವು ಇತರರನ್ನು ಪ್ರೀತಿಸಿ ಎಂಬ ಸಂದೇಶ ನೀಡಿದ ಸುದಿನವಾಗಿದೆ ಎಂದು ತಿಳಿಸಿದರು.

ರಾಜ್ಯದ ನದಿಗಳ ನೀರಿನ ಸದ್ಬಳಕೆಗಾಗಿ 'ಜನತಾ ಜಲಧಾರೆ'



ಹನೂರು, ಏ.16(ಸೋಮು)– ರಾಜ್ಯದ ನದಿಗಳಲ್ಲಿ ದೊರೆಯುವ ನೀರನ್ನು ಸದ್ಬಳಕೆ ಮಾಡಿ ಕರ್ನಾಟಕದ ಜನತೆಗೆ ಜಲ ಶ್ಯಾಮಲ, ಸಸ್ಯ ಶ್ಯಾಮಲವಾಗಿಸಲು ಜೆಡಿಎಸ್ ಕಟಿ ಬದ್ಧವಾಗಿದೆ. ಹೀಗಾಗಿ ರಾಜ್ಯದಲ್ಲಿ ಜನತಾ ಜಲಧಾರೆಯ ಜಲಯಾತ್ರೆ ಜರುಗಲಿದೆ ಎಂದು ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಎಂ.ಆರ್.ಮಂಜುನಾಥ್ ತಿಳಿಸಿದರು.

ಪಟ್ಟಣದ ಜೆಡಿಎಸ್ ಕಚೇರಿ ಬಳಿ ಜನತಾ ಜಲಧಾರೆಯ ಜಲಯಾತ್ರೆ ಸಭೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನರಾಂ ಜಯಂತಿ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಾಜಿ ಪ್ರಧಾನಿ ದೇವೇಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಏ.16 ರಿಂದ ಏ. 28ರವರೆಗೆ ರಾಜ್ಯದಲ್ಲಿ ಜಲಧಾರೆ ಕಾರ್ಯಕ್ರಮ ಜರುಗುತ್ತಿದೆ. ರಾಜ್ಯದಲ್ಲಿ ನೀರಿನ ಸಮಸ್ಯೆ ಬಗ್ಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಲು ಎಲ್ಲರೂ ಕೈಜೋಡಿಸಬೇಕು ಎಂದರು.

ರೈತರು ಹಾಗೂ ಜನರಿಗೆ ಅನುಕೂಲವಾಗುವಂತೆ ಹೋರಾಟಕ್ಕೆ ಚಾಲನೆ ನೀಡಲಾಗಿದೆ. ಹೀಗಾಗಿ ಜೆಡಿಎಸ್ ಕಾರ್ಯಕರ್ತರು ಒಗ್ಗೂಡಿ ಶ್ರಮಿಸಬೇಕು. ಅಲ್ಲದೇ ಹನೂರು ತಾಲೂಕಿನ ಗುಂಡಾಲ್ ಜಲಾಶಯ ಹಾಗೂ ಉಡುತೊರೆ ಹಳ್ಳ ಜಲಾಶಯದ ಬಳಿ ಜಲಧಾರೆ ರಥ ಬರುತ್ತಿದ್ದು, ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ನೀಡಿದ ಸಂವಿಧಾನ ಸರ್ವಧರ್ಮಗಳ ರಕ್ಷಕವಾಗಿ, ಸಂವಿಧಾನವು ಕಾನೂನುಗಳ ತಾಯಿಯಾಗಿದೆ. ಅಂಬೇಡ್ಕರ್ ಹಾಗೂ ಬಾಬು ಜಗಜೀವನ ರಾಮ್ ಅವರ ಕೊಡುಗೆ ದೇಶಕ್ಕೆ ಇದೆ. ಹೀಗಾಗಿ ಅವರ ಆಶೋತ್ತರಗಳನ್ನು ಈಡೇರಿಸಲು ಎಲ್ಲರೂ ತತ್ವಾದರ್ಶಗಳನ್ನು ಪಾಲಿಸಬೇಕು ಎಂದು ತಿಳಿಸಿದರು.

ಮುಖಂಡ ಮುಳ್ಳೂರು ಶಿವಮಲ್ಲು ಮಾತನಾಡಿ, ಏಪ್ರಿಲ್ ತಿಂಗಳು ಲೋಕದ ಬೆಳಕಿನ ದಿನವಾಗಿದೆ. ಏಕೆಂದರೆ ಈ ತಿಂಗಳಲ್ಲಿ ಮಹಾನ್ ವ್ಯಕ್ತಿಗಳು ಹುಟ್ಟಿದ ದಿನವಾಗಿದ್ದು, ಡಾ.ಬಿ.ಆರ್.ಅಂಬೇಡ್ಕರ್ ಶ್ರಮದಿಂದ ಸಂವಿಧಾನ ಮೂಲಕ ಸ್ವತಂತ್ರ ಸಿಕ್ಕಿದೆ. ಹಾಗೆಯೇ ಕೃಷಿ ಸಚಿವರಾಗಿದ್ದ ವೇಳೆ ರೈತರು ಹಾಗೂ ಜನತೆಗೆ ಅನುಕೂಲವಾಗುವಂತೆ ಹಸಿರು ಕ್ರಾಂತಿಯನ್ನು ಉಂಟುಮಾಡಿದ ಡಾ.ಬಾಬು ಜಗಜೀವನರಾಂ ಅವರ ಕೊಡುಗೆ ಸಹ ಅಪಾರವಾಗಿದೆ ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಸದಸ್ಯರಾದ ಶಾಗ್ಯ ಬಾಬಣ್ಣ (ನಾಗೇಂದ್ರ), ಶಿವಮೂರ್ತಿ, ಹನೂರು ಪಪಂ ಸದಸ್ಯರಾದ ಆನಂದ್, ಮಹೇಶ್, ಮುಖಂಡರಾದ ನಾಗಿರೆಡ್ಡಿ, ಜಸ್ಸಿಂಪಾಷಾ, ಬಸವರಾಜು, ರಾಜುಗೌಡ, ಚಿನ್ನವೆಂಕಟ, ಗೋವಿಂದರಾಜು, ಅಮೀನ್, ರಾಮಾಪುರ ಮಹದೇವ, ಎಸ್.ಆರ್.ಮಹಾದೇವ, ಡಿ.ಕೆ.ರಾಜು, ತಮ್ಮಯ್ಯ ಮತ್ತಿತರಿದ್ದರು.

ನನಗೆ ಚಪ್ಪಲಿ ತೋರಿಸಿ ಅಪಮಾನ ಮಾಡಿದವ ಕಾಂಗ್ರೆಸ್ ಮುಖಂಡ



ಕೊಳ್ಳೇಗಾಲ, ಏ.16(ನಾಗೇಂದ್ರಸ್ವಾಮಿ)– ನನಗೆ ಚಪ್ಪಲಿ ತೋರಿಸಿ ಅಪಮಾನಗೈದ ಉತ್ತಂಬಳ್ಳಿಯ ಸಿದ್ದರಾಜು ನನ್ನ ಬೆಂಬಲಿಗನಲ್ಲ. ಆತ ಕಾಂಗ್ರೆಸ್ ಮುಖಂಡ. ಇಂತಹ ಕೀಳು ಸಂಸ್ಕೃತಿಯನ್ನು ನಾನು ಖಂಡಿಸುತ್ತೇನೆ ಎಂದು ಶಾಸಕ ಎನ್.ಮಹೇಶ್ ಹೇಳಿದರು.

ಪಟ್ಟಣದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನಗೆ ಚಪ್ಪಲಿ ತೂರಲು ಮುಂದಾದ ಸಿದ್ದರಾಜು ನನ್ನ ಬೆಂಬಲಿಗನೇ ಅಲ್ಲ, ನನ್ನ ಗೆಲುವಿಗೆ ಆತ ಶ್ರಮಿಸಿಯೂ ಇಲ್ಲ. ಶುಕ್ರವಾರ ಬೆಳಗ್ಗೆ 8.30ರ ಸಮಯದಲ್ಲಿ ನಾನು ಹಬ್ಬಕ್ಕೆಂದು ಉತ್ತಂಬಳ್ಳಿ ಗ್ರಾಮಕ್ಕೆ ತೆರಳಿ, ವಾಪಸ್ಸಾಗುತ್ತಿದ್ದ ವೇಳೆ ನನಗೆ ಆತ(ಸಿದ್ದರಾಜು) ಚಪ್ಪಲಿ ಎಸೆಯಲು ಮುಂದಾದ. ತಕ್ಷಣ ಇದನ್ನು ಗಮನಿಸದ ನನ್ನ ಗನ್ ಮ್ಯಾನ್ ವಾಹನದಲ್ಲೇ ಕುಳಿತುಕೊಂಡು ಕಿರುಚಿಕೊಂಡರು. ಏಕೆ? ಎಂದು ಕೇಳಿದಾಗ ಗನ್‌ಮ್ಯಾನ್ ನನಗೆ ಘಟನೆ ವಿವರಿಸಿದ ಎಂದರು.

ಗನ್ ಮ್ಯಾನ್ ಆತ ಚಪ್ಪಲಿ ಹಿಡಿದುಕೊಂಡು ನಿಂತಿದ್ದ ಸ್ಥಳಕ್ಕೆ ತೆರಳಿ ಏಕೆ ಹೀಗೆ ಮಾಡುತ್ತಿಯಾ? ಎಂದು ಪ್ರಶ್ನಿಸಿದ್ದಾರೆ. ಅದಕ್ಕೆ ಸಿದ್ದರಾಜು ನಿನಗೂ ಈ ದಿನ ಚಪ್ಪಲಿಯಲ್ಲಿ ಹೊಡೆಯುವೆ, ನಿಮ್ಮ ಶಾಸಕರಿಗೂ ಹೊಡೆಯುವೆ ಎಂದಿದ್ದಾನೆ. ಜೊತೆಗೆ ಲಘುವಾಗಿ ಮಾತನಾಡಿದ್ದಾನೆ. ನಿಜಕ್ಕೂ ಇಂತಹ ಘಟನೆ ಖಂಡನೀಯ, ನನಗಾದ ಈ ಕಹಿ ಘಟನೆ ಇನ್ನಾರಿಗೂ ಆಗದಿರಲಿ ಎಂದು ಶಾಸಕರು ಬೇಸರ ವ್ಯಕ್ತಪಡಿಸಿದರು. ಈತ ಚಪ್ಪಲಿ ಹಿಡಿದುಕೊಂಡು ಮಾತನಾಡಿದ ವಿಚಾರವನ್ನು ಪೊಲೀಸರಿಗೆ ತಿಳಿಸಲಾಯಿತು. ಬಳಿಕ ನಾನು ಬಿಳಿಗಿರಿರಂಗನ ಬೆಟ್ಟಕ್ಕೆ ತೆರಳಿದೆ. ನಾನು ಯಾರಿಗೋ ಹೆದರಿ ರಕ್ಷಣೆಯೊಂದಿಗೆ ಕ್ಷೇತ್ರದಲ್ಲಿ ತೆರಳಲು ಆಗಲ್ಲ. ಆದರೆ, ಈ ರಾಜಕೀಯ ಹುನ್ನಾರ ನಿಜಕ್ಕೂ ನಾಚಿಕೆಗೇಡಿನ ಸಂಗತಿ ಎಂದರು.

ಒಂದನೇ ಪುಟದಿಂದ

ಜನತಾ ಜಲಧಾರೆ

ಈ ವೇಳೆ ಜೆಡಿಎಸ್‌ನ ಮುಖಂಡರು ಹಾಗೂ ಕಾರ್ಯಕರ್ತರು ತಾಲೂಕಿನ ತಾರಕ ಹಾಗೂ ನುಗು ಜಲಾಶಯಗಳಿಂದ ತಂದಿದ್ದ ನೀರನ್ನೂ ದೇವೇಗೌಡರು ಜಲಧಾರೆ ವಾಹನದ ಕಳಸಕ್ಕೆ ಸುರಿದರು. ನಂತರ ಶ್ರೀರಂಗಪಟ್ಟಣ ತಾಲೂಕು ಕೆಆರ್‌ಎಸ್ ಜಲಾಶಯಕ್ಕೆ ಆಗಮಿಸಿದ ದೇವೇಗೌಡರು, ಕಾವೇರಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಜಲಾಶಯದ ದಕ್ಷಿಣ ದ್ವಾರದ ಮುಂಭಾಗದಲ್ಲಿ ವೇದಬ್ರಹ್ಮ ಡಾ. ಭಾನುಪ್ರಕಾಶ್ ಶರ್ಮ ನೇತೃತ್ವದ ತಂಡ 108 ಕಳಸಗಳನ್ನು ಸ್ಥಾಪಿಸಿ ಗಂಗಾ ಪೂಜೆ ಮಾಡಿ, ಸಂಕಲ್ಪದೊಂದಿಗೆ ಮಂಗಳಾರತಿ ಮಾಡಿದ ನಂತರ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಸೇರಿದಂತೆ ಜೆಡಿಎಸ್ ಶಾಸಕರು ಕೆಆರ್‌ಎಸ್‌ನಲ್ಲಿ ಸಂಗ್ರಹಿಸಿದ್ದ ನೀರನ್ನು ಜನತಾ ಜಲಧಾರೆ ಕಳಸಕ್ಕೆ ಸುರಿಯುವ ಮೂಲಕ ಯಾತ್ರೆಗೆ ಚಾಲನೆ ನೀಡಿದರು. ನಂತರ 108 ಕಳಸ ಹೊತ್ತಿದ್ದ ಮಹಿಳೆಯರು, ಬೊಂಬೆ ಕುಣಿತ, ವೀರಗಾಸೆ, ಪೂಜಾ ಕುಣಿತ, ಡೊಳ್ಳು ಕುಣಿತ, ನಂದಿ ಧ್ವಜ, ಪಟ್ಟದ ಕುಣಿತದ ಜೊತೆ ಸಾಗಿದ ಜಲಧಾರೆ ರಥವು ತಾಲೂಕಿನ ಕೆಆರ್‌ಎಸ್, ಹುಲಿಕೆರೆ, ಪೇಪರ್ ಮಿಲ್ ಸರ್ಕಲ್, ಬೆಳಗೊಳ, ಹೊಸಹಳ್ಳಿ, ಪಂಪ್ ಹೌಸ್ ಸರ್ಕಲ್, ಪಾಲಹಳ್ಳಿ ಮೂಲಕ ಶ್ರೀರಂಗಪಟ್ಟಣದ ಸ್ನಾನ ಘಟ್ಟದವರೆಗೆ ಸಾಗಿ ಮತ್ತೊಮ್ಮೆ ಕಾವೇರಿ ತೀರ್ಥ ಸಂಗ್ರಹಿಸಿ ರಥದ ಕಳಸಕ್ಕೆ ಸುರಿಯಲಾಯಿತು.

ಕೆಆರ್‌ಎಸ್‌ನ ಸಂತೇಮಾಳದ ಬಳಿ ಜಲಧಾರೆ ರಥಕ್ಕೆ ಶಾಸಕ ರವೀಂದ್ರ ಶ್ರೀಕಂಠಯ್ಯ ಅಭಿಮಾನಿ ಬಳಗ ಮತ್ತು ಜೆಡಿಎಸ್ ಮುಖಂಡರು ಸುಮಾರು 300 ಕೆ.ಜಿ. ತೂಕದ ಭಾರೀ ಗಾತ್ರದ ಸೇಬಿನ ಹಾರ ಹಾಕುವ ಮೂಲಕ ಅಭಿಮಾನ ಮೆರೆದರು. ಕಾರ್ಯಕ್ರಮದಲ್ಲಿ ಶಾಸಕರಾದ ಅಶ್ವಿನ್‌ಕುಮಾರ್, ಸಿ.ಎನ್.ಮಂಜೇಗೌಡ, ಪಿ.ಎ.ಶರವಣ, ಮಾಜಿ ಶಾಸಕ ಚಿಕ್ಕಣ್ಣ, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಮೈಸೂರು ನಗರಾಧ್ಯಕ್ಷ ಚೆಲುವೇಗೌಡ, ಮಹಿಳಾ ಘಟಕದ ಅಧ್ಯಕ್ಷೆ ಬೃಂದ, ತಾಲೂಕು ಘಟಕದ ಅಧ್ಯಕ್ಷ ರಾಜೇಂದ್ರ, ಪುರಸಭಾಧ್ಯಕ್ಷೆ ಶಿವಮ್ಮ, ಮಾಜಿ ಅಧ್ಯಕ್ಷೆ ಸರೋಜಮ್ಮ, ಸದಸ್ಯೆ ಅನಿತಾ, ಮುಖಂಡರಾದ ಸಿ.ಎನ್.ನರಸಿಂಹೇಗೌಡ, ಸಿ.ವಿ.ನಾಗರಾಜು, ಬೀರಿಹುಂಡಿ ಬಸವಣ್ಣ, ಚಾ.ನಂಜುಂಡ ಮೂರ್ತಿ, ಮಳಲಿ ಶಾಂತ, ಯೋಗನರಸಿಂಹೇಗೌಡ, ಸಫಿ ಉಲ್ಲಾ ಇನ್ನಿತರರಿದ್ದರು.

ರಾಜ್ಯದಲ್ಲಿ ಜನರಿಗೆ ನೀರಿಲ್ಲದೆ ಹಾಹಾಕಾರ

ಹೆಚ್.ಡಿ.ಕೋಟೆ ತಾಲೂಕು ಬೀಚನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಏರ್ಪಡಿಸಿದ್ದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಹೆಚ್.ಡಿ. ದೇವೇಗೌಡರು, ರಾಜ್ಯದಲ್ಲಿ ಪ್ರಮುಖ ಕಾವೇರಿ, ಕಬಿನಿ, ಕೃಷ್ಣಾ, ಮಲಪ್ರಭಾ ಸೇರಿದಂತೆ ಅನೇಕ ನದಿಗಳು ಹಾಗೂ ಉಪ ನದಿಗಳಿದ್ದರೂ ಜನರಿಗೆ ಸಮರ್ಪಕವಾಗಿ ನೀರು ದೊರೆಯುತ್ತಿಲ್ಲ. ಈ ಕುರಿತು 1962ರಿಂದ ಇಲ್ಲಿಯವರೆಗೆ ಶಾಸನ ಸಭೆ, ರಾಜ್ಯ ಸಭೆ ಹಾಗೂ ಲೋಕಸಭೆಯಲ್ಲಿ ಚರ್ಚಿಸುತ್ತಾ ಬಂದಿದ್ದೇನೆ. ಆದರೆ ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರಗಳಿಂದ ಯಾವುದೇ ರೀತಿಯ ಸಹಕಾರ ಸಿಗಲಿಲ್ಲ ಎಂದು ಆರೋಪಿಸಿದರು.

ಕರ್ನಾಟಕವು ಅಂತರ್ಜಲ ವಿವಾದದ ಸುಳಿಯಲ್ಲಿ ಸಿಲುಕಿದೆ. ಅದರಲ್ಲೂ ತಮಿಳುನಾಡಿನಿಂದ ನಮ್ಮ ರಾಜ್ಯದ ಕಾವೇರಿ ಜಲಾನಯನ ಪ್ರದೇಶಕ್ಕೆ ದೊಡ್ಡ ಪ್ರಮಾಣದಲ್ಲಿ ಅನ್ಯಾಯವಾಗಿದೆ. ಬೆಂಗಳೂರು ನಗರಕ್ಕೆ 19 ಟಿಎಂಸಿ ಕುಡಿಯುವ ನೀರು ಬೇಕೆಂದು ಜಲ ನ್ಯಾಯ ಮಂಡಳಿಯನ್ನು ಕೇಳಿದಾಗ ನಮಗೆ ದೊರೆತದ್ದು ಮಾತ್ರ 4.5 ಟಿಎಂಸಿ ನೀರು ಎಂದ ಅವರು, ರಾಜ್ಯದ ಜನರಿಗೆ ಕುಡಿಯುವ ನೀರು ಹಾಗೂ ನೀರಾವರಿ ಯೋಜನೆ ಜಾರಿ ಮಾಡಲು ಜೆಡಿಎಸ್ ಬದ್ಧವಾಗಿದೆ. ಹೀಗಾಗಿ 2023ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ರಾಜ್ಯದ ಅಧಿಕಾರ ಹಿಡಿಯಲು ಜನರು ಆಶೀರ್ವಾದ ಮಾಡಬೇಕು ಎಂದು ಮನವಿ ಮಾಡಿದರು.

319.13 ಕೋಟಿ ಬಿಡುಗಡೆ

ಮೈಸೂರು ವಿಮಾನ ನಿಲ್ದಾಣದ ರನ್ ವೇ ವಿಸ್ತರಿಸಲಾಗುವುದು ಎಂದು ಘೋಷಿಸಿದ್ದರು.

ಅದರಂತೆ ಇದೀಗ ವಿಮಾನ ನಿಲ್ದಾಣ ವಿಸ್ತರಣೆಗೆ ರಾಜ್ಯ ಸರ್ಕಾರದಿಂದ 240 ಎಕರೆ ಭೂಮಿಯನ್ನು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ (ಎಎಐ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಮೂಲಕ ಹಸ್ತಾಂತರಿಸಲು ಸರ್ಕಾರ ತೀರ್ಮಾನಿಸಿದೆ. ಈ ಪೈಕಿ ಈಗಾಗಲೇ 22 ಎಕರೆ 9 ಗುಂಟೆ ಜಮೀನು ಎಎಐ ಸ್ವಾಧೀನದಲ್ಲಿದೆ. 11.9 ಎಕರೆ ಜಮೀನು ಎಣ್ಣೆಹೊಳೆ ಕಾಲುವೆ ಯಾಗಿದ್ದು, ಇದು ಸರ್ಕಾರಿ ಜಮೀನಾಗಿರುತ್ತದೆ. ಭೂ ಮಾಲೀಕರಿಂದ ಸ್ವಾಧೀನಪಡಿಸಿಕೊಂಡಿರುವ 206 ಎಕರೆ 22$\frac{1}{2}$ ಗುಂಟೆ ಜಮೀನು ಪೈಕಿ 160 ಎಕರೆ $\frac{1}{2}$ ಗುಂಟೆ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದು, ಉಳಿದಂತೆ 46 ಎಕರೆ 22 ಗುಂಟೆ ಜಮೀನಿಗೆ ಪ್ರಾಥಮಿಕ ಅಧಿಸೂಚನೆ ಬಾಕಿ ಇದೆ ಎಂದು ಸರ್ಕಾರಿ ಆದೇಶದಲ್ಲಿ ತಿಳಿಸಲಾಗಿದೆ. ಭೂ ಸ್ವಾಧೀನಪಡಿಸಿಕೊಂಡು ಎಎಐಗೆ ಹಸ್ತಾಂತರಿ ಸಲು ನೋಡಲ್ ಏಜೆನ್ಸಿಯಾಗಿ ಕೆಐಎಡಿಬಿಯನ್ನು ನೇಮಿಸಲಾಗಿದೆ. ಭೂಪರಿಹಾರ ವೆಚ್ಚ ಎಕರೆಗೆ 1.50 ಕೋಟಿಯಂತೆ ಒಟ್ಟು 309,84,37,500 ರೂ.ಗಳಾಗಿದ್ದು, ಸೇವಾ ಶುಲ್ಕ ಶೇ.3ರಂತೆ 9,29,53,125 ರೂ.ಗಳಾಗುತ್ತದೆ. ಒಟ್ಟಾರೆ 219,13,90,625 ರೂ.ಗಳನ್ನು ಸರ್ಕಾರದಿಂದ ಬಿಡುಗಡೆ ಮಾಡಲು ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆಯ ಅಧೀನ ಕಾರ್ಯದರ್ಶಿ ಎಸ್.ಎನ್.ಕಲಾವತಿ ಆದೇಶ ಹೊರಡಿಸಿದ್ದಾರೆ. ಮೈಸೂರು ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆಗೆ 319 ಕೋಟಿ ರೂ. ಬಿಡುಗಡೆ ಮಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮೂಲಭೂತ ಸೌಕರ್ಯ ಇಲಾಖೆ ಸಚಿವ ವಿ.ಸೋಮಣ್ಣ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರಿಗೆ ಸಂಸದ ಪ್ರತಾಪ್ ಸಿಂಹ ಧನ್ಯವಾದ ತಿಳಿಸಿದ್ದಾರೆ.

ಮೈಸೂರಿನ ಬಗ್ಗೆ ಸಿಎಂಗೆ ಅಪಾರ ಕಾಳಜಿ: ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಸಂಸದ ಪ್ರತಾಪ್ ಸಿಂಹ, ಮುಂಬೈ ನೆರಳಲ್ಲಿದ್ದ ಪುಣೆ 20 ವರ್ಷದ ಹಿಂದೆ ನಿರ್ಮಾಣವಾದ ಒಂದು ಹೆದ್ದಾರಿಯಿಂದಾಗಿ ಇಂದು ಸ್ವಂತವಾಗಿ ಗುರುತಿಸಿಕೊಂಡಿದೆ. ಹಾಗೆಯೇ ಮೈಸೂರು ಸಮಗ್ರ ಅಭಿವೃದ್ಧಿಗೆ ಸಂಪರ್ಕ ಸುಧಾರಣೆ ಆಗಲೇಬೇಕು ಎನ್ನುವುದನ್ನು ಮನಗಂಡು ಆ ದಾರಿಯಲ್ಲೇ ನನ್ನ ಪ್ರಯತ್ನ ಮುಂದುವರೆದಿದೆ. ರಸ್ತೆ ಹಾಗೂ ರೈಲ್ವೆ ಸಂಪರ್ಕ ಸುಧಾರಣೆ ಜೊತೆಗೆ 2016ರ ಸೆಪ್ಟೆಂಬರ್‌ನಲ್ಲಿ ವಿಮಾನ ಯಾನ ಸಂಪರ್ಕ ಸಾಧ್ಯವಾಯಿತು. ಪ್ರಧಾನಿ ಮೋದಿ ಅವರ ಉಡಾನ್ ಯೋಜನೆಯಡಿ ವಿಮಾನಯಾನ ಆರಂಭವಾಗಿ ಸದ್ಯ 5 ನಗರಗಳಿಗೆ ಸಂಪರ್ಕಿಸುವ 9 ವಿಮಾನ ಹಾರಾಡುತ್ತಿವೆ. ಆದರೆ ಎಲ್ಲವೂ ಎಟಿಆರ್ ಮಾದರಿಯ ಸಣ್ಣ ವಿಮಾನಗಳು. ಎ3–20 ಮಾದರಿಯ ದೊಡ್ಡ ರೆಕ್ಕೆಯುಳ್ಳ ವಿಮಾನ ಹಾರಾಟ ನಡೆಸಬೇಕಾದರೆ ಕನಿಷ್ಠ 2.8 ಕಿ.ಮೀ. ರನ್‌ವೇ ಬೇಕು. ರನ್‌ವೇ ವಿಸ್ತರಣೆಗೆ ಹೆದ್ದಾರಿ ಅಡ್ಡ ಬಂದಿರುವುದರಿಂದ 2018ರಲ್ಲಿ ಅದಕ್ಕೂ ಅನುಮೋದನೆ ಪಡೆದೆ. ಆದರೆ ನಂತರದ ನಾಲ್ಕೂವರೆ ವರ್ಷಗಳಲ್ಲಿ ಎಲ್ಲಾ ಮುಖ್ಯಮಂತ್ರಿಗಳನ್ನು ಮನವಿ ಮಾಡಿದರೂ ಅಗತ್ಯ ಅನುದಾನ ನೀಡಲಿಲ್ಲ. ಆದರೆ ಸಿಎಂ ಬೊಮ್ಮಾಯಿ ಅವರು ಮೈಸೂರು ಬಗ್ಗೆ ಅಪಾರವಾದ ಕಾಳಜಿ ತೋರಿ ರನ್‌ವೇ ವಿಸ್ತರಣೆ ಅಗತ್ಯವಾದ ಭೂಸ್ವಾಧೀನಕ್ಕಾಗಿ 319 ಕೋಟಿ ರೂ. ಬಿಡುಗಡೆ ಮಾಡಿ, ಆದೇಶ ಹೊರಡಿಸಿದ್ದಾರೆ. 2019ರಲ್ಲಿ ಮೈಸೂರಿನ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವಿ.ಸೋಮಣ್ಣನವರ ವಿಶೇಷ ಪ್ರಯತ್ನ, ಈಗಿನ ಉಸ್ತುವಾರಿ ಸಚಿವರಾದ ಎಸ್.ಟಿ.ಸೋಮಶೇಖರ್ ಅವರ ಬೆಂಬಲ, ಪ್ರೋತ್ಸಾಹ ಸಾಕಷ್ಟಿದೆ. ನಾಲ್ಕೈದು ವರ್ಷಗಳ ಸತತ ಪ್ರಯತ್ನದ ನಂತರ ಇಂದು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಅಭಿವೃದ್ಧಿಪಡಿಸುವುದಕ್ಕೆ ಪೂರಕವಾಗಿ ಮುಖ್ಯಮಂತ್ರಿಗಳು ಬಹಳ ದೊಡ್ಡ ಸಹಕಾರ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

'ಬೃಹತ್ ಮೈಸೂರು' ಜರೂರಿತ್ತು

ರಸ್ತೆ, ರೈಲು, ವಿಮಾನಯಾನ ಸಂಪರ್ಕದ ಜೊತೆಗೆ ಮೈಸೂರು ಗಾರ್ಬೆಜ್ ನಗರ ವಾಗದಂತೆ ತಡೆಯುವುದು ಬಹಳ ಮುಖ್ಯ. ಮೈಸೂರು ರಿಂಗ್ ರಸ್ತೆಯಾಚೆಗೂ ಬೆಳೆದಿದೆಯಾದರೂ ಅನೇಕ ಪ್ರದೇಶ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿದೆ. ಹಾಗಾಗಿ 2020ರ ಫೆ.28ರಂದು ನಾನು 'ಬೃಹತ್ ಮೈಸೂರು' ರಚನೆಗೆ ಅಂದಿನ ಜಿಲ್ಲಾ ಉಸ್ತುವಾರಿ ಸಚಿವರಾದ ವಿ.ಸೋಮಣ್ಣ ಅವರ ಬಳಿ ಮನವಿ ಮಾಡಿ, ನಗರಾಭಿವೃದ್ಧಿ ಸಚಿವರನ್ನೂ ಭೇಟಿ ಮಾಡಿ ಪ್ರಸ್ತಾವನೆ ಸಲ್ಲಿಸಿದೆ. ಆದರೆ ಆ ಸಂದರ್ಭದಲ್ಲಿ ಕೋವಿಡ್ ಹೆಚ್ಚಾಗಿದ್ದರಿಂದ ಈ ಪ್ರಕ್ರಿಯೆ ಮುಂದುವರೆಸಲು ಸಾಧ್ಯವಾಗಲಿಲ್ಲ. 2021ರಲ್ಲಿ ಗ್ರಾಪಂ ಚುನಾವಣೆ ಎದುರಾಗಿದ್ದರಿಂದ ಅಷ್ಟರಲ್ಲಿ 'ಬೃಹತ್ ಮೈಸೂರು' ಘೋಷಣೆ ಮಾಡಬೇಕಾದ ತುರ್ತು ಸೃಷ್ಟಿಯಾಯಿತು. ಆದರೆ ಪಾಲಿಕೆಯಲ್ಲಿ ಜೆಡಿಎಸ್–ಕಾಂಗ್ರೆಸ್ ಆಡಳಿತವಿದ್ದ ಕಾರಣ ಕೌನ್ಸಿಲ್ ನಿರ್ಣಯ ಮಾಡಲಿಲ್ಲ. ಆಗ ಅನಿವಾರ್ಯವಾಗಿ ಹೂಟಗಳ್ಳಿ ನಗರಸಭೆ, ಬೋಗಾದಿ, ಶ್ರೀರಾಂಪುರ, ರಮ್ಮನಹಳ್ಳಿ, ಕಡಕೊಳ ಪಟ್ಟಣ ಪಂಚಾಯ್ತಿ ರಚನೆ ಮಾಡಲಾಯಿತು. ಅಲ್ಲದೆ ಚುನಾವಣೆಯೂ ವಿಳಂಬವಾಯಿತು. ಕಳೆದ ವಾರ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜನಪ್ರತಿನಿಧಿಗಳ ಸಭೆ ನಡೆಸಿ ಒಂದು ನಗರ ಸಭೆ, ನಾಲ್ಕು ಪ.ಪಂ, ಚುನಾವಣೆ ನಡೆಯದಿರುವ ಇಲವಾಲ, ಆಲನಹಳ್ಳಿ ಗ್ರಾಪಂ, ಚುನಾವಣೆ ನಡೆದಿರುವ ಚಾಮುಂಡಿಬೆಟ್ಟ ಹಾಗೂ ಸಿದ್ದಲಿಂಗಪುರ ಗ್ರಾ.ಪಂ. ಸೇರಿಸಿ 'ಬೃಹತ್ ಮೈಸೂರು' ರಚನೆಗೆ ಪ್ರಕ್ರಿಯೆ ಆರಂಭಿಸಲಾಗಿದೆ. ಮೈಸೂರಿನ ಸಂಪರ್ಕವೂ ಅಭಿವೃದ್ಧಿಯಾಗಬೇಕು, ಅದಕ್ಕೆ ತಕ್ಕಂತೆ ನಗರೀಕರಣ ಬೃಹದಾಕಾರವಾಗಿ ಬೆಳೆಯುವಾಗ ಕುಡಿಯುವ ನೀರು, ಕಸ ವಿಲೇವಾರಿ, ರಸ್ತೆ, ವಿದ್ಯುತ್ ಇನ್ನಿತರ ಮೂಲಭೂತ ವ್ಯವಸ್ಥೆಗೆ ಸಮಸ್ಯೆಯಾಗಬಾರದು. ಈ ಕಾರಣಕ್ಕೆ ಈ ಎಲ್ಲಾ ಪ್ರದೇಶಗಳನ್ನು ಪಾಲಿಕೆ ವ್ಯಾಪ್ತಿಗೆ ತರುವ ಪ್ರಯತ್ನಕ್ಕೆ ವೇಗ ಸಿಕ್ಕಿದೆ ಎಂದರು.

ಮೈಸೂರು ನಗರದ ಜನಸಂಖ್ಯೆ 15 ಲಕ್ಷಕ್ಕಿಂತ ಹೆಚ್ಚಿದರೆ ಇಲ್ಲಿಗೆ ಮೆಟ್ರೋ ಸಂಪರ್ಕ ತರಬಹುದು. ಬೆಂಗಳೂರು ಬೃಹದಾಕಾರವಾಗಿ ಬೆಳೆದಿರುವ ಕಾರಣ ಅಲ್ಲಿ ಮೆಟ್ರೋ ಮಾಡಲು ತುಂಬಾ ಕಷ್ಟವಾಯಿತು. ಹಾಗಾಗಿ ಮುಂಜಾಗ್ರತಾ ಕ್ರಮವಾಗಿ 'ಬೃಹತ್ ಮೈಸೂರು ರಚನೆ' ಮಾಡಿ, ಮೆಟ್ರೋ ತರುವ ಪ್ರಯತ್ನ ಈಗಿನಿಂದಲೇ ನಡೆಯಬೇಕು. ಈ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು ವಿಮಾನ ನಿಲ್ದಾಣ ರನ್ ವೇ ವಿಸ್ತರಣೆಗೆ 319 ಕೋಟಿ ಬಿಡುಗಡೆ ಮಾಡಿದ್ದು ತುಂಬಾ ಖುಷಿಯ ಸಂಗತಿ. ನನ್ನ ಮೇಲೆ ವಿಶ್ವಾಸವಿಟ್ಟು ಗೆಲ್ಲಿಸಿರುವ ಜನರ ಋಣ ತೀರಿಸಬೇಕಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಇಲಾಖೆ ಸಚಿವರಾದ ವಿ.ಸೋಮಣ್ಣನವರ ಸಹಕಾರದಿಂದ ಮೈಸೂರು ಜನರ ಋಣ ತೀರಿಸಲು ಸಾಧ್ಯವಾಗುತ್ತಿದೆ. ವಿದ್ಯಾರಣ್ಯಪುರಂ ಸೀವೆಜ್ ಫಾರಂ ಕಸ ವಿಲೇವಾರಿ ಯೋಜನೆಗೆ ಮುಂದಿನ ವಾರ ಫೈನಾನ್ಶಿಯಲ್ ಬಿಡ್ ತೆರೆಯಲಿದ್ದು, ನಾಲ್ಕೈದು ತಿಂಗಳಲ್ಲಿ ಅಲ್ಲಿನ ಕಸ ತೆಗೆಯುವ ಕಾರ್ಯ ಪ್ರಾರಂಭವಾಗಲಿದೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಆಶಯಕ್ಕೆ ವ್ಯತಿರಿಕ್ತವಾಗಿ ಮೀಸಲಾತಿ ವ್ಯಾಪ್ತಿಯೊಳಗೆ ಅಪಾತ್ರರು ಸೇರ್ಪಡೆ

ಸಾಮಾಜಿಕ ಕಾರ್ಯಕರ್ತ ವಾದಿರಾಜ್ ಬೇಸರ | **ಅಂಬೇಡ್ಕರ್ ಜಯಂತಿ ಪ್ರಯುಕ್ತ ಮುಕ್ತ ವಿವಿಯಲ್ಲಿ ವಿಶೇಷ ಉಪನ್ಯಾಸ**

ಮೈಸೂರು,ಏ.16(ಪಿಎಂ)–ಡಾ.ಬಿ.ಆರ್. ಅಂಬೇಡ್ಕರ್ ಅವರ ಬಹುದೊಡ್ಡ ಕೊಡುಗೆಗಳಲ್ಲಿ ಮೀಸಲಾತಿ ಸೌಲಭ್ಯವೂ ಒಂದು. ಆದರೆ ಇಂದು ಅಂಬೇಡ್ಕರ್ ಆಶಯಕ್ಕೆ ವ್ಯತಿರಿಕ್ತವಾಗಿ ಮೀಸಲಾತಿ ವ್ಯಾಪ್ತಿಯೊಳಗೆ ಅಪಾತ್ರರು ಸೇರುವಂತಾಗಿದೆ ಎಂದು ಲೇಖಕ ಮತ್ತು ಸಾಮಾಜಿಕ ಕಾರ್ಯಕರ್ತ ವಾದಿರಾಜ್ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ವಿವಿಯ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಡಾ. ಬಿ.ಆರ್.ಅಂಬೇಡ್ಕರ್ ಅವರ 131ನೇ ಜನ್ಮದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

ಅಂಬೇಡ್ಕರ್ ಮೀಸಲಾತಿ ಸರಿಯಾಗಿ ಜಾರಿಯಾಗಬೇಕೆಂಬ ಅಪೇಕ್ಷೆ ಹೊಂದಿದ್ದರು. ಆದರೆ 7 ದಶಕಗಳ ನಂತರ ಮೀಸಲಾತಿ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಿದ್ದು, ಮೀಸಲಾತಿಯನ್ನು ದುರ್ಬಲಗೊಳಿಸುವ ಪ್ರಯತ್ನ ನಡೆಯುತ್ತಿವೆ. ಇದರ ವ್ಯಾಪ್ತಿಯೊಳಗೆ ಅಪಾತ್ರರು ಸೇರುವಂತಾಗಿದೆ ಎಂದರು.

ಅನೇಕ ರಾಜಕೀಯ ಸಂಗತಿ ಸೇರಿದ ಹಿನ್ನೆಲೆಯಲ್ಲಿ ಯಾರಿಗೆ ಸಿಕಬೇಕೋ ಅವರು ಮೀಸಲಾತಿ ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ. ಜೊತೆಗೆ ನಕಲಿ ಜಾತಿ ಪ್ರಮಾಣ ಪತ್ರದ ಮೂಲಕ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರದಿದ್ದರೂ ಮೀಸಲಾತಿ ಸೌಲಭ್ಯ ಪಡೆಯಲಾಗುತ್ತಿದೆ. ಹೀಗೆ ಮೀಸಲಾತಿಯನ್ನು ದುರ್ಬಲಗೊಳಿಸುತ್ತಿದ್ದು, ಅಂಬೇಡ್ಕರ್ ಆಶಯದಂತೆ ಮೀಸಲಾತಿ ವ್ಯವಸ್ಥೆ ಸಬಲೀಕರಣಗೊಳಿಸಬೇಕಿದೆ. ಅದೇ ಅಂಬೇಡ್ಕರ್ ಅವರಿಗೆ ನಾವು ನೀಡುವ ದೊಡ್ಡಗೌರವ ಎಂದು ಪ್ರತಿಪಾದಿಸಿದರು.

ಶೋಷಿತ ಸಮುದಾಯಕ್ಕೆ ಸ್ವಾಭಿಮಾನದ ಬದುಕು ಕಟ್ಟಿಕೊಡಬೇಕೆಂಬ ದಿಕ್ಕಿನಲ್ಲಿ ದಿಟ್ಟ ಹೆಜ್ಜೆ ಇಟ್ಟರು. ಯಾವುದೇ ಸಹಕಾರ ದೊರಕದ ಸವಾಲಿನ ದಿನಗಳಲ್ಲಿ ಎತ್ತರಕ್ಕೆ ಏರಿದ ಅಪರೂಪದ ವಿದ್ವಾಂಸರು ಅಂಬೇಡ್ಕರ್.



ಮೈಸೂರಿನ ಮುಕ್ತ ವಿವಿ ಕಾವೇರಿ ಸಭಾಂಗಣದಲ್ಲಿ ಡಾ.ಅಂಬೇಡ್ಕರ್ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಗಣ್ಯರು ಪುಷ್ಪ ನಮನ ಸಲ್ಲಿಸಿದರು.

ದೊಡ್ಡ ವಿದ್ವತ್ ಗಳಿಸಿದ ನಂತರವೂ ಅವರು ಜಾತಿ ಕಾರಣಕ್ಕೆ ಅವಮಾನ ಎದುರಿಸಬೇಕಾಯಿತು. ಇಂತಹ ಹಿನ್ನೆಲೆಯಿಂದ ಸಹಜವಾಗಿಯೇ ಆಕ್ರೋಶ ಮಡುಗಟ್ಟುತ್ತದೆ. ಆದರೆ ಅಂಬೇಡ್ಕರ್ ಅವರು ಈ ಅವಮಾನಗಳಿಗೆ ತಾರ್ಕಿಕವಾದ ಉತ್ತರ ಹುಡುಕಬೇಕು ಎಂದು ಮುನ್ನಡೆಯುತ್ತಾರೆ ಎಂದು ತಿಳಿಸಿದರು.

ಈ ಸಮಾಜದಲ್ಲಿ ಏನಾದರೂ ಬದಲಾವಣೆ ಆದೀತೇ? ಎಂದು 21 ವರ್ಷಗಳ ಕಾಲ ಕಾದು ನೋಡಿ ಸಕಾರಾತ್ಮಕ ಪ್ರತಿಕ್ರಿಯೆ ದೊರಕದ ಹಿನ್ನೆಲೆಯಲ್ಲಿ 'ಹಿಂದೂವಾಗಿ ಹುಟ್ಟಿದ್ದೇನೆ, ಹಿಂದೂವಾಗಿ ಸಾಯಲಾರೆ' ಎಂದು ನಿರ್ಣಯಿಸಿ, ಅಂತಿಮವಾಗಿ ಭಾರತದಲ್ಲೇ ಹುಟ್ಟಿದ ಬೌದ್ಧ ಧರ್ಮ ಸ್ವೀಕಾರ ಮಾಡಿದರು. ಬೌದ್ಧ ಧರ್ಮದಲ್ಲೂ ಹೀನಾಯಾನ ಮತ್ತು ಮಹಾಯಾನ ಪಂಥಗಳನ್ನು ಅವರು ಒಪ್ಪಲಿಲ್ಲ. ಅವರು ನವಯಾನ ಎಂಬ ಹೊಸ ದಾರಿಯಲ್ಲಿ ಮುನ್ನಡೆದರು ಎಂದು ತಿಳಿಸಿದರು.

1936ರಲ್ಲಿ ಬ್ರಿಟಿಷ್ ಸರ್ಕಾರದಲ್ಲಿ ಕೆಲವೇ ವರ್ಷಗಳ ಕಾಲ ಕಾರ್ಮಿಕ ಸಚಿವರಾಗಿ ಸೇವೆ ಸಲ್ಲಿಸಿ, ಹಲವು ಬದಲಾವಣೆ ತಂದರು. ಕಾರ್ಮಿಕರು, ಮಹಿಳಾ ಕಾರ್ಮಿಕರ ಶ್ರೇಯೋಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮ ಜಾರಿಗೊಳಿಸಿದರು ಎಂದರು.

ದೇಶದಲ್ಲಿ ಅನೇಕ ಮಹನೀಯರ ಸಮಗ್ರ ಸಂಪುಟಗಳು ಇಂದು ಲಭ್ಯವಿವೆ. ಗಾಂಧಿ, ನೆಹರು, ಸಾವರ್ಕರ್, ಶ್ಯಾಮಪ್ರಸಾದ್ ಮುಖರ್ಜಿ, ದೀನ ದಯಾಳ್ ಉಪಾಧ್ಯ, ಲೋಹಿಯಾ ಸೇರಿದಂತೆ ಮೊದಲಾದವರ ಬರಹ, ಭಾಷಣಗಳ ಸಮಗ್ರ ಸಂಪುಟಗಳು ಇವೆ. ಆದರೆ ಅಂಬೇಡ್ಕರ್ ಅವರ ಬರಹ, ಭಾಷಣಗಳು ಇವೆಲ್ಲಕ್ಕಿಂತಲೂ ದೊಡ್ಡ ಪ್ರಮಾಣದಲ್ಲಿ ಪ್ರಕಟಗೊಂಡಿವೆ. 21 ಸಂಪುಟಗಳಷ್ಟು ಬರಹ ಮತ್ತು ಭಾಷಣಗಳು ಇದ್ದರೂ ಸಂಶೋಧನೆಗಳ ಮೂಲಕ ಮತ್ತಷ್ಟು ಸೇರ್ಪಡೆಯಾಗುತ್ತಿವೆ. ದೊಡ್ಡ ಪ್ರಮಾಣದ ಉದಾತ್ತ ಚಿಂತನೆಗಳಿಂದ ದೇಶವನ್ನು ಅಂಬೇಡ್ಕರ್ ಶ್ರೀಮಂತಗೊಳಿಸಿದ್ದಾರೆ ಎಂದು ಸ್ಮರಿಸಿದರು.

'ಅನಿಹಿಲೇಶನ್ ಆಫ್ ಕಾಸ್ಟ್' ಮತ್ತು 'ಥಾಟ್ಸ್ ಆನ್ ಪಾಕಿಸ್ತಾನ್' ಅಂಬೇಡ್ಕರ್ ಅವರ ಎರಡು ಮಹತ್ವದ ಕೃತಿಗಳು. 'ಅನಿಹಿಲೇಶನ್ ಆಫ್ ಕಾಸ್ಟ್'ನಲ್ಲಿ ಹಿಂದೂ ಸಮಾಜದಲ್ಲಿರುವ ಜಾತಿ ವ್ಯವಸ್ಥೆ ಹಾಗೂ ಇದರೊಳಗೆ ಅಡಗಿರುವ ಜಾತೀಯತೆ, ಇದರಿಂದ ಉಂಟಾಗಿರುವ ಸಮಸ್ಯೆಗಳನ್ನು ಅನಾವರಣ ಮಾಡಿದ್ದಾರೆ. ಸೂಕ್ಷ್ಮ ಮತ್ತು ಆಳವಾದ ಪ್ರಶ್ನೆಗಳನ್ನು ಅಧ್ಯಯನದ ಹಿನ್ನೆಲೆಯಲ್ಲಿ ಸಮಾಜದ ಮುಂದಿಟ್ಟಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದ ಬಳಿಕ ಬಹುದೊಡ್ಡ ಜವಾಬ್ದಾರಿ ಹೊತ್ತು ಸಂವಿಧಾನ ಕೊಟ್ಟರು. ಭಾರತವನ್ನು ತುಂಬ ಸ್ಪಷ್ಟವಾಗಿ ಅರ್ಥ ಮಾಡಿಕೊಂಡಿದ್ದರು. ಹೀಗಾಗಿ ದೇಶಕ್ಕೆ ಬೇಕಾದ ಅದ್ಭುತ ಸಂವಿಧಾನ ಕೊಡಲು ಅವರಿಂದ ಸಾಧ್ಯವಾಯಿತು ಎಂದರು. ಇದಕ್ಕೂ ಮುನ್ನ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಶ್ರೀ ಅರ್ಜುನ್ ಅವಧೂತ ಗುರೂಜಿ ಉದ್ಘಾಟನೆ ನೆರವೇರಿಸಿದರು. ವಿವಿ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಅಧ್ಯಕ್ಷತೆ ವಹಿಸಿದ್ದರು. ವಿವಿ ಕುಲಸಚಿವ ಪ್ರೊ.ಆರ್.ರಾಜಣ್ಣ, ಅಂಬೇಡ್ಕರ್ ಕೇಂದ್ರದ ಸಂಯೋಜನಾಧಿಕಾರಿ ಡಾ. ಶಿವಕುಮಾರಸ್ವಾಮಿ ಮತ್ತಿತರರು ಹಾಜರಿದ್ದರು.

'ಥಾಟ್ಸ್ ಆನ್ ಪಾಕಿಸ್ತಾನ್' ಕೃತಿ ಚರ್ಚೆಗೆ ಬಾರದಂತೆ ನೋಡಿಕೊಂಡ ಪ್ರಗತಿಪರ, ವಿದ್ವತ್ ವಲಯ

ಮೈಸೂರು: ಡಾ.ಅಂಬೇಡ್ಕರ್ ಅವರ 'ಥಾಟ್ಸ್ ಆನ್ ಪಾಕಿಸ್ತಾನ್' ಕೃತಿಯನ್ನು ಪ್ರಗತಿಪರ ಮತ್ತು ವಿದ್ವತ್ ವಲಯ ಒಂದು ರೀತಿಯಲ್ಲಿ ಮುಖ್ಯ ಚರ್ಚೆಗೆ ಬಾರದಂತೆ ನೋಡಿಕೊಂಡಿವೆ ಎಂದು ಸಾಮಾಜಿಕ ಕಾರ್ಯಕರ್ತ ವಾದಿರಾಜ್ ವಿಷಾದಿಸಿದರು. ಮತೀಯ ಆಧಾರದಲ್ಲಿ ಇನ್ನೊಂದು ದೇಶ ಉದಯಿಸುವುದಾದರೆ, ಅದರ ಪರಿಣಾಮ ಏನೆಂಬುದನ್ನು ಅಂಬೇಡ್ಕರ್ ಈ ಕೃತಿಯಲ್ಲಿ ತಿಳಿಸಿದ್ದಾರೆ ಎಂದರು.

ಮುಡಾ, ಕೆ.ಆರ್.ಆಸ್ಪತ್ರೆಯಲ್ಲಿ ಡಾ.ಅಂಬೇಡ್ಕರ್ ಜಯಂತಿ ಆಚರಣೆ





ಮೈಸೂರು, ಏ.16(ಆರ್‌ಕೆ)– ಮೈಸೂರಿನ ಕೆ.ಆರ್.ಆಸ್ಪತ್ರೆ ಹಾಗೂ ಮುಡಾ ಕಚೇರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿ ಆಚರಿಸಲಾಯಿತು. ಕೆ.ಆರ್.ಆಸ್ಪತ್ರೆ ಓಪಿಡಿ ಬ್ಲಾಕ್ ಎದುರು ಡಾ. ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಅಂಡ್ ಡೈರೆಕ್ಟರ್ ಡಾ.ಹೆಚ್.ಎನ್.ದಿನೇಶ್ ಗೌರವ ವಂದನೆ ಸಲ್ಲಿಸಿದರು.

ಕೆ.ಆರ್. ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ಎನ್.ನಂಜುಂಡಸ್ವಾಮಿ, ಸ್ಥಾನಿಕ ವೈದ್ಯಾಧಿಕಾರಿ ಡಾ.ರಾಜೇಶ್, ಔಷಧ ಉಗ್ರಾಣ ವ್ಯವಸ್ಥಾಪಕ ಮಂಜುನಾಥ್, ಸೆಕ್ಯೂರಿಟಿ ಸೂಪರ್‌ವೈಸರ್ ಮಹದೇವು, ವೈದ್ಯರು, ನರ್ಸಿಂಗ್ ಸಿಬ್ಬಂದಿ ಹಾಗೂ ವೈದ್ಯಕೇತರ ಸಿಬ್ಬಂದಿ ಪಾಲ್ಗೊಂಡಿದ್ದರು.

ಮುಡಾ ಕಚೇರಿ: ಮುಡಾ ಕಚೇರಿ ಸಭಾಂಗಣದಲ್ಲಿ ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ರಾಜೀವ್ ಪುಷ್ಪಾರ್ಚನೆ ಮಾಡಿದರು. ನಂತರ ಮಾತನಾಡಿದ ಅವರು, ಅಂಬೇಡ್ಕರ್ ಅವರು ಭಾರತಕ್ಕೆ ನೀಡಿರುವ ಸಂವಿಧಾನವು ಇಡೀ ವಿಶ್ವದಲ್ಲೇ ಶ್ರೇಷ್ಠ ಎಂಬ ಖ್ಯಾತಿಗೆ ಪಾತ್ರವಾಗಿದೆ. ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಸರ್ವ ಜನರ ಹಿತಕ್ಕಾಗಿ ಸಂವಿಧಾನದಲ್ಲಿ ನೀಡಿರುವ ಅಧಿನಿಯಮಗಳನ್ನು ಪಾಲಿಸುವ ಮೂಲಕ ಸ್ವಾಸ್ಥ್ಯ ಸಮಾಜ ನಿರ್ಮಿಸಬೇಕಾಗಿದೆ ಎಂದರು.

ಮುಡಾ ಆಯುಕ್ತ ಡಾ. ಡಿ.ಬಿ. ನಟೇಶ್, ಕಾರ್ಯದರ್ಶಿ ವೆಂಕಟರಾಜು, ನಗರ ಯೋಜನಾ ಸದಸ್ಯ ಜಯಸಿಂಹ, ಸದಸ್ಯರಾದ ಮಾದೇಶ, ಲಕ್ಷ್ಮಿದೇವಿ, ನಿಂಗಣ್ಣ ಹಾಗೂ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಸರ್ಕಾರಿ ಆಯುರ್ವೇದ ಕಾಲೇಜು, ಪಿಕೆಟಿಬಿ ಆಸ್ಪತ್ರೆ ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿ, ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲೂ ಡಾ. ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಯಿತು.



ಮೈಸೂರಿನ ಕುಕ್ಕರಹಳ್ಳಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ಇಲ್ಲಿನ ಅಂಬೇಡ್ಕರ್ ಪ್ರತಿಮೆಗೆ ಶಾಸಕ ಎಲ್.ನಾಗೇಂದ್ರ ಗುರುವಾರ ಮಾಲಾರ್ಪಣೆ ಮಾಡಿದರು. ಪಾಲಿಕೆ ಸದಸ್ಯೆ ಸಿ.ವೇದಾವತಿ ಶಿವಶಂಕರ್, ಬಿಜೆಪಿ ಸಹಕಾರ ಪ್ರಕೋಷ್ಠದ ರಾಜ್ಯ ಸದಸ್ಯ ಶ್ರೀನಿವಾಸ್, ಚಾಮರಾಜ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ರಮೇಶ್, ಪಕ್ಷದ ಮುಖಂಡರಾದ ಶಿವಶಂಕರ್, ನವೀನ್ ಚೆಲುವರಾಜು, ಕುಕ್ಕರಹಳ್ಳಿಯ ಮುಖಂಡರಾದ ಅಂದಾನಿ, ಶಿವಣ್ಣ, ಸುರೇಶ್, ಗಜ, ಯೋಗಾನಂದ ಮತ್ತಿತರರು ಹಾಜರಿದ್ದರು.

ಹೆಬ್ಬಾಳ ಕೆರೆ ಈಗ ದುರ್ವಾಸನೆ ತಾಣ

ವಾಯು ವಿಹಾರಿಗಳು, ಸಾರ್ವಜನಿಕರ ಹಿಡಿಶಾಪ

ಮೈಸೂರು, ಏ.16(ಎಂಕೆ)– ಮೈಸೂರಿನ ಹೆಬ್ಬಾಳ ಕೆರೆಯಲ್ಲಿ ಲಕ್ಷಾಂತರ ಮೀನುಗಳು ಸಾವನ್ನಪ್ಪಿ, ಬಾರೀ ದುರ್ವಾಸನೆ ಬೀರುತ್ತಿದ್ದರೂ ಯಾವುದೇ ಕ್ರಮಕೈಗೊಳ್ಳದ ಸಂಬಂಧಪಟ್ಟ ಅಧಿಕಾರಿಗಳ ವರ್ತನೆಗೆ ಸ್ಥಳೀಯ ನಿವಾಸಿಗಳು, ವಾಯು ವಿಹಾರಿಗಳು ಹಾಗೂ ಕೆರೆ ಹಿತರಕ್ಷಣಾ ಸಮಿತಿ ಪದಾಧಿಕಾರಿಗಳು ಬಾರೀ ವಿರೋಧ ವ್ಯಕ್ತಪಡಿಸಿದ್ದಾರೆ. ಅತ್ಯಂತ ಸುಂದರವಾಗಿದ್ದ ಕೆರೆ ವಾತಾವರಣದಲ್ಲಿ ಹೆಚ್ಚಾಗುತ್ತಿರುವ ದುರ್ವಾಸನೆಗೆ ಬೆಚ್ಚಿಬಿದ್ದಿರುವ ಸಾರ್ವಜನಿಕರು ಇದ್ದಕ್ಕಿದ್ದಂತೆ ಕೆರೆಯಲ್ಲಿದ್ದ ಮೀನುಗಳಿಗೆ ಏನಾಯಿತು? ಇಷ್ಟೊಂದು ದುರ್ವಾಸನೆ ಬರುತ್ತಿದ್ದು, ನಮ್ಮ ಆರೋಗ್ಯದ ಕತೆ ಏನು? ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ವ್ಯಾಪ್ತಿಗೆ ಬರಲ್ಲ, ಗೊತ್ತಿಲ್ಲ: ಹೆಬ್ಬಾಳ ಕೆರೆಯಲ್ಲಿ ಮೀನುಗಳ ಮಾರಣಹೋಮದ ಕುರಿತು ಹೂಟಗಳ್ಳಿ ನಗರಸಭೆಯ ಅಧಿಕಾರಿ ನರಸಿಂಹಮೂರ್ತಿ ಅವರಿಗೆ ಕರೆ ಮಾಡಿ ತಿಳಿಸಿದರೆ, ಅದಕ್ಕೂ ನನಗೂ ಸಂಬಂಧವಿಲ್ಲ. ಹೆಬ್ಬಾಳ ಕೆರೆ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎನ್ನುತ್ತಿದ್ದಾರೆ. ಕೆಐಎಡಿಬಿ ಅಧಿಕಾರಿಗಳಿಗೆ ಕರೆ ಮಾಡಿದರೆ ಬೆಂಗಳೂರಿನಲ್ಲಿದ್ದೇವೆ ಎನ್ನುತ್ತಿದ್ದಾರೆ ಎಂದು ಕೆರೆ ಹಿತರಕ್ಷಣಾ ಸಮಿತಿ ಅಧ್ಯಕ್ಷ ರವಿಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಮೈಸೂರು ಮೃಗಾಲಯದಲ್ಲಿ ಬೇಸಿಗೆ ಶಿಬಿರ ಆರಂಭ

● ಮೊದಲ ಹಂತದಲ್ಲಿ 60 ಮಕ್ಕಳಿಗೆ ಪರಿಸರ ಶಿಕ್ಷಣ ಕುರಿತು ಅರಿವು ● ಪರಿಸರ ಮೇಲಿನ ದೌರ್ಜನ್ಯ ತಡೆಯಲು ಪೊಲೀಸ್ ಆಯುಕ್ತರ ಮನವಿ

ಮೈಸೂರು,ಏ.16(ಎಂಟಿವೈ)–ಕೋವಿಡ್ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಸ್ಥಗಿತಗೊಂಡಿದ್ದ ಮೈಸೂರು ಮೃಗಾಲಯದ ಬೇಸಿಗೆ ಶಿಬಿರ ಪುನರಾರಂಭವಾಗಿದ್ದು, ಹತ್ತು ದಿನಗಳ ಮೊದಲ ತಂಡದ ಶಿಬಿರ ನಡೆಯಲಿದೆ. 12ರಿಂದ 18 ವರ್ಷದ ವಿವಿಧ ಶಾಲೆಗಳ 60 ವಿದ್ಯಾರ್ಥಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ.

ಮೈಸೂರು ಮೃಗಾಲಯ ವತಿಯಿಂದ ಪರಿಸರ ಶಿಕ್ಷಣ ಕುರಿತು ಪ್ರತಿವರ್ಷ ನಡೆಯುವ ಬೇಸಿಗೆ ಶಿಬಿರಕ್ಕೆ ಭಾರೀ ಬೇಡಿಕೆ ಇತ್ತು. ಆದರೆ ಕೊರೊನಾ ಕಾರಣದಿಂದ ಕಳೆದ ಎರಡು ವರ್ಷದಿಂದ ಮೃಗಾಲಯದಲ್ಲಿ ಬೇಸಿಗೆ ಶಿಬಿರ ಸ್ಥಗಿತಗೊಳಿಸಲಾಗಿತ್ತು. ಕೋವಿಡ್ ಪೂರ್ಣ ಪ್ರಮಾಣದಲ್ಲಿ ನಿಯಂತ್ರಣದಲ್ಲಿರುವುದರಿಂದ ಈ ಸಾಲಿನಲ್ಲಿ ಎರಡು ತಂಡಗಳಲ್ಲಿ ಬೇಸಿಗೆ ಶಿಬಿರ ನಡೆಸಲು ನಿರ್ಧರಿಸಿ ಅರ್ಜಿ ಆಹ್ವಾನಿಸಲಾಗಿತ್ತು.

ಮೊದಲ ತಂಡದ ಶಿಬಿರ ಏ.15ರಿಂದ ಆರಂಭವಾಗಿ ಏ.24ರವರೆಗೆ ನಡೆಯಲಿದ್ದು, ಎರಡನೇ ತಂಡದ ಶಿಬಿರ ಮೇ.1ರಿಂದ 10ರವರೆಗೆ ಜರುಗಲಿದೆ. ಎರಡು ವರ್ಷದಿಂದ ಪಠ್ಯೇತರ ಚಟುವಟಿಕೆಯಿಂದ ದೂರವುಳಿದಿದ್ದ ವಿದ್ಯಾರ್ಥಿಗಳು ಇಂದಿನಿಂದ ಆರಂಭ ವಾದ ಶಿಬಿರದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದಾರೆ.

ಚಾಲನೆ: ಮೃಗಾಲಯದ ಸಭಾಂಗಣದಲ್ಲಿ ಶುಕ್ರವಾರ ಬೆಳಗ್ಗೆ ನಡೆದ ಕಾರ್ಯಕ್ರಮದಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಬೇಸಿಗೆ ಶಿಬಿರವನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಪರಿಸರದ ಮೇಲೆ ದೌರ್ಜನ್ಯ ಹೆಚ್ಚಾಗುತ್ತಿದೆ. ಇದರಿಂದ ಸಮತೋಲನ ತಪ್ಪುವ ಅಪಾಯ ಎದುರಾಗಿದೆ. ಪರಿಸರ ಸಮತೋಲನ ಕಾಪಾಡದಿದ್ದರೆ ಮುಂಬರುವ ದಿನಗಳಲ್ಲಿ ಪರಿಸ್ಥಿತಿ ತೀರಾ ಹದಗೆಡಬಹುದು. ಈ ಹಿನ್ನೆಲೆಯಲ್ಲಿ ಎಲ್ಲರೂ ಪರಸರ ಸಮತೋಲನ ಕಾಪಾಡುವುದಕ್ಕೆ ಬದ್ಧವಾಗಬೇಕು. ಜೀವ ವೈವಿಧ್ಯತೆಯನ್ನು ಸಂರಕ್ಷಿಸುವುದಕ್ಕೆ ಪಣ ತೊಡಬೇಕು ಎಂದು ಸಲಹೆ ನೀಡಿದರು.

ಮಿತಿ ಮೀರಿದ ಪ್ರಮಾಣದಲ್ಲಿ ಪರಿಸರ ನಾಶವಾಗುತ್ತಿರುವುದರಿಂದ ಪ್ರವಾಹ ಸೇರಿದಂತೆ ಇನ್ನಿತರ ನೈಸರ್ಗಿಕ ವಿಕೋಪ ಸಂಭವಿಸುತ್ತಿವೆ. ಬಹುತೇಕ ಪ್ರವಾಹಗಳು ಮಾನವ ನಿರ್ಮಿತವೇ ಆಗಿದೆ. ಈ ನಿಟ್ಟಿನಲ್ಲಿ ಮನುಷ್ಯರಿಂದಲೇ ಆಗುತ್ತಿರುವ ಅರಣ್ಯ ನಾಶ ತಡೆಗಟ್ಟಬೇಕು. ಅದಕ್ಕಾಗಿ ನಾವೇನು ಮಾಡಬೇಕೆಂದು ಆಲೋಚಿಸಬೇಕು. ಹಾಗೇ ವನ್ಯಜೀವಿಗಳಿಗೆ ಮನುಷ್ಯರಂತೆಯೇ ಭೂಮಿಯಲ್ಲಿ ಬದುಕಲು ಸಮಾನ ಹಕ್ಕಿದೆ ಎಂಬುದನ್ನು ಅರಿಯಬೇಕು. ಶಿಬಿರದಲ್ಲಿ ಕಲಿತದ್ದನ್ನು ತಮ್ಮ ಸ್ನೇಹಿತರಿಗೆ ತಿಳಿಸುವ ಮೂಲಕ ಪರಿಸರ ಸಂರಕ್ಷಣೆಗೆ ಕಾಣಿಕೆ ನೀಡಬೇಕು ಎಂದು ನುಡಿದರು.

ಅಭಯಾರಣ್ಯಕ್ಕೆ ತೋಳವೊಂದು ಪ್ರವೇಶಿಸಿದರೆ ನದಿಯ ದಿಕ್ಕು ಬದಲಾಗುತ್ತದೆ? ತೋಳ ಪ್ರವೇಶಕ್ಕೂ ನದಿ ಹರಿವು ಬದಲಾಯಿಸುವುದಕ್ಕೂ ಕಾರಣ ಏನು? ಎರಡಕ್ಕೂ ಇರುವ ಸಂಬಂಧ ಏನು? ಇದಕ್ಕೆ ಉತ್ತರ ವನ್ನು ವಿದ್ಯಾರ್ಥಿಗಳು ಕಂಡುಕೊಳ್ಳಬೇಕು ಎಂದು ಹೇಳಿದರು.

ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಎಂ.ಕುಲಕರ್ಣಿ ಮಾತನಾಡಿ, ಎರಡು ವರ್ಷದ ಬಳಿಕ ಮೃಗಾಲಯದಲ್ಲಿ ಬೇಸಿಗೆ ಶಿಬಿರ ಆಯೋಜಿಸಲಾಗಿದೆ. ಪರಿಸರ ಶಿಕ್ಷಣಕ್ಕೆ ಒತ್ತು ನೀಡುವ ಮೂಲಕ ಪ್ರತಿವರ್ಷ ಬೇಸಿಗೆ ಶಿಬಿರ ನಡೆಸಲಾಗುತ್ತಿತ್ತು. ವನ್ಯಜೀವಿಗಳ ಸಂರಕ್ಷಣೆ, ಪರಿಸರ ಸಂರಕ್ಷಣೆ ಕುರಿತಂತೆ ಮಕ್ಕಳಿಗೆ ಮಾಹಿತಿ ನೀಡಲಾಗುತ್ತದೆ. ಅಲ್ಲದೆ ಪ್ರಾಣಿಗಳ ಜೀವನ ಕ್ರಮ, ಆಹಾರ ಪದ್ಧತಿ ಸೇರಿದಂತೆ ವಿವಿಧ ವಿಷಯಗಳನ್ನು ಪರಿಣಿತರಿಂದ ವಿವರಿಸಲಾಗುತ್ತದೆ. ಬೇಸಿಗೆ ಶಿಬಿರಗಳಲ್ಲಿ ಪಾಲ್ಗೊಂಡಿರುವ ವಿದ್ಯಾರ್ಥಿಗಳು ಇಲ್ಲಿ ಕಲಿತದ್ದನ್ನು ನಿಮ್ಮ ನಿಮ್ಮ ಊರಿಗೆ ಹೋದಾಗಲು ಸ್ನೇಹಿತರಿಗೆ ಪರಿಸರ, ವನ್ಯಜೀವಿಗಳ ಸಂರಕ್ಷಣೆ ಬಗ್ಗೆ ವಿವರಿಸಬೇಕು. ಅಲ್ಲಿನ ಪರಿಸರ, ಜನ ಜೀವನ ತಿಳಿಯಲು ಪ್ರಯತ್ನಿಸಬೇಕು ಎಂದರು.

ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮಾತನಾಡಿ, ಪರಿಸರ, ವನ್ಯಜೀವಿಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಲು ಪ್ರತಿ ವರ್ಷ ಶಿಬಿರ ನಡೆಸಲಾಗುತ್ತಿದೆ. ಈ ಶಿಬಿರದಲ್ಲಿ ಪಾಲ್ಗೊಳ್ಳಲು ಬೇಡಿಕೆ ಹೆಚ್ಚಾಗಿದೆ. ಇದರಿಂದ ಮತ್ತಷ್ಟು ವಿದ್ಯಾರ್ಥಿಗಳಿಗೆ ಅವಕಾಶ ನೀಡುವ ನಿಟ್ಟಿನಲ್ಲಿ ಇನ್ನು 3–4 ಶಿಬಿರ ಸಂಘಟಿಸುವಂತೆ ಮನವಿ ಮಾಡಿಕೊಳ್ಳುತ್ತೇನೆ. ಶಿಬಿರಾರ್ಥಿಗಳು ತಮ್ಮ ಮನೆ ಸಮೀಪ ಜಾಗ ಇದ್ದರೆ ಗಿಡ ನೆಡಬೇಕು. ತಮ್ಮ ಹುಟ್ಟುಹಬ್ಬದ ದಿನಂದು ಪ್ರಾಣಿ ದತ್ತು ಪಡೆದುಕೊಳ್ಳುವುದಕ್ಕೆ ಮುಂದಾಗುವ ಮೂಲಕ ಮೃಗಾಲಯಗಳನ್ನು ಉಳಿವಿಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಮೃಗಾಲಯ ಪ್ರಾಧಿಕಾರದ ಸದಸ್ಯರಾದ ಗೋಕುಲ್ ಗೋವರ್ಧನ್, ಜ್ಯೋತಿ ರೇಚಣ್ಣ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು. ಶಿಬಿರಾರ್ಥಿಗಳಾದ ಪ್ರಕೃತಿ ಸ್ವಾಗತಿಸಿದರೆ, ಕಸ್ತೂರಿ–ವೈಷ್ಣವಿ ಪ್ರಾರ್ಥಿಸಿದರು. ಚಿರಾಗ್ ವಂದಿಸಿದರು. ಸ್ವಯಂ ಸೇವಕ ನಂದೀಶ್ ನಿರೂಪಣೆ ಮಾಡಿದರು.



ಮೃಗಾಲಯದ ಬೇಸಿಗೆ ಶಿಬಿರವನ್ನು ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ಚಿತ್ರದಲ್ಲಿ ಮೃಗಾಲಯ ಪ್ರಾಧಿಕಾರದ ಸದಸ್ಯೆ ಜ್ಯೋತಿ ರೇಚಣ್ಣ, ಪ್ರಾಧಿಕಾರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಎಂ.ಕುಲಕರ್ಣಿ, ಸದಸ್ಯ ಗೋಕುಲ್ ಗೋವರ್ಧನ್ ಅವರನ್ನು ಕಾಣಬಹುದು.

ವನ್ಯಜೀವಿಗಳ ಸಂರಕ್ಷಣೆಯಲ್ಲಿ ತೊಡಗಿಸಿಕೊಳ್ಳಲು



ಚಿಕ್ಕಂದಿನಿಂದಲೂ ಪರಿಸರ ಹಾಗೂ ವನ್ಯಜೀವಿಗಳ ಸಂರಕ್ಷಣೆ ಬಗ್ಗೆ ತಿಳಿದುಕೊಳ್ಳಲು ಆಸಕ್ತಿ ಇತ್ತು. ಮೃಗಾಲಯದಲ್ಲಿ ನಡೆಯುವ ಬೇಸಿಗೆ ಶಿಬಿರದಲ್ಲಿ ಪಾಲ್ಗೊಳ್ಳಲು ಬಯಸಿದ್ದೆ. ಈ ವರ್ಷ ಅವಕಾಶ ಸಿಕ್ಕಿದೆ. ಇಲ್ಲಿ ಪ್ರಾಣಿ–ಪಕ್ಷಿಗಳ ಬಗ್ಗೆ ಕಲಿಯಲು ಉತ್ಸುಕನಾಗಿದ್ದೇನೆ.

- **ಎಲ್. ಪ್ರಣವ್,** ಕುವೆಂಪುನಗರದ, 8ನೇ ತರಗತಿ ವಿದ್ಯಾರ್ಥಿ, ಕ್ರೈಸ್ಟ್ ಪಬ್ಲಿಕ್ ಸ್ಕೂಲ್.

ಕಾತರದಿಂದ ಬಂದಿದ್ದೇನೆ



ಪರಿಸರ ಹಾಗೂ ಪ್ರಾಣಿ–ಪಕ್ಷಿಗಳ ಬಗ್ಗೆ ಆಸಕ್ತಿ ಹೆಚ್ಚಾಗಿದೆ. ಮೃಗಾಲಯದಲ್ಲಿ ಬೇಸಿಗೆ ಶಿಬಿರ ನಡೆಯುವುದನ್ನು ತಿಳಿದು ಪೋಷಕರು ನನ್ನನ್ನು ಈ ಶಿಬಿರಕ್ಕೆ ಸೇರಿಸಿದ್ದಾರೆ. ನಾನು ಇಲ್ಲಿ ಕಲಿಯಲು ಕಾತರದಿಂದ ಕಾಯುತ್ತಿದ್ದೇನೆ.

- **ಶ್ರೀಹರಿ,** ಜೆ.ಪಿ.ನಗರದ ನಿವಾಸಿ, 6ನೇ ತರಗತಿ, ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ

ಏಪ್ರಿಲ್ 17, ಭಾರತರತ್ನ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಪುಣ್ಯಸ್ಮರಣೆ ತನ್ನಿಮಿತ್ತ ಈ ಲೇಖನ.

ಬನ್ನೂರು ಕೆ.ರಾಜು
9481533167

ಗುರು ಬ್ರಹ್ಮ ಸರ್ವಪಲ್ಲಿ ಡಾ. ರಾಧಾಕೃಷ್ಣನ್



ಶಿಕ್ಷಕನೆಂಬುವ ಹೇಗಿರಬೇಕೆಂಬುದಕ್ಕೆ ಬಹುದೊಡ್ಡ ಉದಾಹರಣೆಯಾಗಿ ಉದಾತ್ತ ಧ್ಯೇಯದೊಡನೆ ಶಿಕ್ಷಕ ವೃತ್ತಿಯನ್ನು ಬಹಳ ಬಹಳವಾಗಿ ಗೌರವಿಸುತ್ತಾ ಭಾರತೀಯ ಶಿಕ್ಷಣ ಕ್ಷೇತ್ರಕ್ಕೊಂದು ಸಾರ್ಥಕವೆನಿಸುವ ಅರ್ಥಪೂರ್ಣ ಚೌಕಟ್ಟನ್ನು ನೀಡುವ ಮೂಲಕ ಶಿಕ್ಷಣ ಕ್ಷೇತ್ರದ ಸರ್ವತೋಮುಖ ಪ್ರಗತಿಗಾಗಿ ತಮ್ಮ ಜೀವನವನ್ನು ಮೀಸಲಿಟ್ಟಿದ್ದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಓರ್ವ ಶ್ರೇಷ್ಠ ಶಿಕ್ಷಕ ಹಾಗೂ ಶ್ರೇಷ್ಠ ಶಿಕ್ಷಣ ತಜ್ಞ ಮಾತ್ರ ಆಗಿರಲಿಲ್ಲ. ಅಪಾರ ಅನುಭವವುಳ್ಳ, ಅಸಾಧಾರಣ ಅಧ್ಯಯನವುಳ್ಳ ತತ್ವಜ್ಞಾನಿಯೂ ಆಗಿದ್ದರು. ಈ ದಿಸೆಯಲ್ಲಿ ಇವರು ರಚಿಸಿದ್ದ 'ದಿ ಎಥಿಕ್ಸ್ ಆಫ್ ವೇದಾಂತ' ಪ್ರಬಂಧ ಪುಸ್ತಕ ಮತ್ತು 'ಜೆನ್ಯೂನ್ ಮ್ಯಾನಿಫೆಸ್ಟೇಷನ್ ಆಫ್ ಇಂಡಿಯನ್ ಸ್ಪಿರಿಟ್' ಹಾಗೂ 'ದಿ ರೀಜನ್ ಆಫ್ ರಿಲಿಜಿಯನ್ ಇನ್ ಕಾಂಟೆಂಪರರಿ ಫಿಲಾಸಫಿ' ಮುಂತಾದ ಕೃತಿಗಳು ಮಹತ್ವವೆನಿಸಿದ್ದು ವಿಶ್ವ ಮನ್ನಣೆ ಗಳಿಸಿವೆ.

ಜಗತ್ತಿನಲ್ಲಿ ಶಿಕ್ಷಣ ಕ್ಷೇತ್ರಕ್ಕಿರುವಷ್ಟು ಮಹತ್ವ ಬೇರಾವುದೇ ಕ್ಷೇತ್ರಗಳಿಗೂ ಇಲ್ಲ. ಏಕೆಂದರೆ ಎಲ್ಲಾ ಕ್ಷೇತ್ರಗಳಿಗೂ ಗುರು ಶಿಕ್ಷಣ ಕ್ಷೇತ್ರವೇ. ಶಿಕ್ಷಣ ಮೊದಲು ನಂತರ ಮಿಕ್ಕಿದ್ದೆಲ್ಲವೂ. ಹಾಗೆಯೇ ಶಿಕ್ಷಕ ವೃತ್ತಿಗಿರುವಷ್ಟು ಗೌರವ, ಘನತೆ, ನೆಲೆ, ಬೆಲೆ ಬೇರ್‍ಯಾವ ವೃತ್ತಿಗಳಿಗೂ ಇಲ್ಲ. ಎಲ್ಲಾ ವೃತ್ತಿಗಳ ಸೃಷ್ಟಿಗೂ, ಎಲ್ಲಾ ಕ್ಷೇತ್ರಗಳ ನಿರ್ಮಾಣಕ್ಕೂ ಶಿಕ್ಷಕರೇ ಕಾರಣರು. ಇಂಥಾ ಪವಿತ್ರವಾದ ಶ್ರೇಷ್ಠಾತಿಶ್ರೇಷ್ಠ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಣದ ಮೂಲಕ ನವ ಭಾರತವನ್ನು ಕಟ್ಟಿ ಸಹಸ್ರ ಸಹಸ್ರ ಶ್ರೇಷ್ಠ ಶಿಕ್ಷಕರು ಇತರರಿಗೆ ಮಾದರಿಯಾಗಿ ದೇಶದಲ್ಲಿ ಆಗಿ ಹೋಗಿದ್ದಾರೆ. ಅಂತಹವರ ಸಾಲಿನಲ್ಲಿ ಎದ್ದು ಕಾಣುವ ಹೆಸರು ಭಾರತ ರತ್ನ ಸರ್ವಪಲ್ಲಿ ರಾಧಾಕೃಷ್ಣನ್!

ಅದು ಸ್ವಾತಂತ್ರ್ಯಪೂರ್ವದ ಕಾಲ. ಆಗಲೇ ಪ್ರಸಿದ್ಧಿಯ ಶಿಖರ ಕಂಡಿದ್ದ ಜ್ಞಾನದೇಗುಲ ಮೈಸೂರಿನ ಮಹಾರಾಜ ಕಾಲೇಜು. ಆಗ ಅಲ್ಲಿ ಅಷ್ಟೇ ಪ್ರಸಿದ್ಧಿ ಗಳಿಸಿದ್ದ ಆದರ್ಶ ಶಿಕ್ಷಕರೊಬ್ಬರಿದ್ದರು. ತಮ್ಮ ಮಹಾನ್ ಪ್ರತಿಭೆ, ಪಾಂಡಿತ್ಯ, ವಿನಯ, ವಿದ್ವತ್ತು, ಸರಳತೆ, ಸಜ್ಜನಿಕೆ, ಪ್ರಾಮಾಣಿಕತೆ, ಸಹೃದಯತೆಗಳ ಮೆಟೀರಿಯಲ್ಸ್‌ಗಳಿಂದಲೇ ಅವರು ತಮ್ಮದೇ ಆದ ಬೃಹತ್ ಶಿಷ್ಯಕೋಟಿಯನ್ನು ಕಟ್ಟಿಬಿಟ್ಟಿದ್ದರು.

ಇಂಥ ಶಿಕ್ಷಕರಿಗೆ ಇದ್ದಕ್ಕಿದ್ದಂತೆಯೇ 1921ರಲ್ಲಿ ಕೊಲ್ಕತ್ತ ವಿಶ್ವವಿದ್ಯಾನಿಲಯದ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿ ಬರುವಂತೆ ನೇಮಕಾತಿ ಪತ್ರ ಕೈ ಸೇರಿತು. ಸುದ್ದಿ ತಿಳಿದ ಶಿಷ್ಯಕೋಟಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಇಂಥ ತಮ್ಮ ಮನಸೆಳೆದ ಗುರು ಕಲ್ಕತ್ತಾಗೆ (ಈಗಿನ ಕೋಲ್ಕತ್ತಾ) ಹೊರಟು ಬಿಡುತ್ತಾರಲ್ಲ ಎಂಬ ದುಃಖ ಅವರನ್ನು ಆವರಿಸಿತು. ಆದರೇನಂತೆ ಮೆಚ್ಚಿನ ಗುರು ಕಲ್ಕತ್ತಾಗೆ ಹೊರಡುವ ದಿನ ಬಂದೇಬಿಟ್ಟಿತು. ಆದರೆ, ಅವತ್ತು ತಮ್ಮ ದುಃಖವನ್ನೆಲ್ಲಾ ಅದುಮಿಟ್ಟುಕೊಂಡು ತಮ್ಮ ಅಚ್ಚುಮೆಚ್ಚಿನ ಗುರುವನ್ನು ಆ ಶಿಷ್ಯಕೋಟಿ ಬೀಳ್ಕೊಟ್ಟ ಪರಿ ಯಾವ ಚಕ್ರವರ್ತಿಗೂ ಸಿಗಲಾರದಂಥಾದ್ದು!

ಅವತ್ತು ಶಿಷ್ಯರೆಲ್ಲರೂ ಸೇರಿ ಅಲಂಕರಿಸಿ ತಂದಿದ್ದ ಟಾಂಗಾ ಗಾಡಿಯಲ್ಲಿ ಅಕ್ಷರಶಃ 'ಗುರುದೇವೋ ಮಹೇಶ್ವರ' ಎಂಬಂತೆ ತಮ್ಮ ಗುರುದೇವನನ್ನು ಕೂರಿಸಿದ್ದರು. ಆದರೆ ಟಾಂಗಾ ಗಾಡಿ ಎಳೆಯಲು ಕುದುರೆಗೆ ಅವಕಾಶ ಕೊಡದೆ ಶಿಷ್ಯರೇ ಹೆಗಲು ಕೊಟ್ಟು ಲಕ್ಷ್ಮೀಪುರಂನಲ್ಲಿದ್ದ ತಮ್ಮ ಗುರುವಿನ ಮನೆಯಿಂದ ರೈಲ್ವೆ ನಿಲ್ದಾಣದವರೆವಿಗೂ ಟಾಂಗಾ ಗಾಡಿಯನ್ನು ಎಳೆದು ನಡೆದಿದ್ದರು. ಗುರುವಿಗೆ ಜೈಕಾರ ಹಾಕುತ್ತಾ ಸಾಗರದಂತೆ ವಿವಿಧ ಕಡೆಗಳಿಂದ ಹರಿದುಬಂದ ಶಿಷ್ಯಕೋಟಿ ಅಂದು ಇಡೀ ರಸ್ತೆ ತುಂಬಿ ತುಳುಕಿತ್ತು. ಅಷ್ಟೇ ಅಲ್ಲ, ಆ ಒಂದು ಕ್ಷಣ ಗುರು-ಶಿಷ್ಯರ ಇಂಥ ಬಾಂಧವ್ಯ ಕಂಡು ಇಡೀ ಮೈಸೂರು ಸಂಭ್ರಮಗೊಂಡು 'ವಾಹ್ದ್ ಎಂಥಾ ಗುರು? ಎಂಥಾ ಶಿಷ್ಯರು!' ಎಂದು ಉದ್ಘೋಷಿಸಿತ್ತು. ಇತ್ತ ಶಿಷ್ಯರಿಂದ ಗುರು ಮೆರವಣಿಗೆ ಸಾಗಿ ಬರುತ್ತಿದ್ದರೆ ಅತ್ತ ಒಂದು ಗುಂಪು ಮೊದಲೇ ಹೋಗಿ ತಮ್ಮ ಗುರು ಕುಳಿದುಕೊಳ್ಳುವ ರೈಲ್ವೆ ಕಂಪಾರ್ಟ್‌ಮೆಂಟನ್ನು ಚೆಂದವಾಗಿ ಸಿಂಗರಿಸಿತ್ತು. ಅಲ್ಲಿ ಕುಳಿತ ಆ ಗುರುದೇವನನ್ನು ಹೊತ್ತ ರೈಲು ಮೈಸೂರು ನಿಲ್ದಾಣವನ್ನು ಬಿಡುವಾಗ ರೈಲಿನ ವೇಗದಂತೆಯೇ ಗುರು-ಶಿಷ್ಯರ ಅಗಲಿಕೆಯ ದುಃಖವೂ ಹೆಚ್ಚಾಗಿತ್ತು. ವಿಶೇಷವಾಗಿ ಇಂಥ ಶಿಷ್ಯೋತ್ತಮರನ್ನು ಪಡೆದ ನಾನೇ ಧನ್ಯನೆಂಬ ಸಾರ್ಥಕ ಭಾವ ಅವತ್ತು ಆ ಗುರುವನ್ನು ಆವರಿಸಿ ಕಣ್ತುಂಬಿ ತುಳುಕಿತ್ತು. ತಮ್ಮ ಶಿಷ್ಯಕೋಟಿಯಿಂದ ಇಂಥ ಬೀಳ್ಕೊಡುಗೆಯ ಮಹಾಗೌರವ ಪಡೆದ ಅಂಥ ಆದರ್ಶ ಶಿಕ್ಷಕರು ಬೇರ್‍ಯಾರೂ ಅಲ್ಲ. ಅವರೇ ಡಾ.ಸರ್ವಪಲ್ಲಿ ರಾಧಾಕೃಷ್ಣನ್. ದೇಶದ ಉಪರಾಷ್ಟ್ರಪತಿ, ರಾಷ್ಟ್ರಪತಿ ಹುದ್ದೆಗೇರಿದರೂ ಅವರು ಮೈಸೂರಿನಲ್ಲಿ ತಮ್ಮ ಶಿಷ್ಯರು ಬೀಳ್ಕೊಟ್ಟ ಬೀಳ್ಕೊಡುಗೆಯ ಸಂದರ್ಭವನ್ನು ಆಗಾಗ್ಗೆ ನೆನೆದು 'ಆ ದಿನ ಶಿಷ್ಯರು ನನ್ನಲ್ಲಿ ತೋರಿದ ಪ್ರೀತಿಯನ್ನು ನೆನೆದರೆ ಈಗಲೂ ಕಣ್ಣೀರು ಉಕ್ಕುತ್ತದೆ' ಎಂದು ಭಾವುಕರಾಗುತ್ತಿದ್ದರಂತೆ.

ಆದರ್ಶ ಸಮಾಜದ ಕನಸುಗಳನ್ನು ಹೊತ್ತಿದ್ದ ಶಿಷ್ಯ ಪ್ರೀತಿಯ ರಾಧಾಕೃಷ್ಣನ್‌ರಂಥ ಶಿಕ್ಷಕರನ್ನು ನಾವಿಂದು ಕಾಣಲಾದೀತೆ? ಇಲ್ಲವೆಂದಲ್ಲ, ಕಾರ್ಗತ್ತಲಲ್ಲಿ ಕಾಣುವ ಬೆಳಕಿನ ಹನಿಗಳಂತೆ ಅಲ್ಲೊಬ್ಬರು, ಇಲ್ಲೊಬ್ಬರು ಸಿಗುತ್ತಾರಷ್ಟೆ. ಆದರೆ ಇಂಥ ಆದರ್ಶ ಶಿಕ್ಷಕರನ್ನು ಹೆಚ್ಚಿಸುವ ದಿಶೆಯಲ್ಲಿ ಶಿಕ್ಷಕರಷ್ಟೇ ಅಲ್ಲ ವಿದ್ಯಾರ್ಥಿಗಳೂ ಸೇರಿದಂತೆ ಪ್ರತಿಯೊಬ್ಬ ಪ್ರಜೆಯೂ ಪ್ರಾಮಾಣಿಕವಾಗಿ ಇಂದು ಚಿಂತಿಸಬೇಕಾಗಿದೆ. ಏಕೆಂದರೆ ಒಂದು ನಾಡಿನ ಸುಸಂಸ್ಕೃತಿಯನ್ನು ಸಂವೃದ್ಧಿಗೊಳಿಸುವಲ್ಲಿ ಅಲ್ಲಿನ ಗುರು-ಶಿಷ್ಯ ಪರಂಪರೆಯ ಪಾತ್ರ ದೊಡ್ಡದು. ಅದರಲ್ಲೂ ಗುರುವಿನ ಪಾತ್ರ ಬಹು ಮಹತ್ವದ್ದು.

ಇಂಥಾ ಶಿಕ್ಷಣ ಲೋಕದ ಧ್ರುವತಾರೆ ಗುರುವರ್ಯ ಡಾ. ಸರ್ವಪಲ್ಲಿ ರಾಧಾಕೃಷ್ಣನ್ 1888ರ ಸೆಪ್ಟೆಂಬರ್ 5 ರಂದು ತಮಿಳು ನಾಡಿನ ಚಿತ್ತೂರು ಜಿಲ್ಲೆಯ ತಿರುತ್ತಣಿ ಎಂಬ ಗ್ರಾಮದಲ್ಲಿ ಸಂಪ್ರದಾಯನಿಷ್ಠ ಸುಸಂಸ್ಕೃತ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ತಂದೆ ಸರ್ವಪಲ್ಲಿ ವೀರಸ್ವಾಮಿ, ತಾಯಿ ಮಹಾಸಾಧ್ವಿ ಸೀತಮ್ಮ. ಈ ದಂಪತಿಯ ಆರು ಮಂದಿ ಮಕ್ಕಳಲ್ಲಿ ರಾಧಾಕೃಷ್ಣನ್ ಎರಡನೆಯವರು. ಇವರ ಪೂರ್ವಿಕರು ಮೂಲತಃ ಸರ್ವಪಲ್ಲಿಯವರಾಗಿದ್ದರು. ಹಾಗಾಗಿ ರಾಧಾಕೃಷ್ಣನ್ ಹೆಸರಿನ ಜೊತೆಯಲ್ಲಿ 'ಸರ್ವಪಲ್ಲಿ' ಎಂಬುದು ಸೇರಿಕೊಂಡಿತು. ಪ್ರಾಥಮಿಕ ಮತ್ತು ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಹುಟ್ಟಿದೂರಿನಲ್ಲೇ ಪೂರೈಸಿದ ಇವರು, ಕಾಲೇಜು ಶಿಕ್ಷಣಕ್ಕೆ ವೆಲ್ಲೂರಿಗೆ ಹೆಜ್ಜೆಯಿರಿಸಿದರು. ನಂತರ ತತ್ವಶಾಸ್ತ್ರ ವಿಷಯವನ್ನು ಆಯ್ಕೆ ಮಾಡಿಕೊಂಡು ಅಷ್ಟೇ ಆಸಕ್ತಿಯಿಂದ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಕಲಿತರು. ಅಷ್ಟೇ ಅಲ್ಲ ತತ್ವಶಾಸ್ತ್ರದ ಬಗ್ಗೆ ಅಪಾರವಾದ ಪ್ರೀತಿ ಬೆಳೆಸಿಕೊಂಡರು. ಇನ್ನೂ ವಿದ್ಯಾರ್ಥಿಯಾಗಿ ಹದಿನೈದು ವರ್ಷದವರಾಗಿದ್ದಾಗಲೇ ಶಿವಕಾಮಿ ಅಮ್ಮಾಳ್ ಎಂಬುವವರೊಂದಿಗೆ ವಿವಾಹವಾದರು. ವಿದ್ಯಾಭ್ಯಾಸ ಮುಗಿದನಂತರ ಪ್ರತಿಷ್ಠಿತ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಏಳು ವರ್ಷಗಳ ಕಾಲ ಅಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿ ಅಲ್ಲಿ ವಿದ್ಯಾರ್ಥಿಗಳ ಮೆಚ್ಚಿನ ಗುರುವಾಗಿದ್ದರು. ಇಲ್ಲಿಂದ ಮುಂದುವರಿದು 1917ರಿಂದ ಒಂದು ವರ್ಷಕಾಲ ರಾಜಮಂಡ್ರಿಯಲ್ಲಿ ಅಧ್ಯಾಪಕರಾಗಿದ್ದ ರಾಧಾಕೃಷ್ಣನ್ ಅವರ ತತ್ವಜ್ಞಾನದ ಮಹಾಪಾಂಡಿತ್ಯವನ್ನು ಗುರುತಿಸಿ ಮೈಸೂರು ವಿವಿ ಅವರನ್ನು ಬಹು ಗೌರವಯುತವಾಗಿ ಆಹ್ವಾನಿಸಿ ತತ್ವಶಾಸ್ತ್ರ ಪೀಠದ ಅಧ್ಯಕ್ಷರನ್ನಾಗಿ ನೇಮಿಸಿತು.


1918ರಿಂದ 1921ರವರೆಗೆ ಮೈಸೂರು ಮಹಾರಾಜ ಕಾಲೇಜಿನ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ರಾಧಾಕೃಷ್ಣನ್ ಅವರು ಅಕ್ಷರಶಃ ವಿದ್ಯಾರ್ಥಿಗಳ ಪಾಲಿಗೆ ಗುರುಬ್ರಹ್ಮರಾಗಿದ್ದರು. ವಿದ್ಯಾರ್ಥಿಗಳ ಬಗ್ಗೆ ಅವರಿಗಿದ್ದ ಅವಿನಾಭಾವ ಸಂಬಂಧ, ಪ್ರೀತಿ, ವಾತ್ಸಲ್ಯ, ಕಾಳಜಿ, ಕಳಕಳಿಯಿಂದಾಗಿ ಪ್ರತಿಯೊಬ್ಬ ವಿದ್ಯಾರ್ಥಿಯ ಹೃದಯ ಮಂದಿರದಲ್ಲಿ ನೆಲೆಸಿಬಿಟ್ಟಿದ್ದರು. ಇದರ ಪ್ರತಿಫಲವೆಂಬಂತೆ ರಾಧಾಕೃಷ್ಣನ್ ಅವರು 1921ರಲ್ಲಿ ಮೈಸೂರು ವಿಶ್ವವಿದ್ಯಾಲಯವನ್ನು ಬಿಟ್ಟು ಕಲ್ಕತ್ತ ವಿಶ್ವವಿದ್ಯಾಲಯಕ್ಕೆ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ತೆರಳಿದಾಗ ಇಡೀ ಮಹಾರಾಜ ಕಾಲೇಜು ಕಂಬನಿಯ ಸಾಗರವಾಗಿತ್ತು. ಇವತ್ತಿಗೂ ಈ ಘಟನೆ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಚಿರಸ್ಥಾಯಿಯಾಗಿದೆ. ಅಷ್ಟು ಮಾತ್ರವಲ್ಲ ರಾಜರೂರು ಮೈಸೂರಿನ ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ.

ಶಿಕ್ಷಕನೆಂಬುವ ಹೇಗಿರಬೇಕೆಂಬುದಕ್ಕೆ ಬಹುದೊಡ್ಡ ಉದಾಹರಣೆಯಾಗಿ ಉದಾತ್ತ ಧ್ಯೇಯದೊಡನೆ ಶಿಕ್ಷಕ ವೃತ್ತಿಯನ್ನು ಬಹಳ ಬಹಳವಾಗಿ ಗೌರವಿಸುತ್ತಾ ಭಾರತೀಯ ಶಿಕ್ಷಣ ಕ್ಷೇತ್ರಕ್ಕೊಂದು ಸಾರ್ಥಕವೆನಿಸುವ ಅರ್ಥಪೂರ್ಣ ಚೌಕಟ್ಟನ್ನು ನೀಡುವ ಮೂಲಕ ಶಿಕ್ಷಣ ಕ್ಷೇತ್ರದ ಸರ್ವತೋಮುಖ ಪ್ರಗತಿಗಾಗಿ ತಮ್ಮ ಜೀವನವನ್ನು ಮೀಸಲಿಟ್ಟಿದ್ದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಓರ್ವ ಶ್ರೇಷ್ಠ ಶಿಕ್ಷಕ ಹಾಗೂ ಶ್ರೇಷ್ಠ ಶಿಕ್ಷಣ ತಜ್ಞ ಮಾತ್ರ ಆಗಿರಲಿಲ್ಲ. ಅಪಾರ ಅನುಭವವುಳ್ಳ ಅಸಾಧಾರಣ ಅಧ್ಯಯನವುಳ್ಳ ತತ್ವಜ್ಞಾನಿಯೂ ಆಗಿದ್ದರು. ಈ ದಿಸೆಯಲ್ಲಿ ಇವರು ರಚಿಸಿದ್ದ 'ದಿ ಎಥಿಕ್ಸ್ ಆಫ್ ವೇದಾಂತ' ಪ್ರಬಂಧ ಪುಸ್ತಕ ಮತ್ತು 'ಜೆನ್ಯೂನ್ ಮ್ಯಾನಿಫೆಸ್ಟೇಷನ್ ಆಫ್ ಇಂಡಿಯನ್ ಸ್ಪಿರಿಟ್' ಹಾಗೂ 'ದಿ ರೀಜನ್ ಆಫ್ ರಿಲಿಜಿಯನ್ ಇನ್ ಕಾಂಟೆಂಪರರಿ ಫಿಲಾಸಫಿ' ಮುಂತಾದ ಕೃತಿಗಳು ಮಹತ್ವವೆನಿಸಿದ್ದು ವಿಶ್ವ ಮನ್ನಣೆ ಗಳಿಸಿವೆ ಯಾವುದೇ ವ್ಯಕ್ತಿಯಾಗಲಿ ಬಡವನಾಗಿ ಹುಟ್ಟಿರಲಿ, ಸಿರಿವಂತನಾಗಿ ಹುಟ್ಟಿರಲಿ ಸಾಧನೆಗೆ ಇದಾವುದೂ ಅಡ್ಡಿಯಾಗದು. ಗುರಿ ಸಾಧಿಸುವ ಛಲದ ಜೊತೆ ಇಚ್ಛಾಶಕ್ತಿ, ಕ್ರಿಯಾಶಕ್ತಿ ಹಾಗೂ ಜ್ಞಾನಶಕ್ತಿ ಇದ್ದರೆ ಎಂಥಾ ಅದ್ಭುತವನ್ನಾದರೂ ಸಾಧಿಸಬಹುದು ಎಂಬುದಕ್ಕೆ ರಾಧಾಕೃಷ್ಣನ್ ಅವರ ಜೀವನವೊಂದು ಮಹಾಪಠ್ಯವಾಗಿ ನಮ್ಮ ಮುಂದಿದೆ. ಪ್ರತಿಯೊಬ್ಬರೂ ಅದನ್ನು ಅರಿತು ನಡೆಯಬೇಕಷ್ಟೆ.

1951ರಲ್ಲಿ ದೇಶದ ಮೊದಲ ಉಪರಾಷ್ಟ್ರಪತಿಯೂ ಆಗಿ 1962ರಲ್ಲಿ ರಾಷ್ಟ್ರಪತಿಯಾಗಿ ರಾಧಾಕೃಷ್ಣನ್ ಅವರು ಆಯ್ಕೆಯಾದ ಹಿನ್ನೆಲೆಯಲ್ಲಿ ಅವರ ಹುಟ್ಟುಹಬ್ಬವನ್ನು ವಿಶೇಷವಾಗಿ ಆಚರಿಸಲು ಅವರ ಶಿಷ್ಯಕೋಟಿ ಬಯಸಿತು. ಆದರೆ ಆಗ ರಾಧಾಕೃಷ್ಣರು ಶಿಕ್ಷಕ ಮತ್ತು ಶಿಕ್ಷಣ ಕ್ಷೇತ್ರದ ಮೇಲೆ ತಮಗಿದ್ದ ಅಭಿಮಾನದಿಂದ ತಮ್ಮ ಹುಟ್ಟುಹಬ್ಬವನ್ನು ಶಿಕ್ಷಕರ ದಿನವನ್ನಾಗಿ ಆಚರಿಸುವಂತೆ ಸಲಹೆ ನೀಡಿದರು. ಅದರಂತೆ ಅಂದಿನಿಂದ ಪ್ರತಿವರ್ಷ ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನಾಚರಣೆ ಆಚರಿಸಲಾಗುತ್ತಿದೆ. ರಾಧಾಕೃಷ್ಣನ್ ರಾಷ್ಟ್ರಪತಿಗಳಾದರೂ ಶಿಕ್ಷಕರಾಗಿಯೇ ರಾರಾಜಿಸಿದವರು.

ತತ್ವಶಾಸ್ತ್ರದ ಮೇರು ಜ್ಞಾನಿಯಾಗಿದ್ದ ರಾಧಾಕೃಷ್ಣನ್‌ರ ಪಾಂಡಿತ್ಯದ ಪ್ರಭೆಯನ್ನು ಕಂಡ ಪಾಶ್ಚಾತ್ಯರು ಇವರನ್ನು ಗ್ರೀಕ್ ತತ್ವಜ್ಞಾನಿ ಪ್ಲೇಟೋಗೆ ಹೋಲಿಸುವುದುಂಟು. ಜಗತ್ತಿನ ಯಾವುದೇ ಧರ್ಮಗಳನ್ನು, ತತ್ವಗಳನ್ನು, ಭಾರತದ ಧರ್ಮಗಳು, ತತ್ವಗಳು ಮೀರಿ ನಿಲ್ಲುತ್ತವೆ ಎಂದು ಜಗಜ್ಜಾಹೀರುಗೊಳಿಸಿ ಭಾರತದ ತತ್ವಜ್ಞಾನಕ್ಕೆ, ಪಾಂಡಿತ್ಯಕ್ಕೆ, ಬೋಧನೆಗೆ, ಭಾಷಾಕೌಶಲ್ಯಕ್ಕೆ, ಬರವಣಿಗೆಗೆ ಮಾರು ಹೋಗಿ 1931ರಲ್ಲಿ ಅಂದಿನ ವೈಸ್‌ರಾಯ್ ಲಾರ್ಡ್ ಇರ್ವಿನ್ ಅವರ ಶಿಫಾರಸ್ಸಿನ ಮೇರೆಗೆ ಬ್ರಿಟಿಷ್ ಸರ್ಕಾರ ಇವರಿಗೆ 'ಸರ್' ಪದವಿ ನೀಡಿ ಗೌರವಿಸಿದೆ. 1950ರ ಜನವರಿ 14ರಂದು ರಷ್ಯಾದ ಸರ್ವಾಧಿಕಾರಿ ಎನಿಸಿದ್ದ ಸ್ಟಾಲಿನನನ್ನು ರಾಧಾಕೃಷ್ಣನ್ ಭೇಟಿ ಮಾಡಿದಾಗ ರಾಧಾಕೃಷ್ಣನ್‌ರ ವ್ಯಕ್ತಿತ್ವದಿಂದ ಆಕರ್ಷಿತನಾದ ಸ್ಟಾಲಿನ್‌ನಂತಹ ಉಕ್ಕಿನ ಮನುಷ್ಯ "ನನ್ನನ್ನು ಮನುಷ್ಯನಂತೆ ಕಂಡವರು ನೀವೊಬ್ಬರೇ" ಎಂದು ಭಾವೋದ್ವೇಗದಿಂದ ಉದ್ಗರಿಸಿ ರಾಧಾಕೃಷ್ಣನ್‌ರನ್ನು ಗುಣಗಾನ ಮಾಡುತ್ತಾನೆ. ಅಂಥಾ ಮಾನವೀಯ ಗುಣದ ಅದ್ಭುತ ವ್ಯಕ್ತಿತ್ವ ರಾಧಾಕೃಷ್ಣನ್‌ರದ್ದು!

ತತ್ವಜ್ಞಾನದ ಹಿನ್ನೆಲೆಯಲ್ಲಿ ತಮ್ಮ ವ್ಯಕ್ತಿತ್ವವನ್ನು ಊರ್ಧ್ವಮುಖಿಯಾಗಿ ಬೆಳೆಸಿಕೊಳ್ಳುತ್ತಾ ಹೋದ ರಾಧಾಕೃಷ್ಣನ್ 1951ರಲ್ಲಿ ಭಾರತದ ಉಪ ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಿದರು. 1962ರವರೆಗೆ ಸ್ವತಂತ್ರ ಭಾರತದ ಉಪರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದ ಇವರು 1962ರಿಂದ 1967ರ ತನಕ ಭಾರತದ ಎರಡನೆ ರಾಷ್ಟ್ರಪತಿಯಾಗಿ ಓರ್ವ ಶಿಕ್ಷಕರಾಗಿ ಚರಿತ್ರೆ ಬರೆದರು. ತಮ್ಮ ದಕ್ಷ ಆಡಳಿತದಿಂದ ದೇಶದ ಹೆಮ್ಮೆಯಾದರು. ಡಾ. ರಾಧಾಕೃಷ್ಣನ್ ಅವರು ದೇಶಕ್ಕೆ ಸಲ್ಲಿಸಿದ ಸೇವೆಗಾಗಿ ಭಾರತದ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ "ಭಾರತ ರತ್ನ"ಕ್ಕೆ 1954ರಲ್ಲಿ ಭಾಜನರಾದರು. 87 ವಸಂತಗಳ ಸಾರ್ಥಕ ಬದುಕನ್ನು ಕಂಡ ಭಾರತರತ್ನ ಡಾ. ಎಸ್. ರಾಧಾಕೃಷ್ಣನ್ ಅವರು 1975ರ ಏಪ್ರಿಲ್ 17ರಂದು ಇಹಲೋಕಕ್ಕೆ ವಿದಾಯ ಹೇಳಿದರು.



ವಾರ ಭವಿಷ್ಯ


17.04.2022ರಿಂದ 23.04.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ

ರವಿ-ಮೇಷ, ಚಂದ್ರ-ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಜ-ಕುಂಭ, ಬುಧ-ಮೇಷ, ಗುರು-ಧನುಸ್ಸು, ಶುಕ್ರ-ಕುಂಭ, ಶನಿ-ಮಕರ, ರಾಹು-ಮೇಷ ಮತ್ತು ಕೇತು- ಧನುಸ್ಸು.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು". ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ, ವಿಳಾಸ : 533, 6ನೇ ಕ್ರಾಸ್, ಬೋಗಾದಿ ಉತ್ತರ 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ. ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಗುರುಗ್ರಹ ವ್ಯಯ ಭಾವಕ್ಕೆ ಪಲ್ಲಟವಾಗಿದೆ. 'ಧರ್ಮೋ ರಕ್ಷತಿ ರಕ್ಷಿತಃ' ಎಂಬಂತೆ ಧರ್ಮ ಮಾರ್ಗ ಬಿಡಬೇಡಿ. ಮಿತ್ರರ ಸಂಶಯ ದೃಷ್ಟಿಯಿಂದ ನೋಡುವರು. ಇಷ್ಟ ಬಂಧುಗಳ ಆಗ್ರಹಕ್ಕೆ ಗುರಿಯಾಗುವ ಸಾಧ್ಯತೆ. ವಾರ ಮಧ್ಯೆ ಆರ್ಥಿಕ ಪರಿಸ್ಥಿತಿ ಸುಧಾರಿಸುವುದು. ನೂತನ ಉಪಭೋಗ ವಸ್ತುಗಳನ್ನು ಖರೀದಿಸುವಿರಿ. ಶ್ರೀಮತಿಯ ಅನುರಾಗ ದೊರೆಯುವುದು. ನೌಕರಿ ಸ್ಥಳದಲ್ಲಿ ಸಹದ್ಯೋಗಿಗಳ ಕಿರುಕುಳ ಇರುತ್ತದೆ. -ಶ್ರೀನಾಗಪೂಜೆ, ಶುಭಸಂಖ್ಯೆ-5.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದ ಆದಿಗೆ ವಿವಿಧ ರೀತಿಯಲ್ಲಿ ಧನಾಗಮನ. ಪುಸ್ತಕ ವ್ಯಾಪಾರಿಗಳಿಗೆ ಹಾಗೂ ಪ್ರಕಾಶಕರಿಗೆ ಉತ್ತಮ ವರಮಾನವಾಗುವುದು. ವಿದ್ಯಾರ್ಥಿಗಳಿಗೆ ಜಡತ್ವ ನಿವಾರಣೆಯಾಗಿ ಅಭ್ಯಾಸಕ್ಕೆ ಉಂಟಾಗಿದ್ದ ವಿಘ್ನಗಳು ನಿವಾರಣೆಯಾಗುವುದು. ಮನೆಗೆ ನೆಂಟರಿಷ್ಟರು ಬರುವುದರಿಂದ ಮನಸ್ಸು ಪ್ರಫುಲ್ಲವಾಗಿರುತ್ತದೆ. ಆಸ್ತಿ ಸಂಬಂಧಿ ವಿಷಯಗಳು ನಿಮಗೆ ಅನುಕೂಲ ಕರವಾಗಿರುತ್ತದೆ. ವಾಹನ ಚಾಲನೆ ಮಾಡುವಾಗ ಸಂಚಾರಿ ನಿಯಮಗಳನ್ನು ಪಾಲಿಸಿದಲ್ಲಿ ನಿಮಗೂ, ನಿಮ್ಮ ಮನೆಯವರಿಗೂ ಕ್ಷೇಮ. - ಶ್ರೀಲಕ್ಷ್ಮೀ ಅಷ್ಟಕ ಪಠಿಸಿ, ಶುಭಸಂಖ್ಯೆ-3.



ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)

ಮನೆಯವರೊಂದಿಗೆ ಹರ್ಷದಾಯಕವಾಗಿ ಸಮಯ ಕಳೆಯುತ್ತಿದ್ದರೂ ವ್ಯಾಪಾರ, ವ್ಯವಹಾರಗಳಲ್ಲಿ ಸುಖವಿಲ್ಲ. ಪ್ರಯತ್ನಕ್ಕೆ ತಕ್ಕ ಫಲ ನೀಡಲು ಗ್ರಹಗಳ ಬೆಂಬಲವಿಲ್ಲ. ವಾರದ ಉತ್ತರಾರ್ಧಕ್ಕೆ ವೃತ್ತಿ ಸ್ಥಳದಲ್ಲಿ ಸೌಹಾರ್ದಯುತ ವಾತಾವರಣ. ಸರ್ಕಾರಿ ಕೆಲಸ ಕಾರ್ಯಗಳು ನಿಮ್ಮಿಷ್ಟದಂತೆ ಜರುಗುವುದು. ರಾಹು ಗ್ರಹದ ಸ್ಥಾನ ಪಲ್ಲಟದ ಪರಿಣಾಮ ಆಕಸ್ಮಿಕ ಲಾಭ.
- ಸರ್ವಶಕ್ತ ಶ್ರೀವಿಷ್ಣುಸ್ತುತಿ, ಶುಭಸಂಖ್ಯೆ-4.



ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಹರ್ಷ ಉಲ್ಲಾಸಗಳ ವಾತಾವರಣದಲ್ಲಿ ವಾರಕ್ಕೆ ಸ್ವಾಗತ. ಮಿತ್ರ ಜನರ ಸಮಾಗಮದಿಂದ ಮುದಿತವಾದ ಮನಸ್ಸು. ಧನ-ಕನಕ, ನೂತನ ವಸ್ತ್ರ ಪ್ರಾಪ್ತಿಯೂ ಉಂಟು. ನಿಮ್ಮ ಉತ್ತಮ ನಡೆತೆಯಿಂದ ಜನ ಮಾನ್ಯತೆಯನ್ನು ಗಳಿಸುವಿರಿ. ಗುರು ಕೃಪೆಯಿಂದ ಸತ್ಪುರುಷರ ಭೇಟಿ, ಆಶೀರ್ವಾದಗಳು ದೊರೆಯುವುದು. ಸುಸಂಸ್ಕೃತ ಜನರ ಸಂಗ ನಿಮ್ಮ ಮುಂದಿನ ಕಾರ್ಯಯೋಜನೆಗಳಿಗೆ ಬೆಂಬಲವಾಗುವುದು. ಆರೋಗ್ಯದ ಕಡೆ ಗಮನ ನೀಡಿ.
- ಶ್ರೀದುರ್ಗಾಷ್ಟೋತ್ತರ ಪಠಿಸಿ, ಶುಭಸಂಖ್ಯೆ-1.




ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವಾರದಾರಂಭಕ್ಕೆ ಚಂದ್ರನಿಂದ ಧನ ಸಂಬಂಧಿ ವಿಚಾರಗಳು ತೃಪ್ತಿದಾಯಕವಾಗಿರುತ್ತದೆ. ಗಣ್ಯವ್ಯಕ್ತಿಗಳ ಒಡನಾಟ ಲಾಭದಾಯಕ ವೆನಿಸಲಿದೆ. ಸಾರ್ವಜನಿಕ ಸಮಾರಂಭಗಳಲ್ಲಿ ನಿಮ್ಮ ಪಾತ್ರಕ್ಕೆ ಮನ್ನಣೆ ದೊರೆಯುವುದು. ಕೆಲವೊಮ್ಮೆ ಆದಾಯ ಮೀರಿದ ಖರ್ಚು ಎದುರಾಗುವುದು. ಅಷ್ಟಮಕ್ಕೆ ಗುರು ಗ್ರಹದ ಪ್ರವೇಶವಾಗಿದೆ. ತಗ್ಗಿ-ಬಗ್ಗಿ ನಡೆಯುವುದರಿಂದ ಮುಂದಾಗಬಹುದಾದ ವ್ಯತಿರಿಕ್ತ ಪರಿಣಾಮಗಳಿಂದ ಬಚಾವಾಗಬಹುದು. -ಶ್ರೀ ಆದಿತ್ಯ ಹೃದಯ ಪಠಿಸಿ, ಶುಭಸಂಖ್ಯೆ-6.



ಕನ್ಯಾ (ಟೊ.ಪ.ಪಿ.ಪು.ಘ.ಣ.ಠ.ಪೆ.ಪೊ)

ಗುರು ಕೃಪೆಯಿಂದ ಹೊಸ ಜನರ ಭೇಟಿ, ಹೊಸ ಚಟುವಟಿಕೆಗಳ ಪ್ರಾರಂಭ. ನೂತನ ಆವಿಷ್ಕಾರಗಳಿಂದ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವ ಅವಕಾಶ. ಬಂಧು- ಬಾಂಧವರಲ್ಲಿ ಸಂತಸವನ್ನು ಹಂಚಿಕೊಳ್ಳಿ, ಪ್ರಮುಖ ನಿರ್ಧಾರಗಳಿಗೆ ಅನುಭವಿಗಳೊಂದಿಗೆ ಸಮಾಲೋಚನೆ ಮಾಡಿ. ಅಷ್ಟಮಕ್ಕೆ ರಾಹು ಬಂದಿರುವ ಕಾರಣ ಸ್ವೇಚ್ಛಾರಗಳಿಂದ ತೊಂದರೆಯನ್ನು ಅನುಭವಿಸುವಿರಿ. ನಿಮ್ಮ ಮಾರ್ಯಾದೆಗೆ ಧಕ್ಕೆಯಾಗುವ ಸಂಭವವಿದೆ.
- ಶ್ರೀ ಅಷ್ಟಾಕ್ಷರೀ ಮಂತ್ರ ಜಪಿಸಿ, ಶುಭಸಂಖ್ಯೆ-9.



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಗುರು ಬಲ, ಶನಿ ಬಲಗಳು ಉಪ್ಪವಾಗಿರುವ ಕಾರಣ ಕೆಲಸ ಕಾರ್ಯಗಳು ನಿಧಾನಗತಿಯಲ್ಲಿ ಸಾಗುವುದು. ಆದರೆ, ನೀವು ತಾಳ್ಮೆ ಗೆಡುವ ಅಗತ್ಯವಿಲ್ಲ. ಆದಾಯ ಚೆನ್ನಾಗಿ ಇದ್ದರೂ ದುಂದು ವೆಚ್ಚಗಳಿಂದ ಜೇಬು ಖಾಲಿ. ನಿಮ್ಮ ಸುತ್ತ ಅಸೂಯಾಪರರು ಇದ್ದಾರೆ ಜಾಗೃತರಾಗಿರಿ. ಹಿಂದಾಗಿದ್ದಕ್ಕೆ ಚಿಂತಿಸುತ್ತಾ ಕೂರಬೇಡಿ, ಮುಂದಾಗ ಬೇಕಾಗಿರುವ ಸಾಧನೆಯತ್ತ ನೋಡಿ, ಲೋಕೋಪಕಾರಕ್ಕಾಗಿ ಶ್ರಮಿಸಿ ಒಳ್ಳೆಯದಾಗುತ್ತದೆ. - ಶ್ರೀಲಕ್ಷ್ಮೀ ಅಷ್ಟಕ ಪಠಿಸಿ, ಶುಭಸಂಖ್ಯೆ-2.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ)

ನಿಮ್ಮ ನಿರಂತರ ಪರಿಶ್ರಮಕ್ಕೆ ಈಗ ಗುರು ಕೃಪೆಯ ಪರಿಣಾಮ ಫಲ ನೀಡುವ ಸಮಯ ಬಂದಿದೆ. ಕಚೇರಿ ಕೆಲಸಗಳಲ್ಲಿ ಸಹದ್ಯೋಗಿಗಳ ಸಹಕಾರ ದೊರಕುವುದು. ನಿಮ್ಮ ಆತ್ಮವಿಶ್ವಾಸ ಉತ್ತಮ ಮಟ್ಟದಲ್ಲಿರುತ್ತದೆ. ಸರಿಯಾಗಿ ಮಾರ್ಗ ತೋರುವ ಗುರು ದೊರಕುವರು. ಸೆಟ್ ಬ್ಯಾಕ್ ನಂತರ ಕಮ್ ಬ್ಯಾಕ್ ಇದ್ದೇ ಇರುತ್ತದೆ. ವಿವಾಹಾಕಾಂಕ್ಷಿಗಳಿಗೆ ಸೂಕ್ತ ಜೋಡಿ ದೊರೆಯುವ ಸಾಧ್ಯತೆ ಇದೆ.
- ಶ್ರೀ ಗಣೇಶ ಸುತ್ತಿ ಪಠಿಸಿ, ಶುಭಸಂಖ್ಯೆ-7.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

'ಬಿತ್ತಿದ್ದನ್ನು ಬೆಳೆದುಕೊ' ಎಂಬ ನಾಣ್ಣುಡಿಯಂತೆ ಫಲಾಫಲಗಳು ಈಶ್ವರಾಜ್ಞೆಯಂತೆ ನಡೆಯುವುದು. ವಾರಾದಾರಂಭಕ್ಕೆ ವ್ಯಾಪಾರ ವ್ಯವಹಾರಗಳು ಚೇತರಿಕೆ ಕಂಡುಬರುವುದು. ದಿನಸಿ ವ್ಯಾಪಾರಿಗಳಿಗೆ ಹೇರಳ ಲಾಭವಾಗುವುದು. ಮಕ್ಕಳ ಚಲನ- ವಲನದ ಮೇಲೆ ನಿಗಾವಹಿಸಿ, ವಿದ್ಯಾರ್ಥಿಗಳಿಗೆ ಆಸಕ್ತಿ ಕುಂದಿತವಾಗುವುದು. ಮಾತಿನಂತೆ ನಡೆಯದೆ ಇರಸು-ಮುರುಸು ಅನುಭವಿಸಬೇಕಾಗುವುದು. ಖಯಾಲಿ ಪ್ರವಾಸಗಳನ್ನು ತ್ಯಜಿಸಿ.
- ಶ್ರೀ ರಾಯರ ಸೇವೆ. ಶುಭಸಂಖ್ಯೆ- 8.



ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)

ಗುರುಸ್ಥಾನ ಪಲ್ಲಟವಾಗಿದೆ. ಹಳೆಯ ಸಮಸ್ಯೆಗಳು ಪರಿಹಾರವಾಗುತ್ತದೆ. ಮನೆಯಲ್ಲಿ ಪೂಜೆ, ಪುನಸ್ಕಾರಗಳು ನಡೆದು ಸಂತಸದ ವಾತಾವರಣ ಇರುತ್ತದೆ. ದೂರ ಸರಿದವರು ಹತ್ತಿರ ವಾಗುವರು. ವ್ಯಾಪಾರಿ ಮತ್ತು ಬೃಹತ್ ಉದ್ಯಮಿಗಳಿಗೆ ಸಂತೃಪ್ತಿಯ ದಿನಗಳು. ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುವರು. ಅವರಿಗೆ ಶುಭ ಸಮಾಚಾರವೂ ಬರುತ್ತದೆ. ಕೆಲವರಿಗೆ ಸರ್ಕಾರಿ ಕಚೇರಿಗಳ ಅಲೆದಾಟ ಹಾಗೂ ಕೆಲಸ ಕಾರ್ಯಗಳು ಸರಾಗವಾಗಿ ಸಾಗದು. - 'ಓಂ ನಮೋ ನಾರಾಯಣಾಯ' ಮಂತ್ರ ಜಪಿಸಿ, ಶುಭಸಂಖ್ಯೆ-3.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ನಿಮ್ಮ ಕೆಲಸ ಕಾರ್ಯಗಳಿಗೆ ಸಾಧು, ಸತ್ಪುರುಷರ ಆಶೀರ್ವಾದ ದೊರಕುವುದು. ಅನುಭವಿಗಳ ಸಲಹೆ ಸರಿ ಸಮಯಕ್ಕೆ ಒದಗುತ್ತದೆ. ಸ್ವಂತ ವ್ಯವಹಾರಗಳು ಉತ್ತಮ, ಪಾಲುದಾರಿಕೆ ವ್ಯವಹಾರಗಳನ್ನು ತ್ಯಜಿಸಿ. ನೌಕರ ವರ್ಗದವರಿಗೆ ಉನ್ನತ ಸ್ಥಾನ ಲಭಿಸುವ ಸಾಧ್ಯತೆ ಇದೆ. ಗುರು ಕೃಪೆಯಿಂದ ಅಗತ್ಯ ಸಮಯಕ್ಕೆ ಸರಿಯಾಗಿ ಹಣ ಒದಗುತ್ತದೆ. ವಾರಾಂತ್ಯಕ್ಕೆ ಕುಟುಂಬ ಸಮೇತ ಪುಣ್ಯಕ್ಷೇತ್ರ ಸಂದರ್ಶನ.
- ಶ್ರೀ ವೆಂಕಟೇಶ್ವರ ದರ್ಶನ, ಶುಭಸಂಖ್ಯೆ-5.




ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಈ ವಾರವೆಲ್ಲಾ ಬ್ಯುಸಿಯಾಗಿರುತ್ತೀರಿ. ಆದರೆ, ವಿವೇಚನಾ ಹೀನ ನಿರ್ಧಾರಗಳಿಂದ ನಿಮಗೆ ನಷ್ಟವಾಗುವ ಸಾಧ್ಯತೆ ಇದೆ. ಇತರರ ದೂಷಣೆಗೂ ಗುರಿಯಾಗುವಿರಿ. ಶನಿದೇವನ ಅನುಗ್ರಹದಿಂದ ಕಟ್ಟಡ ಕೆಲಸ, ಕಬ್ಬಿಣ ವ್ಯಾಪಾರದಿಂದ ಉತ್ತಮ ಧನಾದಾಯವಾದರೂ ಅನಗತ್ಯ ವಿಷಯಗಳಿಗೆ ಹಣ ಪೋಲಾಗುವುದು. ವಿದ್ಯಾರ್ಥಿಗಳಿಗೆ ಪ್ರಗತಿ ಕುಂಠಿತವಾಗಬಹುದು. ನಿಮ್ಮ ಆರೋಗ್ಯದ ಬಗ್ಗೆ ಉಪೇಕ್ಷೆ ಸಲ್ಲದು.
- ಶ್ರೀ ಕುಲದೇವತಾ ದರ್ಶನ, ಶುಭಸಂಖ್ಯೆ-2.

ಮಕ್ಕಳ ಚಿತ್ರಕಥೆ

"ವೀರ ಸನ್ಯಾಸಿ ಹೇಳುತ್ತಿದ್ದುದು ಹೀಗೆ...!"

-ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ಮೈಸೂರು ಮಿತ್ರ

ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಭೇರ್ಯ, ಏ.16– ಹಾಲು ಉತ್ಪಾದಕರ ಸಹಕಾರ ಸಂಘಗಳು ಗ್ರಾಮೀಣ ಜನರ, ರೈತರ ಆರ್ಥಿಕತೆಯ ಆಧಾರ ಕೇಂದ್ರಗಳಾಗಿವೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ತಿಳಿಸಿದರು.

ಕೆ.ಆರ್.ನಗರ ತಾಲೂಕಿನ ಅಡಗೂರು ಗ್ರಾಮ ಪರಿಮಿತಿಯಲ್ಲಿ ಪಂಚಾಯತ್‌ರಾಜ್ ಇಲಾಖೆಯಿಂದ ಕೈಗೊಂಡಿರುವ 1 ಕೋಟಿ ರೂ. ವೆಚ್ಚದ ರಸ್ತೆ ಕಾಮಗಾರಿ ಮತ್ತು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಮಾಡಲಾಗುತ್ತಿರುವ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಲಂಡನ್ ಸೇರಿದಂತೆ ಇತರ ಪಾಶ್ಚಿಮಾತ್ಯ ದೇಶಗಳಲ್ಲಿ ಕುರಿ ಮತ್ತು ಆಡಿನ ಹಾಲು ಹಾಗೂ ಅವುಗಳ ಇತರ ಉಪ ಉತ್ಪನ್ನದಿಂದ ಬೃಹತ್ ಮಾರುಕಟ್ಟೆ ಸೃಷ್ಟಿಸಿ ಆ ಮೂಲಕ ಲಕ್ಷಾಂತರ ಕೋಟಿ ವ್ಯವಹಾರ ಮಾಡುತ್ತಿದ್ದು, ರಾಜ್ಯ ಸರ್ಕಾರವು ಹೈನು ಉದ್ಯಮದ ಜೊತೆಗೆ ಆ ಉತ್ಪನ್ನಗಳಿಗೆ ಪ್ರೋತ್ಸಾಹ ನೀಡಬೇಕೆಂದು ಸಲಹೆ ನೀಡಿದರು.

ಜನತಂತ್ರ ವ್ಯವಸ್ಥೆಯಲ್ಲಿ ಜನರು ನೀಡುವ ಅಧಿಕಾರವೇ ಪರಮೋಚ್ಚವಾಗಿದ್ದು, ಅದನ್ನು ನಾವು ಸದ್ಬಳಕೆ ಮಾಡಿಕೊಂಡು ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡಬೇಕಿದೆ. ನನ್ನೂರಿನ ಜನರು ಸೇರಿದಂತೆ ಕ್ಷೇತ್ರದ ಮತದಾರ ಪ್ರಭುಗಳು ನನಗೆ ರಾಜಕೀಯವಾಗಿ ಅಧಿಕಾರ ನೀಡಿದ್ದರಿಂದ ಇಂದು ನಾನು ರಾಜಕೀಯ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಲು ಸಾಧ್ಯವಾಯಿತು ಎಂದರು.

ಶಾಸಕ ಸಾ.ರಾ.ಮಹೇಶ್ ಮಾತನಾಡಿ, ರಾಜಕೀಯ ಮತ್ತು ಚುನಾವಣೆ ಸಂದರ್ಭ ಮಾಡುವ ಟೀಕೆಗಳೇ ಬೇರೆ. ಆದರೆ ಅಭಿವೃದ್ಧಿ ಕೆಲಸ ಮಾಡುವಾಗ ಪಕ್ಷಾತೀತ ಮತ್ತು ಜಾತ್ಯತೀತವಾಗಿ ಕಾರ್ಯ ನಿರ್ವಹಿಸಿದರೆ ಮಾತ್ರ ಅಭಿವೃದ್ಧಿ ಸಾಧ್ಯ. ನಾನು ಮತ್ತು ಹೆಚ್.ವಿಶ್ವನಾಥ್ ಅವರು ಪರಸ್ಪರ ರಾಜಕೀಯವಾಗಿ ಟೀಕೆ ಮತ್ತು ಆರೋಪ ಪ್ರತ್ಯಾರೋಪ ಮಾಡಿಕೊಂಡಿರುವಷ್ಟು ಯಾರೂ ಮಾಡಿಕೊಂಡಿಲ್ಲ. ಆದರೆ ವೈಯಕ್ತಿಕವಾಗಿ ಅವರ ಬಗ್ಗೆ ನನಗೆ ಅಪಾರ ಗೌರವವಿದ್ದು, ಮೇ ತಿಂಗಳಲ್ಲಿ ನಡೆಯುವ ಅವರ 75ನೇ ವರ್ಷದ ಜನ್ಮದಿನ ಕಾರ್ಯಕ್ರಮ ಸಮಿತಿ ಅಧ್ಯಕ್ಷ ಸ್ಥಾನವನ್ನು ನಾನೇ ವಹಿಸಿಕೊಂಡಿದ್ದು ಮನಪೂರ್ವಕವಾಗಿ ಸಮಾರಂಭದ ಯಶಸ್ಸಿಗೆ ದುಡಿಯುತ್ತೇನೆ ಎಂದರು.

ಮೈಮುಲ್ ಎಂಡಿಗೆ ಎಚ್ಚರಿಕೆ: ಮೈಮುಲ್ ಮೂಲಕ ಹಾಲು ಉತ್ಪಾದಕರ ಸಹಕಾರ ಸಂಘದ ಸದಸ್ಯರಿಗೆ ಹಸುಗಳ ಸಾಲ ನೀಡುವಾಗ ಒಂದೇ ತಾಲೂಕಿಗೆ ಹೆಚ್ಚಾಗಿ ಆದ್ಯತೆ ನೀಡುತ್ತಿದ್ದು, ಈ ವಿಚಾರದಲ್ಲಿ ತಾರತಮ್ಯ ಮಾಡುತ್ತಿರುವ ಬಗ್ಗೆ ದೂರುಗಳು ಕೇಳಿ ಬರುತ್ತಿದ್ದು, ಮುಂದಿನ ದಿನಗಳಲ್ಲಿ ಜಿಲ್ಲೆಯ ಎಲ್ಲ ತಾಲೂಕುಗಳಿಗೂ ಸಮಾನಾಗಿ ಸಾಲ ಕೊಡಿಸಲು ಮುಂದಾಗದಿದ್ದರೆ ನಾನು ಗಮನ ಹರಿಸಬೇಕಾಗುತ್ತದೆ ಎಂದು ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಬಿ.ಎನ್.ವಿಜಯ್ ಕುಮಾರ್ ಅವರಿಗೆ ಶಾಸಕರು ಎಚ್ಚರಿಕೆ ನೀಡಿದರು.

ಜಿಪಂ ಮಾಜಿ ಉಪಾಧ್ಯಕ್ಷ ಎ.ಎಸ್.ಚನ್ನಬಸಪ್ಪ, ಮಾಜಿ ಸದಸ್ಯ ಅಮಿತ್ ವಿ.ದೇವರಹಟ್ಟಿ, ಮೈಮುಲ್ ಮಾಜಿ ಅಧ್ಯಕ್ಷ ಎ.ಟಿ.ಸೋಮಶೇಖರ್, ತಾಪಂ ಮಾಜಿ ಸದಸ್ಯ ನಾಗಣ್ಣ ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್. ರಮೇಶ್, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎಲ್.ನಾಗರಾಜು, ಗ್ರಾಪಂ ಸದಸ್ಯೆ ಕುಮಾರಿ, ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ವಿಜಯ್ ಕುಮಾರ್, ವ್ಯವಸ್ಥಾಪಕ ಡಾ.ಸಣ್ಣತಮ್ಮೇಗೌಡ, ಪಂಚಾಯತ್ ರಾಜ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕೆ. ಬಸವರಾಜು, ಸಹಾಯಕ ಇಂಜಿನಿಯರ್ ಪಿ.ಸ್ವಾಮಿ ಇತರರಿದ್ದರು.

ಸಾರಾ ಕೊಂಡಾಡಿದ ವಿಶ್ವನಾಥ್

ಸಭೆಯಲ್ಲಿ ಮಾತನಾಡುವ ವೇಳೆ ಶಾಸಕ ಸಾ.ರಾ. ಮಹೇಶ್ ಅವರನ್ನು ಮುಕ್ತ ಕಂಠದಿಂದ ಪ್ರಶಂಸಿಸಿದ ವಿಧಾನ ಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಶಾಸಕರು ಸ್ನೇಹಿತರಾಗಿ, ಜನಾನುರಾಗಿಯಾಗಿ ರಾಜ್ಯದಲ್ಲೇ ಮಾದರಿ ಕೆಲಸ ಮಾಡುತ್ತಿದ್ದಾರೆ ಎಂದು ಮನಸಾರೆ ಕೊಂಡಾಡಿದರು.

ಜನಸಾಮಾನ್ಯರಿಗೆ ಅಂಬೇಡ್ಕರ್‌ರನ್ನು ಅರ್ಥೈಸುವಲ್ಲಿ ಸಫಲರಾಗಿಲ್ಲ

ವಸತಿ ಯೋಜನೆ ಸಮಿತಿ ಮಾಜಿ ಅಧ್ಯಕ್ಷ ಸುನಿಲ್ ಬೋಸ್ ವಿಷಾದ



ತಿ.ನರಸೀಪುರ ಏ.16(ಎಸ್‌ಕೆ)– ಸಾಮಾಜಿಕ ಚಳುವಳಿಯನ್ನು ಅಂಬೇಡ್ಕರ್ ತೋರಿದ ಹಾದಿಯಲ್ಲಿ ಮುನ್ನಡೆಸಿ, ಎಲ್ಲರಲ್ಲೂ ಪ್ರಜ್ಞಾವಂತಿಕೆ ಬೆಳೆಸುವಲ್ಲಿ ಹಿಮ್ಮುಖರಾಗುತ್ತಿರುವ ನಾವು ಸಾಮಾನ್ಯ ಜನರಿಗೆ ಅಂಬೇಡ್ಕರ್ ಅವರನ್ನು ಅರ್ಥೈಸುವಲ್ಲಿಯೂ ಸಫಲರಾಗಿಲ್ಲವೆಂದು ವಸತಿ ಯೋಜನೆ ಸಮಿತಿ ಮಾಜಿ ಅಧ್ಯಕ್ಷ ಸುನಿಲ್ ಬೋಸ್ ವಿಷಾದಿಸಿದರು.

ಪಟ್ಟಣದಲ್ಲಿ ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಮಿತಿಯಿಂದ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಅವರು, ವಿದ್ಯಾವಂತರಾಗುವವರು ಅಧ್ಯಯನಕ್ಕೆ ಪೂರಕ ಪರಿಕರಗಳ ಕೊರತೆಯಿಂದಲೋ, ನಿರಾಶಕ್ತಿಯಿಂದಲೋ ಅಂಬೇಡ್ಕರ್ ಚಳವಳಿ ಮುನ್ನೆಡೆಸಲು ವಿಫಲರಾಗುತ್ತಿದ್ದೇವೆ ಎಂಬ ಭಾವನೆ ಮೂಡುತ್ತಿದೆ. ಅಂಬೇಡ್ಕರ್ ಏನೆಂಬುದನ್ನು ಅರಿಯಲು ಅವರ ತ್ಯಾಗ, ಸಾಧನೆ ತಿಳಿಯಬೇಕು ಎಂದರು.

ಸಂವಿಧಾನ ರಚನೆ ವೇಳೆ ಶಾಸನ ಸಭೆಯಲ್ಲಿ ಪ್ರತಿಯೊಂದು ಕರಡು, ಕಾಯ್ದೆಗಳನ್ನು ಅಂದಿನ ಜನಪ್ರತಿನಿಧಿಗಳಿಗೆ ಅರ್ಥೈಸಿ ಉಳಿಸಿದ್ದರಿಂದ ನಾವೆಲ್ಲರೂ ಉಳಿದಿದ್ದೇವೆ. ಶ್ರೇಷ್ಠತೆಯ ಸಂವಿಧಾನ ರಚನೆ ಮಾಡಿದ ಹೆಗ್ಗಳಿಕೆ ಸಮಸ್ತ ಭಾರತೀಯರಿಗೆ ಮನವರಿಕೆ ಮಾಡಿಕೊಡಬೇಕು. ಎಲ್ಲಾ ಧರ್ಮಗಳ ಜನರಿಗೆ ಅಂಬೇಡ್ಕರ್‌ರನ್ನು ಅರ್ಥ ಮಾಡಿಸುವ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಸನಾತನ ವರ್ಣ ವ್ಯವಸ್ಥೆಯಲ್ಲಿ ಶೋಷಣೆಯ ಕರಾಳತೆ ಅರಿವಿದ್ದರಿಂದಲೇ ಅಂಬೇಡ್ಕರ್ ಅವರು ಸಮಾನತೆ ಹಾಗೂ ಏಕತೆಯ ಭ್ರಾತೃತ್ವ ಬೆಸೆಯಲು ಸಂವಿಧಾನವನ್ನು ಪ್ರಬುದ್ಧ ಭಾರತ ಕಲ್ಪನೆಯಲ್ಲಿ ರಚನೆ ಮಾಡಿದರು. ರಾಜಕೀಯ ಅಧಿಕಾರವನ್ನು ಸಾಮಾಜಿಕ ನ್ಯಾಯದಡಿ ನೀಡಲು ಕಾನೂನುಗಳನ್ನು ರೂಪಿಸಿದರು. ಅವರನ್ನು ಯಾವುದೇ ಒಂದು ಜನಸಮುದಾಯಕ್ಕೆ ಸೀಮಿತಗೊಳಿಸದೆ ಸರ್ವ ವ್ಯಾಪಿಗೊಳಿಸಬೇಕು ಎಂದು ಸಲಹೆ ನೀಡಿದರು.

ಶಾಸಕ ಎಂ.ಅಶ್ವಿನ್ ಕುಮಾರ್ ಮಾತನಾಡಿ, ಶೋಷಿತ ಹಾಗೂ ದುರ್ಬಲ ವರ್ಗದವರಿಗೆ ಮಾನವ ಹಕ್ಕುಗಳನ್ನು ಒದಗಿಸಿದ ಕೀರ್ತಿ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ. ಅವರು ಸಾಮಾಜಿಕ, ಸಮಾನತೆಗಾಗಿ ಹೋರಾಡಿದ ಮಹಾನ್ ನಾಯಕರು. ನೊಂದವರ, ದೀನ ದಲಿತರ ಬದುಕು ಬೆಳಗಿಸಿದ ಸೂರ್ಯ. ಶ್ರೇಷ್ಠ ಅರ್ಥಶಾಸ್ತ್ರಜ್ಞ, ಸಮಾಜ ಸುಧಾರಕ. ವಿಶ್ವರತ್ನ. ಮಹಾ ಮನವತಾವಾದಿ ಹಾಗೂ ಸಂವಿಧಾನ ಶಿಲ್ಪಿ. ಅವರ ಆದರ್ಶಗಳನ್ನು ಜೀವನದಲ್ಲಿ ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದರು.

ಸಾನ್ನಿಧ್ಯವನ್ನು ಬೋಧಿರತ್ನ ಬಂತೇಜಿ ವಹಿಸಿದ್ದರು. ಪುರಸಭಾಧ್ಯಕ್ಷ ಮದನ್‌ರಾಜ್, ಉಪಾಧ್ಯಕ್ಷ ಪ್ರೇಮ, ಸದಸ್ಯರಾದ ಸಿ.ಪ್ರಕಾಶ್, ಬೇಬಿ ಹೇಮಂತ್, ಜಿಪಂ ಮಾಜಿ ಅಧ್ಯಕ್ಷ ಸಿದ್ದಾರ್ಥ, ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಮಿತಿ ಅಧ್ಯಕ್ಷ ಎನ್.ಮಹೇಶ್, ತಾಲೂಕು ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಮಹದೇವಯ್ಯ, ಉಪ ತಹಸೀಲ್ದಾರ್ ಪ್ರಭುರಾಜ್, ಸಂಘದ ಗೌರವಾಧ್ಯಕ್ಷ ಕೆಂಚಪ್ಪ, ಕಾರ್ಯದರ್ಶಿ ಶಿವಮೂರ್ತಿ, ಖಜಾಂಚಿ ಶ್ರೀಧರ್, ಸಲಹೆಗಾರ ರಂಗಸ್ವಾಮಿ, ಯಜಮಾನ ಶಿವರುದ್ರ, ನಿರ್ದೇಶಕರಾದ ಎಂ.ಮಿಥುನ್, ಗಂಗಾಧರ್, ಪುಟ್ಟರಾಜು, ಕೃಷ್ಣ ಮೂರ್ತಿ, ನಾಗರಾಜು, ಮಹದೇವಸ್ವಾಮಿ, ಸಿದ್ದರಾಜು, ಮಹದೇವಮ್ಮ ಇನ್ನಿತರರಿದ್ದರು.

ಶ್ರೀಕೋದಂಡರಾಮ ರಥೋತ್ಸವ ಇಂದು

ಬನ್ನೂರು, ಏ.16(ಪ್ರಭು)– ಪಟ್ಟಣದ ಇತಿಹಾಸ ಪ್ರಸಿದ್ಧ ಶ್ರೀ ಕೋದಂಡರಾಮ ಬ್ರಹ್ಮ ರಥೋತ್ಸವ ಏ.17ರಂದು ಬೆಳಗ್ಗೆ 8.15ರಿಂದ 8.45ರ ಶುಭ ವೃಷಭ ಲಗ್ನದಲ್ಲಿ ನಡೆಯಲಿದೆ ಎಂದು ಮುಖ್ಯ ಅರ್ಚಕರಾದ ಕೃಷ್ಣಸ್ವಾಮಿ ತಿಳಿಸಿದ್ದಾರೆ. ಸಂಜೆ ತೇರಡಿ ಉತ್ಸವ ನಡೆಯಲಿದೆ ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ವ್ಯಕ್ತಿ ನಾಪತ್ತೆ



ನಂಜನಗೂಡು, ಏ.16– ನಂಜನಗೂಡು ಪಟ್ಟಣದ ದೇವಿ ನಗರದ ನಿವಾಸಿ ಮಧುಕುಮಾರ್ (30) ಕಾಣೆಯಾಗಿರುವ ಬಗ್ಗೆ ಪಟ್ಟಣದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಏ. 9 ರಂದು ಮನೆಯಿಂದ ಹೊರ ಹೋದ ಮಧುಕುಮಾರ್ ವಾಪಸ್ ಬಂದಿಲ್ಲ ಎಂದು ಆತನ ತಾಯಿ ಶಾಂತಮ್ಮ ದೂರು ದಾಖಲಿಸಿದ್ದಾರೆ. ಈತನ ಬಗ್ಗೆ ಮಾಹಿತಿ ತಿಳಿದಲ್ಲಿ ಮೊ. 9739261626 ಸಂಪರ್ಕಿಸಲು ಕೋರಲಾಗಿದೆ.

ಚಂದ್ರವಾಡಿ ಡೈರಿ ಅಧ್ಯಕ್ಷರಾಗಿ ಸಿ.ಎಸ್.ರಾಜು



ಮಲ್ಕುಂಡಿ, ಏ.16(ಚನ್ನಪ್ಪ)– ನಂಜನಗೂಡು ತಾಲೂಕಿನ ಚಂದ್ರವಾಡಿ ಹಾಲು ಉತ್ಪಾದಕ ಸಹಕಾರ ಸಂಘದ ಅಧ್ಯಕ್ಷರಾಗಿ ಸಿ.ಎಸ್.ರಾಜು, ಉಪಾಧ್ಯಕ್ಷರಾಗಿ ಸುಂದ್ರಮ್ಮ ಅವಿರೋಧವಾಗಿ ಆಯ್ಕೆಯಾದರು. ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಇವರಿಬ್ಬರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸಿದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಗಂಗಾಧರ್ ಘೋಷಿಸಿದರು.

ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ ಮಾತನಾಡಿ, ಡೈರಿಗೆ ಗುಣಮಟ್ಟದ ಹಾಲನ್ನು ಸರಬರಾಜು ಮಾಡಿದಾಗ ಮಾತ್ರ ಸಂಘ ಲಾಭ ಕಾಣಲು ಸಾಧ್ಯ. ಪ್ರತಿಯೊಬ್ಬ ಸದಸ್ಯರ ಸಹಕಾರದಿಂದ ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಶ್ರಮಿಸಿ ಎಂದು ಸಲಹೆ ನೀಡಿದರು. ನಿರ್ದೇಶಕರಾದ ಪುಟ್ಟಸ್ವಾಮಪ್ಪ, ಶಿವಕುಮಾರ್, ನಾಗಣ್ಣ, ರಂಗಸ್ವಾಮಿ, ಬಸವರಾಜ್, ಸರೋಜಮ್ಮ, ಸಿಇಓ ವಿಜೇಂದ್ರ ಹಾಜರಿದ್ದರು.

ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ



ಪಿರಿಯಾಪಟ್ಟಣ, ಏ.16(ವೀರೇಶ್)– ಪಟ್ಟಣದ ಎಲ್ಲಾ ವಾರ್ಡ್ ಸೇರಿದಂತೆ ತಾಲೂಕಿನ ಪ್ರತಿ ಗ್ರಾಮಗಳ ಹಿಂದುಳಿದ ವರ್ಗದ ರಸ್ತೆಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದು ಶಾಸಕ ಕೆ.ಮಹದೇವ್ ತಿಳಿಸಿದರು.

ಪಟ್ಟಣದ ಪುರಸಭೆ ವ್ಯಾಪ್ತಿಯ ವಾರ್ಡ್ ನಂ.23ರ ರಾಜಾಪುರ ಬಡಾವಣೆಯಲ್ಲಿ 46.94 ಲಕ್ಷ ರೂ. ವೆಚ್ಚದ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ತಾಲೂಕಿನ ಹಲವು ಗ್ರಾಮಗಳು ಸೇರಿದಂತೆ ಪಟ್ಟಣದ ಅನೇಕ ಬಡಾವಣೆಗಳು ಇಂದಿಗೂ ಅಭಿವೃದ್ಧಿಯಾಗಿಲ್ಲ. ಇವುಗಳನ್ನು ಗುರುತಿಸಿ ಮೂಲ ಸೌಕರ್ಯ ಒದಗಿಸಲು ಮೊದಲ ಆದ್ಯತೆ ನೀಡಿ ಅಭಿವೃದ್ಧಿ ಪಡಿಸುತ್ತಾ ಬರುತ್ತಿದ್ದೇನೆ. ಕಳೆದ 4 ವರ್ಷಗಳಲ್ಲಿ ತಾಲೂಕಿನ ಸಂಪೂರ್ಣ ಅಭಿವೃದ್ಧಿ ಅಸಾಧ್ಯವಾಗಿದ್ದು, ಮುಂದಿನ ದಿನಗಳಲ್ಲಿ ಉಳಿದ ಕಾಮಗಾರಿಗಳನ್ನು ಹಂತ ಹಂತವಾಗಿ ಅನುಷ್ಠಾನಕ್ಕೆ ತಂದು ಜಾರಿಗೊಳಿಸಲಾಗುವುದು ಎಂದರು.

ಅಭಿವೃದ್ಧಿ ಶೂನ್ಯ: ತಾಲೂಕಿನಲ್ಲಿ 40 ವರ್ಷದಿಂದ ಅಧಿಕಾರ ನಡೆಸಿದ ಹಿಂದಿನ ಶಾಸಕರು ಯಾವುದೇ ಅಭಿವೃದ್ಧಿ ಕಾಮಗಾರಿ ಮಾಡದ ಪರಿಣಾಮ ತಾಲೂಕಿನ ಪ್ರತಿ ಗ್ರಾಮಗಳು ಸಮಸ್ಯೆಗಳ ಆಗರವಾಗಿ, ಮೂಲ ಸೌಕರ್ಯದಿಂದ ವಂಚಿತವಾಗಿವೆ ಎಂದರು.

ಇದೇ ವೇಳೆ ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಪುರಸಭೆ ಹಂಗಾಮಿ ಅಧ್ಯಕ್ಷೆ ನಾಗರತ್ನ, ಮಂಜುನಾಥ್ ಸಿಂಗ್, ತಿಮ್ಮ ನಾಯಕ, ಸದಸ್ಯರಾದ ನಳಿನಿಗೌಡ, ನೂರ್ ಜಾನ್, ನಿರಂಜನ್, ಕೃಷ್ಣ, ಪ್ರಕಾಶ್ ಸಿಂಗ್, ಭಾರತಿ, ಮೋಹನ್ ಯಾದವ್ ಇತರರಿದ್ದರು.

ಸಮಾನತೆಗಾಗಿ ಹೋರಾಡಿದ ತತ್ವಜ್ಞಾನಿ ಅಂಬೇಡ್ಕರ್



ಸಾಲಿಗ್ರಾಮ, ಏ.16(ಜ್ಯೋತಿ)– ಭಾರತದ ಸಂವಿಧಾನ ರಚನೆಯಲ್ಲಿ ಅಂಬೇಡ್ಕರ್ ಪಾತ್ರ ಮಹತ್ವದ್ದು. ಜಗತ್ತಿನೆಲ್ಲೆಡೆ ಸಮಾನತೆಗಾಗಿ ಹೋರಾಡಿದ ತತ್ವಜ್ಞಾನಿ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ತಾಲೂಕು ಆಡಳಿತ ಏರ್ಪಡಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿಯಲ್ಲಿ ಮಾತನಾಡಿದ ಅವರು, ಇಡೀ ವಿಶ್ವವೇ ಮೆಚ್ಚುವಂತಹ ಸಂವಿಧಾನ ರಚಿಸುವ ಮೂಲಕ ಪ್ರತಿಯೊಬ್ಬರೂ ಸಮಾನತೆಯಿಂದ ಬದುಕು ನಡೆಸುವಂತಹ ಅವರ ಉತ್ತಮ ತತ್ವ ಆದರ್ಶಗಳನ್ನು ಪ್ರತಿಯೊಬ್ಬರೂ ಪಾಲಿಸುವ ಜೊತೆಗೆ ಇತರರಿಗೂ ಅರಿವು ಮೂಡಿಸಬೇಕು ಎಂದು. ಈ ವೇಳೆ ಎಸ್‌ಎಸ್ ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಮೂವರು ವಿದ್ಯಾರ್ಥಿಗಳು ಮತ್ತು ಇಬ್ಬರು ಪೌರ ಕಾರ್ಮಿಕರನ್ನು ಸನ್ಮಾನಿಸ ಲಾಯಿತು. ಸಿಪಿಐ ಶ್ರೀಕಾಂತ್, ತಹಸೀಲ್ದಾರ್ ಕೆ.ಎನ್. ಮೋಹನ್ ಕುಮಾರ್, ಪಿಡಿಓ ಹೆಚ್.ಡಿ. ಮಂಜುನಾಥ್ ಅವರನ್ನು ಗೌರವಿಸಲಾಯಿತು. ಗ್ರಾಪಂ ಅಧ್ಯಕ್ಷೆ ದೇವಿಕಾ, ಉಪಾಧ್ಯಕ್ಷೆ ಸುಧಾ, ಉದ್ಯಮಿ ಸಾ.ರಾ.ನಂದೀಶ್, ಡಿ.ರವಿಶಂಕರ್, ಉಪ ತಹಸೀಲ್ದಾರ್ ಮಹೇಂದ್ರ ಇತರರಿದ್ದರು.

ಭಾರೀ ಗಾಳಿ ಮಳೆ: ಬಾಳೆ ಫಸಲು ನಾಶ



ಹೆಚ್.ಡಿ.ಕೋಟೆ, ಏ.16(ಮಂಜು)– ಭಾರೀ ಗಾಳಿ ಮಳೆಗೆ ಕಟಾವಿಗೆ ಬಂದಿದ್ದ 2 ಎಕರೆ ಬಾಳೆ ಫಸಲು ನಾಶವಾಗಿರುವ ಘಟನೆ ಶುಕ್ರವಾರ ತಾಲೂಕಿನ ಬೆಳಗನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಮಾದೇಗೌಡ ಎಂಬುವರು ತಮ್ಮ 2 ಎಕರೆ ಜಮೀನಿನಲ್ಲಿ ಬಾಳೆ ಬೆಳೆದಿದ್ದರು. ಸುಮಾರು 40 ಗೊನೆಗಳನ್ನು ಮಾತ್ರ ಕಟಾವು ಮಾಡಲಾಗಿತ್ತು. ಆದರೆ ಶುಕ್ರವಾರ ಮಧ್ಯಾಹ್ನ ಸುರಿದ ಭಾರೀ ಗಾಳಿಗೆ ಮಳೆಗೆ ಬಾಳೆ ಫಸಲು ಸಂಪೂರ್ಣ ನಾಶವಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎನ್ನಲಾಗಿದೆ. ನೇಂದ್ರ ಬಾಳೆ ಕೆಜಿಗೆ 45 ರೂ. ಇದೆ. ಸುಮಾರು ಮೂರ್ನಾಲ್ಕು ಲಕ್ಷ ಆದಾಯದ ನಿರೀಕ್ಷೆಯಲ್ಲಿದ್ದೆ. ಆದರೆ ಮಳೆ ನಮ್ಮ ನಿರೀಕ್ಷೆಗೆ ತಣ್ಣೀರೆರಚಿದೆ. ಎಲ್ಲಾ ಬಾಳೆ ನೆಲಕ್ಕೊರಗಿವೆ. ಲಕ್ಷದವರೆಗೆ ಖರ್ಚಾಗಿದೆ. ಪ್ರಕೃತಿ ವಿಕೋಪದಿಂದಾಗಿರುವ ಈ ನಷ್ಟಕ್ಕೆ ತಾಲೂಕು ಆಡಳಿತ ಸೂಕ್ತ ಪರಿಹಾರ ನೀಡಬೇಕು ಎಂದು ಎಂದು ರೈತ ಮಾದೇಗೌಡ ಒತ್ತಾಯಿಸಿದ್ದಾರೆ.

ಸಂವಿಧಾನದಿಂದ ಮಾತ್ರ ದೇಶದ ರಕ್ಷಣೆ ಸಾಧ್ಯ: ಹೆಚ್‌ಪಿಎಂ



ಹುಣಸೂರು, ಏ.16(ಕೆಕೆ)– ಸಂವಿಧಾನದಿಂದ ಮಾತ್ರ ದೇಶದ ರಕ್ಷಣೆ ಸಾಧ್ಯ ಎಂದು ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ಗುರುವಾರ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಅವರ 131ನೇ ಜಯಂತಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದೇಶದಲ್ಲಿ ವಿವಿಧ ಧರ್ಮ ಗ್ರಂಥಗಳಿಂದ ಎಲ್ಲರನ್ನೂ ಒಗ್ಗೂಡಿಸಲು ಹಾಗೂ ಸಮಾನತೆಯಿಂದ ಕಾಣಲು ಸಾಧ್ಯವಿಲ್ಲ. ಜನರು ಸಂವಿಧಾನ ಬರುವುದಕ್ಕಿಂತ ಮೊದಲು ನಮ್ಮ ಬದುಕು ಹೇಗಿತ್ತು. ಸಂವಿಧಾನ ಬಂದ ನಂತರ ಹೇಗಿದೆ ಎಂಬುದನ್ನು ತಿಳಿಯಬೇಕು ಎಂದರು.

ಪ್ರಧಾನ ಭಾಷಣಕಾರರೂ ಆದ ವಕೀಲ ರಾಮಸ್ವಾಮಿ ಮಾತನಾಡಿ, ಬ್ರಾಹ್ಮಣರಿಗೆ ಶೇ.10ರಷ್ಟು ಮೀಸಲಾತಿ ನೀಡುತ್ತಿರುವುದು ಕೂಡ ಅಂಬೇಡ್ಕರ್ ಬರೆದಿರುವ ಸಂವಿಧಾನದಿಂದಲೇ. ಅವರು ಒಂದು ಜಾತಿಗೆ ಅಥವಾ ಒಂದು ಧರ್ಮಕ್ಕೆ ಸೀಮಿತರಲ್ಲ. ಅಂಬೇಡ್ಕರ್ ವಕೀಲರಾಗಿ, ಹೋರಾಟಗಾರರಾಗಿ, ಸಮತಾ ಸೈನಿಕ ದಳ ಪ್ರಾರಂಭಿಸಿ ದುಡಿಯುವ ಕಾರ್ಮಿಕರ ಸಮಯವನ್ನು 8 ಗಂಟೆಗೆ ಇಳಿಸಿದರು. ಅಲ್ಲದೇ ಆರ್‌ಬಿಐ ಬ್ಯಾಂಕ್ ಸ್ಥಾಪನೆ, ಮಹಿಳೆಯರಿಗೆ ಹೆರಿಗೆ ಭತ್ಯೆ ಹಾಗೂ ನಾಗರಿಕ ಹಕ್ಕುಗಳ ಸಂಸ್ಥಾಪಕರಾಗಿ ತಮ್ಮ ಸರ್ವಸ್ವವನ್ನೇ ದೇಶದ ಸಮಾನತೆ ಮತ್ತು ದಲಿತರ ಏಳ್ಗೆಗಾಗಿ ಶ್ರಮಿಸದವರು. ಅಂಬೇಡ್ಕರ್ ಅವರ ಅಂತರಾಳವನ್ನು ಜನತೆ ಅರ್ಥಮಾಡಿಕೊಳ್ಳಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷೆ ಸಮೀನಾ ಪರ್ವೀನ್, ಉಪಾಧ್ಯಕ್ಷ ದೇವನಾಯಕ, ತಾಪಂ ಮಾಜಿ ಅಧ್ಯಕ್ಷೆ ಪದ್ಮಮ್ಮ, ಎಸಿ ವರ್ಣಿತ್ ನೇಗಿ, ತಹಸೀಲ್ದಾರ್ ಎಸ್.ಯು.ಅಶೋಕ್, ಜಿಪಂ ಲೆಕ್ಕಾಧಿಕಾರಿ ನಂದಕುಮಾರ್, ಸಮಾಜ ಕಲ್ಯಾಣಾಧಿಕಾರಿ ಮೋಹನ್ ಕುಮಾರ್, ಇಓ ಗಿರೀಶ್, ಪೌರಾಯುಕ್ತ ರವಿ ಕುಮಾರ್, ದಲಿತ ಮುಖಂಡರಾದ ಆನಂದಸ್ವಾಮಿ, ನಾಗರಾಜ್ ಮಲ್ಲಾಡಿ, ಸಮಾಜ ಸೇವಕ ದೇವರಾಜ್ ಒಡೆಯರ್, ಪುಟ್ಟಸ್ವಾಮಿ, ಕುನ್ನೇಗೌಡ, ಕುಮಾರ್, ನಿಂಗರಾಜ್ ಮಲ್ಲಾಡಿ, ಬಸವಲಿಂಗಯ್ಯ, ಚಿಕ್ಕಸ್ವಾಮಿ ಇತರರಿದ್ದರು.

ಪ್ರಮುಖ ಬೇಡಿಕೆ ಈಡೇರಿಕೆಗೆ ಮನವಿ

ಕಾರ್ಯಕ್ರಮದಲ್ಲಿ ತಾಲೂಕಿನ ದಲಿತ ಸಮಾಜದ ಕೆಲ ಪ್ರಮುಖ ಬೇಡಿಕೆ ಈಡೇರಿಸುವಂತೆ ದಲಿತ ಮುಖಂಡರು ಶಾಸಕ ಹೆಚ್.ಪಿ.ಮಂಜುನಾಥ್ ಅವರಿಗೆ ಮನವಿ ಸಲ್ಲಿಸಿದರು.

- ಅಂಬೇಡ್ಕರ್ ಪ್ರತಿಮೆಯನ್ನು ನಗರದ ಪ್ರಮುಖ ಸ್ಥಳದಲ್ಲಿ ಸ್ಥಾಪಿಸಬೇಕು.
- ತಾಲೂಕಿನ ದಲಿತ ಮತ್ತು ಎಲ್ಲಾ ಜಾತಿಯ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ನಗರದಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರಗಳನ್ನು ನುರಿತ, ಅನುಭವಿ ಶಿಕ್ಷಕರನ್ನೊಳಗೊಂಡಂತೆ ಸ್ಥಾಪನೆ ಮಾಡಿಕೊಡಬೇಕು.
- ಇಂಜಿನಿಯರಿಂಗ್ ಮತ್ತು ನರ್ಸಿಂಗ್ ಕಾಲೇಜು ಸ್ಥಾಪನೆ ಮಾಡಬೇಕು.
- ವಿಶ್ವಕ್ಕೆ ಪ್ರೀತಿ, ಕರುಣೆ, ಶಾಂತಿ, ಸಹನೆ ಸಾರಿದ ಗೌತಮ ಬುದ್ಧನ ಹೆಸರಿನಲ್ಲಿ ಬೌದ್ಧ ವಿಹಾರ ಸ್ಥಾಪಿಸಲು 5 ಎಕರೆ ಜಾಗ ಮಂಜೂರು ಮಾಡಬೇಕು.
- ತಾಲೂಕಿನ ಬಡ ಮಹಿಳೆಯರಿಗಾಗಿ ಗಾರ್ಮೆಂಟ್ ಸ್ಥಾಪನೆ ಮಾಡಬೇಕು.
- ತಾಲೂಕಿನ ದಲಿತ ಸಮಾಜದ ಆದಿಕರ್ನಾಟಕ ಜಾತಿಗೆ ಸಮುದಾಯ ಭವನ ನಿರ್ಮಿಸಿಕೊಳ್ಳಲು 2 ಎಕರೆ ಸರ್ಕಾರಿ ಜಾಗ ಮಂಜೂರು ಮಾಡಿಕೊಡಬೇಕು.

ಮನವಿ ಸ್ವೀಕರಿಸಿದ ಶಾಸಕ ಮಂಜುನಾಥ್ ಮಾತನಾಡಿ, ಹಂತ ಹಂತವಾಗಿ ತಮ್ಮ ಸಮಸ್ಯೆ ಬಗೆಹರಿಸಲು ಶ್ರಮಿಸುತ್ತೇನೆ ಎಂದರು.

ಪ್ರಯಾಣಿಕರು ಹಳೇ ದರ ನೀಡಿ ಸಹಕರಿಸಿ

ಖಾಸಗಿ ಬಸ್ ಮಾಲೀಕರ ಸಂಘದ ಗೌರವಾಧ್ಯಕ್ಷ ಕೆ.ವಜ್ರೇಗೌಡ ಮನವಿ



ತಿ.ನರಸೀಪುರ, ಏ.16 (ಎಸ್‌ಕೆ)– ಡೀಸೆಲ್, ಟೈರ್, ಟೋಲ್ ದರ, ಇನ್ನಿತರೆ ಬಿಡಿ ಭಾಗಗಳ ದರ ಹೆಚ್ಚಿಸಿರುವ ಹಿನ್ನೆಲೆಯಲ್ಲಿ ಪ್ರಯಾಣಿಕರು ಖಾಸಗಿ ಬಸ್‌ನವರು ನಿಗದಿಪಡಿಸಿರುವ ಹಳೆ ದರವನ್ನೇ ನೀಡಿ ಸಹಕರಿಸುವಂತೆ ಮೈಸೂರು ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘದ ಗೌರವಾಧ್ಯಕ್ಷ ಕೆ.ವಜ್ರೇಗೌಡ ಮನವಿ ಮಾಡಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಖಾಸಗಿ ಬಸ್ ಸಂಸ್ಥೆಯವರು ಕಳೆದ 3 ವರ್ಷಗಳಿಂದ ಬಸ್ ದರ ಏರಿಕೆ ಮಾಡಿಲ್ಲ. ಟೋಲ್ ದರ ಏರಿಕೆಯಾದ ಹಿನ್ನೆಲೆಯಲ್ಲಿ ಕೆಎಸ್ ಆರ್‌ಟಿಸಿಯವರು ಬಸ್ ದರವನ್ನು 1 ರೂ. ಹೆಚ್ಚಳ ಮಾಡಿದ್ದಾರೆ. ನಾವು ಮಾತ್ರ 3 ವರ್ಷಗಳಿಂದ ಹಳೇ ದರದಲ್ಲೇ ಬಸ್‌ಗಳನ್ನು ಓಡಿಸುತ್ತಿದ್ದೇವೆ. ಆದರೆ ಪ್ರಯಾಣಿಕರು ಹಳೆಯ ದರಗಳನ್ನು ಸರಿಯಾಗಿ ನೀಡದಿದ್ದರೆ ಈಗಿನ ಪರಿಸ್ಥಿತಿಯಲ್ಲಿ ಬಸ್ ಓಡಿಸಲು ಸಾಧ್ಯವಿಲ್ಲ. ಡೀಸೆಲ್ ಹಾಗೂ ಕಾರ್ಮಿಕರ ಕೂಲಿಗೂ ಹಣ ಸಾಲುವುದಿಲ್ಲ. ಹಾಗಾಗಿ ಪ್ರಯಾಣಿಕರು ಈ ಹಿಂದೆ ನಿಗದಿ ಪಡಿಸಿದ್ದ ಮೈಸೂರು–ತಿ.ನರಸೀಪುರಕ್ಕೆ 40 ರೂ., ಕೊಳ್ಳೇಗಾಲ ಹಾಗೂ ಚಾಮರಾಜನಗರಕ್ಕೆ 70 ರೂ.ಗಳ ಹಳೆ ದರವನ್ನೇ ಕೊಟ್ಟು ಸಹಕರಿಸಿ ಎಂದು ಮನವಿ ಮಾಡಿದರು.

ರಹದಾರಿ ನವೀಕರಣ ಮಾಡಿಕೊಡಿ: ಆರ್‌ಟಿಓ ಸಭೆ ನಡೆದು 3 ವರ್ಷಗಳಾಗಿದೆ. ಬಸ್‌ಗಳ ಪರ್ಮಿಟ್ 3 ವರ್ಷಕ್ಕೊಮ್ಮೆ ನವೀಕರಣವಾಗಬೇಕು. ಸಭೆ ಆಗದ ಹಿನ್ನೆಲೆಯಲ್ಲಿ ಪರ್ಮಿಟ್ ಪೆಂಡಿಂಗ್ ಆಗಿದೆ. ಹಾಗಾಗಿ ಇದಕ್ಕೆ ಅಧ್ಯಕ್ಷರಾಗಿರುವ ಜಿಲ್ಲಾಧಿಕಾರಿ, ಆರ್‌ಟಿಓ ಹಾಗೂ ಎಸ್‌ಪಿಯವರು ಈ ಬಗ್ಗೆ ಗಮನಹರಿಸಿ ಮೀಟಿಂಗ್ ಕರೆದು ಪರ್ಮಿಟ್ ರಿನೀವಲ್ ಮಾಡಿಕೊಡಲು ಕ್ರಮ ವಹಿಸುವಂತೆ ಮನವಿ ಮಾಡಿದರು.

ಸಂಘದ ಉಪಾಧ್ಯಕ್ಷ ಪಿ.ಪುಟ್ಟರಾಜು ಮಾತನಾಡಿ, ಬೆಲೆ ಏರಿಕೆ, ಕೊರೊನಾ ಹೊಡೆತದಿಂದ ಖಾಸಗಿ ಬಸ್‌ಗಳು ಹಲವೆಡೆ ಸಂಚಾರ ಸ್ಥಗಿತಗೊಳಿಸಿವೆ. ತಿ.ನರಸೀಪುರ, ಕೊಳ್ಳೇಗಾಲ ಭಾಗದಲ್ಲಿ ಮಾತ್ರವೇ ಖಾಸಗಿ ಬಸ್‌ಗಳು ಸಂಚಾರ ಮಾಡುತ್ತಿವೆ. ಮಂಡ್ಯದಲ್ಲಿ ಖಾಸಗಿ ಬಸ್‌ಗಳು ಸಂಚಾರ ನಿಲ್ಲಿಸಿವೆ. ಬೇರೆ ಜಿಲ್ಲೆಗಳಲ್ಲಿ ಬೆರಳೆಣಿಕೆ ಬಸ್‌ಗಳು ಮಾತ್ರ ಓಡಾಡುತ್ತಿವೆ.

ಹಾಗಾಗಿ ನಾವು ಜಿಲ್ಲಾಧಿಕಾರಿಗಳಿಂದ ಅಪ್ಪಣೆ ಪಡೆದು ನಿಗದಿಪಡಿಸಿದ್ದ ಹಳೆ ದರಗಳನ್ನು ಪ್ರಯಾಣಿಕರು ಕೊಡುವ ಮೂಲಕ ಖಾಸಗಿ ಬಸ್‌ಗಳನ್ನು ಉಳಿಸಬೇಕಿದೆ. ಅಲ್ಲದೇ ಪ್ರಯಾಣಿಕರು ನಮ್ಮ ಕೆಲಸಗಾರರಿಗೆ ಪ್ರೋತ್ಸಾಹ ನೀಡಬೇಕು. ಪ್ರಯಾಣದ ವೇಳೆ ದರ ನಿಗದಿಗೆ ಸಂಬಂಧಿಸಿದಂತೆ ಗಲಾಟೆ ಮಾಡಿಕೊಳ್ಳಬಾರದು ಎಂದು ಮನವಿ ಮಾಡಿದರು.

RT NAGAR
30x40, 40x60, 50x80
Sites & Villas
Fully Developed
MUDA Approved
76767 71396

SITE FOR SALE
MUDA Approved
Behind Mysore Airport
Bank Loan Available
For Visit Call
90719 66999

SITES FOR SALE
MUDA APPROVED
20x30 & 20x40
@ Vinayaka Green City
Behind M.S. Ramaiah Layout, Vijayanagar 4th Stage, Sahukar Hundi, adjacent to Sourish Layout.
Call: 9900466811

ಹೊಸ ಮನೆ ಮಾರಾಟಕ್ಕಿದೆ
20x30 ಗ್ರೌಂಡ್, ಫಸ್ಟ್ ಫ್ಲೋರ್, ಇಟಲಿ ಕಿಚನ್, ವಾರ್ಡ್ರೋಬ್, ಸಿಸಿ ಕ್ಯಾಮೆರಾ, ಸೋಲಾರ್ ಚಿಮ್ನಿ, ರೈಲ್ವೆ ಲೇಔಟ್, ಶ್ರೀನಗರ ಹತ್ತಿರ ಜೆ.ಪಿ. ನಗರ, ಮೈಸೂರು
Mob: 99003-72013

ಡಿಟಿಸಿಪಿ ಯಿಂದ ಮಾನ್ಯತೆ
ನಿವೇಶನಗಳು
ಕೇವಲ 3.99/- ಲಕ್ಷದಿಂದ
ರಾಷ್ಟ್ರೀಯ ಹೆದ್ದಾರಿ-275
ಮೈಸೂರು - ಮಡಿಕೇರಿ ರಸ್ತೆ
ಮೊ 98 4567 80 80
9108 77 11 77

BOOKINGS OPEN FOR
Construction of Brand New Architecture Designed Houses
Architect Designed New Houses
MUDA APPROVED
20'x40' - 27.5 Lakhs
30'x40' - 40 Lakhs
Near St. Joseph's Central School, Hunsur Road, Mysore.
88840-01233 / 99865-37600

Ready For Registration **MUDA Approved SITES FOR SALE**
KBL Silicon City Layout
Near Infosys, NIEIT College, BEML, L&T
Approved Banks: ICICI, HDFC, SBI
Bank loan available upto 70%
33x60 Commercial Corner Site, S/E
SITE FOR SALE at KBL Century Lingambudi Village, Srirampura, Mysore 40x62 Comml. Corner
Mob: 9686573798

ಜನಾನುರಾಗಿಯಾಗಿ, ಸ್ನೇಹಮಯಿಯಾದ ನಿಮಗೆ ತಾಯಿ ಚಾಮುಂಡೇಶ್ವರಿ ಆಯಸ್ಸು, ಆರೋಗ್ಯ ಅಂತಸ್ತು, ರಾಜಕೀಯ ಶಕ್ತಿ ಕರುಣಿಸಲಿ ಎಂದು ಹಾರೈಸುತ್ತೇವೆ

ರಾಜಕೀಯ ರವಿಕುಮಾರ್
ರವರಿಗೆ
ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು

ನಾಗೇಂದ್ರ ಶಾಸಕರು
ಚಾಮರಾಜ ವಿಧಾನಸಭಾ ಕ್ಷೇತ್ರ

ಕುಮಾರ್‌ಗೌಡ
ಉಪಾಧ್ಯಕ್ಷರು,
ಭಾರತೀಯ ಜನತಾ ಪಾರ್ಟಿ
ಚಾಮರಾಜ ವಿಧಾನಸಭಾ ಕ್ಷೇತ್ರ

ರಾಜಕೀಯ ರವಿಕುಮಾರ್ ನಿರ್ದೇಶಕರು,
ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್
ಉಪಾಧ್ಯಕ್ಷರು, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘ
ಮೊ: 9731560007

ಶುಭಕೋರುವವರು :
ನಿತಿನ್‌ಕುಮಾರ್ ಮಿಥ್ಥಲ್
ಫೆಲಿಕ್ಸ್ ಜೋನ್ ಪ್ರೈವೇಟ್ ಲಿಮಿಟೆಡ್

ACCURATE ACADEMY®
We are Born to Teach
ADMISSIONS OPEN FOR COACHING CLASSES
- NEET & CET & JEE (Long Term & Crash Course)
- 1st & 2nd PUC (Science & Commerce)
- DIRECT 2nd PUC
- 8th, 9th & 10th Std. (State & CBSE)

Branch-1: Accurate Academy, City Branch
Branch-2: Accurate Academy, Kuvempunagar
Contact: 7899907050

HIRING FOOTBALL HEAD COACH
For an upcoming Premium Football Club in Mysuru.
AIFF License is not Mandatory
Preference will be given to candidates with previous experience at District or State Level
If you are the best to lead the pack in all circumstances.
Position open for Male & Female.
Mail your resume along with your cover letter to
recruitmentfc2022@gmail.com

S.G.B.S. INSTITUTION
LOWER PRIMARY • HIGHER PRIMARY • HIGH SCHOOL
Madalli, Bannikuppe, Hunsur Taluk, Mysore Dist. -571105
(ENGLISH MEDIUM)
TEACHERS REQUIRED
English, Hindi, Kannada, Science, Maths, Social Science - As per qualification
Drivers : 3-4 years Experience with DL & Badge
Attractive Salary offered to Experienced Candidates
WALK-IN INTERVIEW ON
18 - 04 - 2022 Monday @ 11.30 am
Call: 96066 11335, 80503 02005

A Reputed Business House in Mysore is looking for the following positions:
a) Senior Procurement Manager (10 + years of experience)
b) Purchase Officer (5 + years of experience)
c) Senior HR Manager (10 + years of experience)
d) Accounts Manager (5 + years of experience)
e) Graphic Designer - With video editing skills

Please mention the position you're applying and e-mail your resumes to:
mysuruopenings@gmail.com

ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಯ ವ್ಯವಸ್ಥಾಪಕ ಸಮಿತಿ ಚುನಾವಣೆ

2022–2023ನೇ ಸಾಲಿನ ಆಡಳಿತ ಮಂಡಳಿಯ ಚುನಾವಣೆ
Election to the Managing Committee for the year 2022-2023
Please Vote for the Following Persons for the below Mentioned Post
ಈ ಕೆಳಕಂಡ ಅಭ್ಯರ್ಥಿಗಳಿಗೆ ಮತ ಚಲಾಯಿಸಬೇಕೆಂದು ಕಳಕಳಿಯ ಮನವಿ ಮಾಡಿಕೋಳ್ಳುತ್ತೇವೆ

No.	Name	Details
For the Post of President		
2	ಲಿಂಗರಾಜು ಕೆ. ಬಿ Lingaraju K. B	Director, Mysore Chamber of Commerce & Industry; Secretary, KIADB Manufacturers Association; President Bharat Seva Dal, Mysore Taluk; President, Krushika Samaj Mysore Dist.
For the Post of Vice-President		
3	ಆನಂದ್ ಆರ್ Anand. R	President, Mysore Merchant's Co-operative Bank, Secretary, Mysore Grain Merchants Association, Secretary, D.A.V Public School, Mysuru; Secretary, S.V.M. P.U. College, Mysuru
For the Post of Hon. Secretary		
5	ಶಿವಾಜಿ ರಾವ್ ಎ. ಕೆ Shivaji Rao A. K	Partner, M/S SINDHUR; Imm.Past President-Mysore District Distributors Association, Ex. Invitee-FKCCI; Invitee- MCCI
For the Post of Hon. Joint Secretary		
8	ವಿನೋದ್ ಜೈನ್ Vinod Jain	Proprietor, Sri Rajshree Industries, Director, Sri Rajasthan Marbles; Hon. Secretary, Mysore District. Granite Manufacturers Association; Ex. Vice President, The Mysore Pinjarapole Society; Ex. Invitee-FKCCI, Bangalore
For the Post of Hon. Treasurer		
9	ಅಶೋಕ್ ಎಸ್. ಜೆ Ashok S. J	Secretary - Mysore Travels Association; Past Vice-President MTA, Working President Karnataka State Government Guide Association, Invitee -MCCI.

Please Vote for the below mentioned 12 Persons for the Post of Managing Committee Members

No.	Name	Details
11	ಅಚ್ಯುತ ಎಸ್ Achutha S	Chartered Accountant, Past Treasurer-MCCI; Past Chairman-Mysore branch of SIRC of ICAI, Past Member of Direct Tax Committee of FKKCI, Bangalore
13	ಬನ್ಸಾಲಿ ಎಂ. ಸಿ Bhansali M. C	Presently Treasurer and Past Secretary of MCCI Mysore; Past Chairman of SIRC of ICSI Mysore Chapter; Secretary of Jain Milan Dialysis Center
15	ಗಣೇಶ್ ಸಿ. ಕೆ Ganesh C. K	Director, FKCCI, Bangalore; Director, The Mysore Grain Merchant Association, Mysore; Trustee, Sri Krishna Lalithakalamindara, Mysore
17	ಜಯಂತ್ ಎನ್. ಹೆಚ್ Jayanth N. H	CEO, Baba Group of Industries; President, Hebbal Industrial Estate Manufacturers Association (HIEMA); Vice-President, Mysore Chamber of Commerce & Industry
18	ಕುಮಾರ್ ಪಿ Kumar P	Proprietor - Natural Icecreams; Director of KASSIA credit co-operative society; Joint Secretary of MDSSI association
19	ಕುಮಾರ ಸ್ವಾಮಿ ಎಸ್ Kumara Swamy S	Proprietor, Kumar Medicals; President, Mysore District Chemist and Druggist Association
20	ಮಹದೇವ್ ಎಸ್ Mahadev S	Proprietor, Suputra Traders; President, Devaraja Market association, Mysore; Gen. Secretary, Sri Jayachamaraja Wodeyar Wrestling Association, Mysore
23	ನಾರಾಯಣಗೌಡ ಸಿ Narayanagowda C	Proprietor, Hotel Vishnu Bhavan Groups; President, Hotel Owner's Association {R} Mysuru; President, The Cosmopalitan Club {R}
24	ರಮೇಶ್ ಆರ್. ಎನ್ Ramesh R. N	President -Mysore Textiles and Ready made Garment Merchants Association.; Invitee-MCCI
26	ಶಾಮಸುಂದರ್ ಕೆ. ಟಿ Shamsundar K. T	Vice-President, 'B' Block Merchant Association; Treasurer, The Mysore Grain Merchant Association
28	ಶ್ರೀಶೈಲ ರಾಮಣ್ಣವರ್ Shreeshail Ramannavar	Present Hon Secretary MCCI; Former M.C Member FKCCI; Hon. Treasurer of Vidyavardhaka Institutions, Mysore
29	ಶ್ರೀವತ್ಸ ಆರ್. ಎಂ Srivatsa R. M	Secretary, Sri Sharada Public School; Joint Secretary and Legal Cell Head of Private School Management Association (CISPMAM)

Below mentioned 3 Persons have been unanimously elected from our group
- ರಾಧಾಕೃಷ್ಣ ಶಾಸ್ತ್ರಿ Radhakrishna Shastry — Secretary of Private School Management Association (CISPMAM)
- ರವೀಂದ್ರ ಕುಮಾರ್ ಬಿ. ಎಸ್ Ravindra Kumar B. S — Past President-Bannur municipal council, Director-MCCI
- ಪದ್ಮನಾಭ ಡಿ Padmanabha D — President-Mysore & Chamarajnagar Dist. Industrial wholesale merchant co-operative Society.

CRASH COURSE
VIBRANT PROFESSIONAL ACADEMY
Announcing the Commencement of
- CA - Intermediate • CA - Foundation
- CMA - Intermediate (10 Days for all subjects)

For May / June 2022 Examination
Date : 21st to 30th April 2022 | Timing : 9.00am to 5.00pm
Enquiry : 9606 57 9606 / 9606 87 8055

JOB OPPORTUNITY
1. CASHIER (M/F)
Qualification : PUC Pass, Knowledge of computer is Essential, Experienced & to work Till 9.00pm
2. DATA ENTRY OPERATOR (M/F)
Good Typing speed with Knowledge of MS Excel & MS Word

Interested candidates can Walk-in for an interview at below mentioned address
Mohan Bhandar® Super Market
Sayyaji Rao Road, Mysore

HYLAND PROPERTIES
Hunsur-Mysore Highway, Mysuru
NISARGA PARADISE
DEVELOPED PLOTS
FULLY DEVELOPED
READY FOR REGISTRATION



BANK LOAN Available
HDFC BANK
LIC HFL
ICICI Bank
EXCITING OFFERS CALL US
HURRY!! FEW LEFT
9513301854
9513301855

Science Result 100%
ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ). ಕುವೆಂಪುನಗರ, ಮೈಸೂರು
Sri Adichunchanagiri Shikshana Trust ® Kuvempunagar, Mysuru
Commerce Result 100%

ಬಿಜಿಎಸ್ ಪದವಿಪೂರ್ವ ಕಾಲೇಜು ಕುವೆಂಪುನಗರ, ಮೈಸೂರು
BGS PU COLLEGE Kuvempunagar, Mysuru

600ಕ್ಕೆ 600 ಅಂಕಗಳನ್ನು ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳು (2021)

ವಿಜ್ಞಾನ ವಿಭಾಗ PCMB
Akshitha K. 600, Deekshitha B.M. 600, K.V.Priyadarshini 600, Manasa B.M. 600, Manya C.D. 600, Rohini T.S. 600, Sanjana B. 600, Sneha B.S. 600, Chandana M. 600, Likhith Kumar B.J. 600, Preetham Raj GowdaA 600

PCMC
Preethi R. 600, Pravard M. 600

Free Admission 98% and above in 10th Std.

ವಾಣಿಜ್ಯ ವಿಭಾಗ EBAC
Srusti A. Donthi 600, Naveen B.K. 600, Arjun H.K. 600

Admissions Open for 2022-23
1st PUC
Science (PCMB, PCMC)
Integrated Coaching for NEET / JEE & CET
Commerce (EBAC, EGBA)
Hostel Facility for GIRLS & BOYS
For Admission Contact
6361581460, 9845376685

NEET TOPPER 2021
Hearty Congratulations
All India Rank 1577
State Rank 88
NEET MARKS 670/720
Varun S.

BGS FIRST GRADE COLLEGE
Hearty Congratulations
Mysore University
First Rank in B.Sc.
5 Gold Medals & 7 Cash Prizes
For Highest Marks in B.Sc. (CBZ) Chemistry & Zoology
Anvitha G. B.Sc. (CBZ)

Admissions Open for Degree 2022-23
B.Sc. (CBZ, PCM, PMCs) B.C.A. B.Com.
Hostel Facility for GIRLS only
For Admission Contact
9611317301
Dr. R.S. Narasegowda, M.Sc., Ph.D.
Administrative Officer
M : 99646 44060